22 March 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹೂವಿನ ಸುಗಂಧ ಗಾಳಿ ಬಂದ ಕಡೆಗೆ ಮಾತ್ರ ಪಸರಿಸುತ್ತದೆ! ಆದರೆ ಮನುಷ್ಯನ ಒಳ್ಳೆಯ ನಡುವಳಿಕೆ ಎಲ್ಲಾ ಕಡೆಗೂ ಹರಡುತ್ತದೆ!

-ಸ್ನೇಹಾ ಆನಂದ್



ಮೈಸೂರಿನಲ್ಲಿ ಕಳೆಗಟ್ಟಿದ ರಂಜಾನ್ ಹಬ್ಬದ ಸಂಭ್ರಮ — ಪುಟ ಸಂ. 2



ರೇವಣಸಿದ್ದೇಶ್ವರರ ಬಗ್ಗೆ ಸಂಶೋಧನೆ, ಅಧ್ಯಯನ ಅಗತ್ಯ — ಪುಟ ಸಂ. 3



ಆತ್ಮ, ದೇಹ ಶುದ್ದೀಕರಿಸುವ ರಂಜಾನ್: ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 128 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸರ್ಕಾರಿ ಶಾಲೆಗೆ ವಿದೇಶಿ ವಿದ್ಯಾರ್ಥಿ ಬಲ

- 4 ಕೋಟಿಯಲ್ಲಿ ಹೈಟೆಕ್ ಸ್ಪರ್ಶ
- ಎಲ್‌ಕೆಜಿ–ಯುಕೆಜಿ ಪ್ರಾರಂಭಕ್ಕೂ ಚಿಂತನೆ

**ವರ್ತಮಾನ ವಿಶೇಷ**


**ಮೈಸೂರು:** ಕೊಂಚ ಪಕ್ಕದೂರಿಗೆ ವರ್ಗಾವಣೆಗೊಂಡರು ಹುಟ್ಟಿದೂರನ್ನೇ ಮರೆಯುವ ಈ ಕಾಲದಲ್ಲಿಯೂ ವಿದೇಶದಲ್ಲಿ ನೆಲೆಸಿದಿ ಹಿರಿಯ ವಿದ್ಯಾರ್ಥಿ ಬಲದ ನೆರವಿನಿಂದ ಮೈಸೂರು ನಗರದ ಸರ್ಕಾರಿ ಪ್ರಾಥಮಿಕ ಶಾಲೆಯೊಂದರ ಸಂಪೂರ್ಣ ಚಿತ್ರಣ ಬದಲಾಗಿದೆ.

ಹೌದು ಇಂತಹದೊಂದು ಮನ್ವಂತರ ಚಿಗುರೊಡೆದಿರುವುದು ಲಕ್ಷ್ಮಿಪುರಂನಲ್ಲಿರುವ ಗಾಡಿಚೌಕದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಾಗಿದೆ. ಬರೋಬ್ಬರಿ 1918ರಿಂದಲೂ ಪ್ರಾರಂಭಗೊಂಡಿರುವ ಸದರಿ ಶಾಲೆಯಲ್ಲಿ 1ರಿಂದ 7ರವರೆಗೆ ಕಲಿಕೆಗೆ ಅವಕಾಶವಿದೆ. ಆದರೆ, ಸೌಲಭ್ಯಗಳ ಕೊರತೆ, ಪೋಷಕರ ನಿರಾಸಕ್ತಿಯಿಂದಾಗಿ ಒಂದಂಕಿಗೆ ಇಳಿದಿದ್ದ ಶಾಲೆ ಮುಚ್ಚುವ ಹಂತವನ್ನು ತಲುಪಿತ್ತು. ಅಂತಹ ಶಾಲೆಯ ಚಿತ್ರಣವೇ ಈಗ ಬದಲಾಗಿ ಯಾವುದೇ ಖಾಸಗಿ ಶಾಲೆಗೂ ಕಮ್ಮಿ ಇಲ್ಲ ಎಂಬಂತೆ ಸೆಡ್ಡು ಒಡೆದು ನಿಂತಿದೆ.



2016ರಲ್ಲಿ ರವಿಕುಮಾರ್ ಈ ಶಾಲೆಗೆ ಮುಖ್ಯೋಪಾದ್ಯಾಯರಾಗಿ ಬಂದ ವೇಳೆ ಕೇವಲ ಆರು ಮಂದಿ ವಿದ್ಯಾರ್ಥಿಗಳು ಒಬ್ಬರೇ ಶಿಕ್ಷಕರಿಂದ ಶಾಲೆ ಮುಚ್ಚುವ ಹಂತಕ್ಕೆ ತಲುಪಿತ್ತು. ಈ ವೇಳೆ 2021ರಲ್ಲಿ ಈ ಶಾಲೆಯ ಹಳೆಯ ವಿದ್ಯಾರ್ಥಿಯಾಗಿದ್ದ ನಿವೃತ್ತ ಕೆಎಎಸ್ ಅಧಿಕಾರಿ ಓಂ ಪ್ರಕಾಶ್ ಅವರ ಬಳಿ ಶಾಲೆ ದುಸ್ಥಿತಿ ಬಗ್ಗೆ ಹೇಳಿಕೊಂಡಿದ್ದಾರೆ. ಇದೇ ಸಮಯಕ್ಕೆ ಓಂ ಪ್ರಕಾಶ್ ಅವರ ಶಾಲಾ ಗೆಳೆಯರಾಗಿದ್ದ ಅಮೆರಿಕಾದ ಚಿಕಾಗೋದಲ್ಲಿ ನೆಲೆಸಿರುವ 1958ರಲ್ಲಿ ಈ ಶಾಲೆಯ ವಿದ್ಯಾರ್ಥಿ ಆಗಿದ್ದ ಸಚ್ಚಿದಾನಂದ ಮೂರ್ತಿ ಅವರಿಗೂ ಶಾಲಾ ದುಸ್ಥಿತಿ ವಿಚಾರ ಕೇಳಿ ಬಂದಿದೆ. ಈ ವೇಳೆ ತಾವು ಓದಿದ ಶಾಲೆಗೆ ಏನಾದರೂ ಕೊಡುಗೆ ನೀಡಬೇಕೆಂಬ ಹಂಬಲ ವ್ಯಕ್ತಪಡಿಸಿದ್ದಾರೆ. ಇದರ ಫಲವಾಗಿಯೇ ಇಂದು ಶಾಲೆಗೆ ಬಹುದೊಡ್ಡ ಬಲ ಬಂದಂತೆ ಆಗಿದೆ.

ಹೌದು ಅಂದಿನಿಂದ ಈವರೆಗೂ 4 ಕೋಟಿ ವೆಚ್ಚದಲ್ಲಿ 7 ಹೈಟೆಕ್ ಕೊಠಡಿ, 1ಅಡುಗೆ ಕೊಠಡಿ, ಸಭಾಂಗಣ, ಹೈಟೆಕ್ ಶೌಚಾಲಯ, ಕಂಪ್ಯೂಟರ್ ಕೊಠಡಿ, 24 ತಾಸೂ ಶುದ್ಧ ಕುಡಿಯುವ ನೀರು ಸೇರಿ ಶಾಲೆಗೆ ಬೇಕಾದ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಒದಗಿಸಲಾಗಿದೆ. ಮುಂದಿನ ತಿಂಗಳು ಇವೆಲ್ಲದರ ಉದ್ಘಾಟನೆಗೂ ಸಜ್ಜಾಗುವ ಮೂಲಕ ಖಾಸಗಿ ಶಾಲೆಗೆ ಸೆಡ್ಡು ಹೊಡೆಯುವಷ್ಟೂ ಪುಟ 2ಕ್ಕೆ



‘ಹಿರಿಯ ವಿದ್ಯಾರ್ಥಿಯಾದ ಡಾ. ಸಚ್ಚಿದಾನಂದ ಮೂರ್ತಿಯವರ ಸಹಕಾರವನ್ನು ಎಂದೆಂದಿಗೂ ಮರೆಯುವಂತಿಲ್ಲ. ಶಾಲೆಗೆ 4ಕೋಟಿವರೆಗೂ ನೆರವು ನೀಡಿದ್ದು, ಮುಂದಿನ ತಿಂಗಳು ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಿದ್ದೇವೆ. ಅವರಿಂದಲೇ ಎಲ್ ಕೆಜಿ, ಯುಕೆಜಿ ಹಾಗೂ ದ್ವಿಭಾಷಾ ನೀತಿಗೂ ಚಾಲನೆ ಸಿಗಲಿದೆ. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಇಂತಹವರ ನೆರವು ಮುಖ್ಯ.

**ಎಸ್.ರವಿಕುಮಾರ್** ಶಾಲಾ ಮುಖ್ಯ ಶಿಕ್ಷಕ

# ಯಾರ ಬೆದರಿಕೆಗೂ ಮಣಿಯಲ್ಲ

## ಕಾಂಗ್ರೆಸ್ ಒಂದು ಸಮದಾಯ ನೆಚ್ಚಿಕೊಂಡಿಲ್ಲ: ಸುರ್ಜೇವಾಲ





**ಬೆಂಗಳೂರು:** ಕಾಂಗ್ರೆಸ್ ಪಕ್ಷ ಯಾವುದೇ ಒಂದು ಸಮುದಾಯವನ್ನು ನೆಚ್ಚಿಕೊಂಡಿಲ್ಲ. ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲುವ ವಿಶ್ವಾಸವಿದೆ ಎಂದು ರಾಜ್ಯ ಉಸ್ತುವಾರಿ ರಂದೀಪ್ ಸುರ್ಜೇವಾಲ ಅಭಿಪ್ರಾಯಪಟ್ಟರು.

ಟಿಕೆಟ್ ನೀಡದಿದ್ದರೆ ಬಂಡಾಯವಾಗಿ ಸ್ಪರ್ಧಿಸಲು ಅಭ್ಯರ್ಥಿಯ ಸಮುದಾಯದ ನಾಯಕರೊಬ್ಬರು ಬೆದರಿಕೆ ಹಾಕಿರುವ ಬಗ್ಗೆ ಪ್ರಶ್ನೆಗೆ ಉತ್ತರಿಸಿದ ಅವರು, ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ಕರೆದೊಯ್ಯಲಾಗುವುದು. ಯಾವುದೇ ಒಂದು ಸಮುದಾಯದ ಬೆದರಿಕೆಗೆ ಮಣಿಯಲ್ಲ ಎಂದು ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರಗಳ ಉಪಚುನಾವಣೆಗೆ ಕಾಂಗ್ರೆಸ್ ಟಿಕೆಟ್ ನಾಳೆ ಬೆಳಗ್ಗೆ ಒಳಗೆ ಘೋಷಣೆ ಮಾಡುತ್ತೇವೆ ಎಂದು ರಣದೀಪ್ ಸುರ್ಜೇವಾಲಾ ತಿಳಿಸಿದರು.

ಟಿಕೆಟ್ ವಿಚಾರವಾಗಿ ವ್ಯಾಪಕವಾಗಿ ಚರ್ಚೆ ಮಾಡಲಾಗಿದೆ. ಯಾವುದೇ ಒಬ್ಬ ಕಾರ್ಯಕರ್ತರ ಅಪಸ್ವರ ಇದ್ದರೂ ಕೂಡ ಪರಿಗಣನೆಗೆ ತೆಗೆದುಕೊಂಡಿದ್ದೇವೆ. ಶುಕ್ರವಾರ ತಡರಾತ್ರಿಯವರೆಗೂ ಟಿಕೆಟ್ ವಿಚಾರವಾಗಿ ಚರ್ಚೆ ಮಾಡಿದ್ದೇವೆ. ಎಲ್ಲರ ಅಭಿಪ್ರಾಯಗಳನ್ನ ಕೇಳಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಇನ್ನು ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್ ಪ್ರತಿಕ್ರಿಯಿಸಿ, ಯಾರ್‍ಯಾರು ಆಕಾಂಕ್ಷಿಗಳು ಇದ್ದಾರೆ ಎಲ್ಲರೂ ಹೋಗಿ ಸಿಎಂ, ಡಿಸಿಎಂ, ಸುರ್ಜೇವಾಲಾ, ಖರ್ಗೆ ಭೇಟಿ ಆಗಿದ್ದಾರೆ. ನಮ್ಮ ವೀಕ್ಷಕರು ಹೋಗಿ ಸರ್ವೇ ಮಾಡಿದ್ದಾರೆ. ಪುಟ 2ಕ್ಕೆ









### ಜಮೀರ್ ಅಹಮ್ಮದ್ ರಾಜೀನಾಮೆ ಬೆದರಿಕೆ?

ರಾಜ್ಯದಲ್ಲಿ ಉಪಚುನಾವಣೆ ಕಣ ಕಾವೇರಿರುವಂತೆಯೇ ಟಿಕೆಟ್ ಗಾಗಿ ಜಟಾಪಟಿ ಜೋರಾಗಿದೆ. ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ಘೋಷಣೆಗೆ ಕ್ಷಣಗಣನೆ ಆರಂಭವಾಗಿರುವಂತೆಯೇ ನಮಗೇ ಟಿಕೆಟ್ ಬೇಕು ಎಂದು ಮುಸ್ಲಿಂ ಸಮುದಾಯದ ಮುಖಂಡರು ಪಟ್ಟು ಹಿಡಿದಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅನ್ನು ಮುಸ್ಲಿಂ ನಾಯಕರಿಗೆ ನೀಡಬೇಕು ಎಂದು ಜಮೀರ್ ಪಟ್ಟು ಹಿಡಿದಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರ ಜನಸಂಖ್ಯೆ ಹೆಚ್ಚಿದೆ. ನಮ್ಮ ಸಮುದಾಯಕ್ಕೆ ಟಿಕೆಟ್ ನೀಡಲು ಮೌಲ್ವಿಗಳು, ಮುಸ್ಲಿಂ ಪ್ರಮುಖರು ಆಗ್ರಹಿಸಿದ್ದಾರೆ. ಹೀಗಾಗಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಪುಟ 2ಕ್ಕೆ

### ಲಿಂಗಾಯತ ಕಾಂಗ್ರೆಸ್ ನಾಯಕರ ಅಸಮಾಧಾನ

**ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಹಂಚಿಕೆ ವಿಚಾರ ಕಾಂಗ್ರೆಸ್ ಹೈಕಮಾಂಡ್‌ಗೆ ತಲೆನೋವಾಗಿದೆ. ಮುಸ್ಲಿಂ ಸಮುದಾಯದ ನಾಯಕರ ವಿರುದ್ಧ ಲಿಂಗಾಯತ ಸಮುದಾಯದ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಪುಟ 2ಕ್ಕೆ

## ಕನ್ನಡದ ಶ್ರೀ ಚಾಮುಂಡೇಶ್ವರಿ ಗೀತೆ ಹಂಚಿಕೊಂಡ ಮೋದಿ



**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರು ಚೈತ್ರ ನವರಾತ್ರಿ ಪ್ರಯುಕ್ತ ಕನ್ನಡದ ಭಕ್ತಿ ಗೀತೆಯೊಂದನ್ನು ತಮ್ಮ ಸಾಮಾಜಿಕ ತಾಣದಲ್ಲಿ ಹಂಚಿಕೊಂಡು ಜನತೆಗೆ ಶುಭಕೋರಿದ್ದಾರೆ. ಡಾ.ರಾಜಕುಮಾರ್ ಅಭಿನಯದ ಕನ್ನಡದ ಪ್ರಸಿದ್ಧ ಶ್ರೀ ಕೃಷ್ಣದೇವರಾಯ ಸಿನಿಮಾದ ಶ್ರೀ ಚಾಮುಂಡೇಶ್ವರಿ, ಅಮ್ಮ ಶ್ರೀ ಚಾಮುಂಡೇಶ್ವರಿ ಎಂಬ ವಿಡಿಯೊ ಭಕ್ತಿಗೀತೆಯ ಯೂಟ್ಯೂಬ್ ಲಿಂಕ್‌ನ್ನು ಪ್ರಧಾನಿ ಹಂಚಿಕೊಂಡಿದ್ದಾರೆ.

ವಿಶ್ವಮಾತೆಯ ಮೇಲಿನ ಅಚಲ ನಂಬಿಕೆಯು ಆಕೆಯ ಭಕ್ತರಲ್ಲಿ ಹೊಸ ಪ್ರಜ್ಞೆ ಮತ್ತು ಚೈತನ್ಯವನ್ನು ತುಂಬುತ್ತದೆ ಎಂದು ಮೋದಿ ಅವರು ಚೈತ್ರ ನವರಾತ್ರಿ ಶುಭಾಶಯಗಳನ್ನು ಜನತೆಗೆ ತಿಳಿಸಿದ್ದಾರೆ.

ಬಿ.ಆರ್.ಪಂತಲು ಅವರು ನಿರ್ದೇಶಿಸಿದ್ದ ಶ್ರೀ ಕೃಷ್ಣದೇವರಾಯ ಸಿನಿಮಾ 1970ರಲ್ಲಿ ಬಿಡುಗಡೆಯಾಗಿ ಜನಪ್ರಿಯವಾಗಿತ್ತು. ಭಾರತೀಯ ಸಂಪ್ರದಾಯದಂತೆ ಯಗಾದಿಯ ಮುಂದಿನ ಒಂಬತ್ತು ದಿನಗಳನ್ನು ಹೆಚ್ಚಾಗಿ ಉತ್ತರ ಭಾರತದಲ್ಲಿ ಚೈತ್ರ ನವರಾತ್ರಿ ಎಂದು ಆಚರಿಸುತ್ತಾರೆ. ಈ ವರ್ಷ ಮಾರ್ಚ್ 19ರಿಂದ ಮಾರ್ಚ್ 27ರವರೆಗೆ ಚೈತ್ರ ನವರಾತ್ರಿ ಆಚರಿಸಲ್ಪಡುತ್ತದೆ. ಮಾರ್ಚ್ 27 ರಂದು ರಾಮ ನವಮಿ ಹಬ್ಬದೊಂದಿಗೆ ಚೈತ್ರ ನವರಾತ್ರಿ ಅಂತ್ಯವಾ ಗುತ್ತದೆ. ಚೈತ್ರ ನವರಾತ್ರಿಯನ್ನು ದಕ್ಷಿಣ ಭಾರತದಲ್ಲಿ ಯುಗಾದಿ ಹಬ್ಬ ಎಂದು ಆಚರಿಸುತ್ತಾರೆ.

### ಮೂರ್ಖರ ಹೇಳಿಕೆಗೆ ಉತ್ತರಿಸಲ್ಲ: ಯತ್ನಾಳ್‌ಗೆ ವಿಜಯೇಂದ್ರ ತಿರುಗೇಟು

**ಬೀದರ್:** ಶಾಮನೂರು ಶಿವಶಂಕರಪ್ಪ ಅವರ ಋಣ ತೀರಿಸಲು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಡಮ್ಮಿ ಅಭ್ಯರ್ಥಿಯನ್ನು ಉಪ ಚುನಾವಣೆಗೆ ನಿಲ್ಲಿಸಿದೆ ಎಂಬ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಕ್ಕೆ ಬಿಜೆಪಿ ರಾಜ್ಯಾಧ್ಯಕ್ಷಬಿ.ವೈ.ವಿಜಯೇಂದ್ರತಿರುಗೇಟು ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬಾಯಿ ಚಪಲಕ್ಕೆ ಮೂರ್ಖರು ಮಾತನಾಡುತ್ತಾರೆ. ಅವರ ಮಾತುಗಳಿಗೆ ನಾನು ಉತ್ತರ ಕೊಡುವ ಅವಶ್ಯಕತೆ ಇಲ್ಲ. ಮತ ಎಣಿಕೆ ಆದ ನಂತರ ಗೊತ್ತಾಗುತ್ತದೆ. ಚಟಕ್ಕೆ, ಚಪಲಕ್ಕೆ ಮಾತನಾಡುವುದು ಬೇರೆ. ನಮ್ಮ ಕಾರ್ಯಕರ್ತರು ಎರಡೂ ಕ್ಷೇತ್ರಗಳ ಉಪ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿ ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಾರೆ ಎಂದರು. ದಾವಣಗೆರೆ ಪುಟ 2ಕ್ಕೆ



### ಸಿದ್ದಗಂಗಾ ಶ್ರೀ ಜಯಂತಿ: ರಾಷ್ಟ್ರಪತಿ ಮುರ್ಮು ಭೇಟಿ

**ತುಮಕೂರು:** ಸಿದ್ದಗಂಗಾ ಶ್ರೀ ಶಿವಕುಮಾರ ಶ್ರೀಗಳ ಜನ್ಮ ದಿನೋತ್ಸವದ ಹಿನ್ನೆಲೆಯಲ್ಲಿ ಏ.1ರಂದು ಸಿದ್ದಗಂಗಾ ಮಠಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸಲಿದ್ದಾರೆ.



ಮಾ.31ರಂದು ಸಂಜೆ ಬೆಂಗಳೂರಿಗೆ ಆಗಮಿಸುವರು. ಅಂದು ರಾಜಭವನದಲ್ಲಿ ತಂಗಲಿದ್ದಾರೆ. ಮಾರನೇ ದಿನ ಏ.1ರಂದು ಬೆಳಗ್ಗೆ ತುಮಕೂರಿನ ಸಿದ್ದಗಂಗಾ ಮಠಕ್ಕೆ ಆಗಮಿಸಲಿದ್ದಾರೆ. ಬಳಿಕ ಸಿದ್ದಗಂಗಾ ಶ್ರೀಗಳ ಗದ್ದಿಗೆ ಪುಟ 2ಕ್ಕೆ

### ಪುಂಡಾನೆ ಹಾವಳಿ: ಆಟೋ ಜಖಂ

**ಮಡಿಕೇರಿ:** ಕುಶಾಲನಗರದ ನೆಲ್ಲಿಹುದಿಕೇರಿ ಗ್ರಾಮದಲ್ಲಿ ಒಂಟಿ ಸಲಗವೊಂದು ಮನೆ ಬಳಿ ನಿಲ್ಲಿಸಿದ್ದ ಆಟೋದ ಮೇಲೆ ದಾಳಿ ನಡೆಸಿ ಪುಡಿಗಟ್ಟಿದೆ. ಬೆಟ್ಟದ ಕಾಡು ನಿವಾಸಿ ಎಚ್.ಟಿ.ಸುನಿಲ್ ಎಂಬವರಿಗೆ ಸೇರಿದ ಆಟೋ ಮೇಲೆ ಕಾಡಾನೆ ದಾಳಿ ಮಾಡಿದೆ. ದಂತದಿಂದ ಗುದ್ದಿದ ಪರಿಣಾಮ ಆಟೋ ಜಖಂಗೊಂಡಿದೆ. ಗ್ರಾಮದ ಶ್ರೀ ಸತ್ಯ ನಾರಾಯಣ ದೇವಾಲಯದ ಸುತ್ತಮುತ್ತ ಸಂಚರಿಸಿ ಕಾಫಿ ತೋಟದೊಳಗೂ ದಾಂಧಲೆ ನಡೆಸಿದೆ. ಪುಟ 2ಕ್ಕೆ

### ಟಿಪ್ಪರ್ ಹರಿದು ಬಾಲಕಿ ಸಾವು

**ಬೆಂಗಳೂರು:** ತಾಯಿಯೊಂದಿಗೆ ದೇವಸ್ಥಾನಕ್ಕೆ ತೆರಳುತ್ತಿದ್ದಾಗ ಲಾರಿ ಹರಿದು 4 ವರ್ಷದ ಬಾಲಕಿ ಸಾವನ್ನಪ್ಪಿದ ಘಟನೆ ಬೆಂಗಳೂರಿನ ಉತ್ತರ ತಾಲ್ಲೂಕಿನ ಹನುಮಂತೇಗೌಡನ ಪಾಳ್ಯದಲ್ಲಿ ನಡೆದಿದೆ. ನಿಶಿಕಾ (4) ಮೃತ ಬಾಲಕಿ.



ತಾಯಿ–ಮಗಳು ದೇವರ ದರ್ಶನಕ್ಕೆಂದು ದೇವಸ್ಥಾನಕ್ಕೆ ತೆರಳುತ್ತಿದ್ದರು. ಎರಡನೇ ಮಗು ಕಂಕುಳ್ಳಲ್ಲಿ ಹಾಗೂ ಮೊದಲ ಮಗುವಿನ ಕೈ ಹಿಡಿದು ತೆರಳುತ್ತಿದ್ದ ವೇಳೆ ಎದುರಿಗೆ ಬರುತ್ತಿದ್ದ ಲಾರಿ ಏಕಾಏಕಿ ಮಗುವಿನ ಮೇಲೆ ಹರಿದಿದೆ. ಅಪಘಾತದ ಪರಿಣಾಮ ಹೆತ್ತ ತಾಯಿಯ ಎದುರೇ ಬಾಲಕಿ ಉಸಿರು ಚೆಲ್ಲಿದ್ದಾಳೆ. ಘಟನಾ ಸ್ಥಳಕ್ಕೆ ಮಾದನಾಯಕನಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

### ಐಪಿಎಲ್ ಕ್ರಿಕೆಟ್ ಟೂರ್ನಿ: ಟಿಕೆಟ್ ಮಾರಾಟ ಮಾಹಿತಿ

**ಬೆಂಗಳೂರು:** 2026ರ ಐಪಿಎಲ್ ಟೂರ್ನಿಗೆ ಕೌಂಟ್ ಡೌನ್ ಶುರುವಾಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೊದಲ ಹಂತದ ಪಂದ್ಯಗಳ ಟಿಕೆಟ್ ಮಾರಾಟ ಸದ್ಯದಲ್ಲೇ ಅಧಿಕೃತವಾಗಿ ಆರಂಭವಾಗಲಿದೆ. ಈ ಬಾರಿ ಆರ್‌ಸಿಬಿ ತನ್ನ ತವರಿನ ಪಂದ್ಯಗಳನ್ನು ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲು ಸರ್ಕಾರದಿಂದ ಅನುಮತಿ ಪಡೆದಿದೆ. ಇದರಿಂದ ಹೋಂ ಗ್ರೌಂಡ್ ಮ್ಯಾಚ್ ವೀಕ್ಷಣೆಗೆ ಟಿಕೆಟ್ ಖರೀದಿಗೆ ಭಾರೀ ಡಿಮ್ಯಾಂಡ್ ಶುರುವಾಗಲಿದೆ.

ಐಪಿಎಲ್ ಟೂರ್ನಿ ಹಿನ್ನೆಲೆ ಚಿನ್ನಸ್ವಾಮಿ ಮೈದಾನದಲ್ಲಿ ಸಿದ್ಧತೆಗಳು ಬಿರುಸುಗೊಂಡಿವೆ. ಇನ್ನೂ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಇನ್ನೆರೆಡು ದಿನದಲ್ಲಿ ಅಧಿಕೃತವಾಗಿ ಟಿಕೆಟ್ ಮಾರಾಟ ಪ್ರಕ್ರಿಯೆಯನ್ನ ಆರಂಭಿಸಲಿದೆ. ಈ ಬಗ್ಗೆ ತನ್ನ ಎಕ್ಸ್ ಖಾತೆಯಲ್ಲಿ ಆರ್‌ಸಿಬಿ ಮಾಹಿತಿ ಹಂಚಿಕೊಂಡಿದೆ. ಆರ್‌ಸಿಬಿ ವೆಬ್‌ಸೈಟ್ ಹಾಗೂ ಆಪ್ ನಲ್ಲಿ ಮಾತ್ರ ಟಿಕೆಟ್‌ಗಳು ಲಭ್ಯವಿರಲಿವೆ ಎಂದು ತಿಳಿಸಿದೆ. ಪುಟ 2ಕ್ಕೆ

### ಯಾವುದೇ ಧರ್ಮ ದ್ವೇಷ ಬೋಧಿಸಲ್ಲ

**ಅರಿತು ಬಾಳಿದರೆ ಸಮಾಜದಲ್ಲಿ ಶಾಂತಿ–ಸೌಹಾರ್ದತೆ: ಸಿದ್ದರಾಮಯ್ಯ**


**ಬೆಂಗಳೂರು:** ಯಾವುದೇ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಎಲ್ಲ ಧರ್ಮಗಳೂ ಪ್ರೀತಿಯನ್ನು ಬೋಧಿಸುತ್ತವೆ. ಇದನ್ನು ಅರಿತು ಬಾಳಿದರೆ ಸಮಾಜದಲ್ಲಿ ಶಾಂತಿ–ಸೌಹಾರ್ದತೆ ನೆಲೆಸಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನಲ್ಲಿ ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಶನಿವಾರ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಾನವಕುಲದ ಒಳಿತಿಗಾಗಿ ಸರ್ವರೂ ಪ್ರಾರ್ಥಿಸುವುದು ಅತ್ಯಂತ ಅವಶ್ಯ. ಮಾನವೀಯತೆಯಿಂದ ಪರಸ್ಪರ ಪ್ರೀತಿ– ವಿಶ್ವಾಸದಿಂದ ಬಾಳುವುದು ಮುಖ್ಯ. ಭಾರತ ದೇಶ ಪುಟ 2ಕ್ಕೆ



### ಮೇಲಾಧಿಕಾರಿ ಕಿರುಕುಳ: ಸಹಾಯಕ ಅಧಿಕಾರಿ ಆತ್ಮಹತ್ಯೆ

**ತುಮಕೂರು:** ಪಾವಗಡ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೇಲಾಧಿಕಾರಿಗಳ ಕಿರುಕುಳಕ್ಕೆ ಬೇಸತ್ತು ವೀಡಿಯೋ ಮಾಡಿ ಸಹೋದ್ಯೋಗಿಗಳಿಗೆ ಕಳಿಸಿ ಕಚೇರಿಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.



ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್ ಆತ್ಮಹತ್ಯೆಗೆ ಶರಣಾದವರು. ಸಾವಿಗೂ ಮುನ್ನ ಮೇಲಾಧಿಕಾರಿಗಳ ಕಿರು ಕುಳವೇ ಸಾವಿಗೆ ಕಾರಣವೆಂದು ವೀಡಿಯೋ ಮಾಡಿ ಸಹೋದ್ಯೋಗಿಗಳಿಗೆ ಕಳಿಸಿದ್ದಾರೆ. ಬಳಿಕ ಪಾವಗಡ ಪಟ್ಟಣದ ಆಪ್ ಬಂಡೆಯಲ್ಲಿರುವ ಕಚೇರಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೀಡಿಯೋದಲ್ಲಿ ತುಮಕೂರು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೃಷ್ಣಪ್ಪ ಅವರ ವಿರುದ್ಧ ಕಿರುಕುಳದ ಆರೋಪ ಪುಟ 2ಕ್ಕೆ

### ನಂಜನಗೂಡು ಶ್ರೀಕಂಠೇಶ್ವರ ಕಲ್ಲು ಮಂಟಪಕ್ಕೆ ಬೆಂಕಿ

**ನಂಜನಗೂಡು:** ಪಟ್ಟಣದ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯ ಹಿಂಭಾಗದಲ್ಲಿರುವ ಶ್ರೀಕಂಠೇಶ್ವರ ಸ್ವಾಮಿ ಕಲ್ಲು ಮಂಟಪಕ್ಕೆ ಅಕಸ್ಮಿಕ ಬೆಂಕಿ ತಗುಲಿದೆ. ಪುರಾತತ್ವ ಇಲಾಖೆ ವ್ಯಾಪ್ತಿಗೆ ಒಳಪಡುವ ಈ ಮಂಟಪ ಸಂಪೂರ್ಣವಾಗಿ ಗಿಡಗಂಟೆಗಳಿಂದ ಆವರಿಸಿದೆ. ಬೇಸಿಗೆಯ ಪರಿಣಾಮ ಒಣಗಿದ್ದ ಸಸ್ಯಗಳಿಗೆ ಬೆಂಕಿ ತಗುಲಿ ಆವರಿಸಿತ್ತು.



ದೇವಾಲಯದ ಹಿಂಭಾಗದ ಪಾರ್ಕಿಂಗ್ ಸ್ಥಳದಲ್ಲಿರುವ ಈ ಮಂಟಪದ ಬಳಿ ಅಕಸ್ಮಿಕವಾಗಿ ಕಾಣಿಸಿಕೊಂಡ ಪುಟ 2ಕ್ಕೆ

### ರಾಜ್ಯ ಸರಕಾರದಿಂದ ಹೊಸ ಜಾಹೀರಾತು ನೀತಿ

# ಪತ್ರಿಕೆಗಳ ದಮನಕ್ಕೆ ಸರ್ಕಾರ ತಯಾರಿ

**ಕರ್ನಾಟಕ ಹೊಸ ಜಾಹೀರಾತು ನೀತಿ ಕೈಬಿಡಲು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಒತ್ತಾಯ**

**ಮೈಸೂರು:** ರಾಜ್ಯ ಸರಕಾರವು ಜಾರಿಗೆ ತರಲು ಮುಂದಾಗಿರುವ ಕರ್ನಾಟಕ ಜಾಹೀರಾತು ನೀತಿ–2026 ವಾರ್ತಾ ಇಲಾಖೆ ಅಧಿಕಾರಿಗಳ ವಕ್ರ ದೃಷ್ಟಿಯ ಹಾಗೂ ಸೇಡಿನ ಮನೋಭಾವ ಒಳಗೊಂಡ ನೀತಿಯಾಗಿದ್ದು, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಪಾಲಿಗೆ ಮರಣ ಶಾಸನವಾಗಿದೆ. ಪತ್ರಿಕೆಗಳು ನಾಶವಾದರೆ ಪ್ರಜಾಪ್ರಭುತ್ವವೂ ನಾಶವಾಗಲಿದೆ ಎಂಬ ಅರಿವು ಸರಕಾರಕ್ಕೆ ಇರಬೇಕು ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಇಂದು ಪತ್ರಕರ್ತರ ಭವನದಲ್ಲಿ ಸಂಘದ ಅಧ್ಯಕ್ಷ ಕೆ.ದೀಪಕ್ ನೇತೃತ್ವದಲ್ಲಿ ನಡೆದ ಪತ್ರಿಕಾ ಸಂಪಾದಕರ ಸಭೆಯಲ್ಲಿ ರಾಜ್ಯ ಸರಕಾರವು ಕರ್ನಾಟಕ ಜಾಹೀರಾತು ನೀತಿಯನ್ನು ಜಾರಿಗೆ ತರಲು ಮುಂದಾಗುವ ಮೂಲಕ ಸಂಕಷ್ಟದಲ್ಲಿರುವ ಪತ್ರಿಕೆಗಳನ್ನು ಮೇಲೆತ್ತುವ ಬದಲು ಕುತ್ತಿಗೆ ಹಿಸುಕಿ ಕೊಲ್ಲಲು ಸಂಚು ರೂಪಿಸಿದೆ ಎಂಬ ಅನಿಸಿಕೆ ಸಭೆಯಲ್ಲಿ ಪತ್ರಿಕಾ ಪುಟ 2ಕ್ಕೆ




**ಸಿಎಂ ಬಳಿಗೆ ನಿಯೋಗ**

ಕರ್ನಾಟಕ ಹೊಸ ಜಾಹೀರಾತು ನೀತಿಯ ನ್ಯೂನ್ಯತೆಗಳ ವಿರುದ್ಧ ರಾಜ್ಯ ಮಟ್ಟದಲ್ಲಿ ಎಲ್ಲ ಪತ್ರಿಕಾ ಸಂಪಾದಕರ ಸಭೆಯನ್ನು ಮಾರ್ಚ್ 24ರಂದು ಬೆಂಗಳೂರಿನಲ್ಲಿ ಕರೆಯಲಾಗಿದ್ದು, ಸಭೆಯ ನಂತರ ಮೈಸೂರು ಜಿಲ್ಲಾ ಪತ್ರಕರ್ತರ ನಿಯೋಗದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಹೊಸ ಜಾಹೀರಾತು ನೀತಿಯಿಂದ ಉಂಟಾಗಿರುವ ಪರಿಣಾಮಗಳನ್ನು ಗಮನಕ್ಕೆ ತರಲು ಸಭೆಯಲ್ಲಿ ನಿರ್ಧರಿಸಲಾಯಿತು. ಪುಟ 2ಕ್ಕೆ

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಜಾಪ್ರಭುತ್ವವಾದಿಗಳು. ಪ್ರಜಾಪ್ರಭುತ್ವ ಉಳಿವಿನಲ್ಲಿ ಪತ್ರಿಕೆಗಳ ಪಾತ್ರ ದೊಡ್ಡದು ಎಂದು ಸದಾ ಹೇಳುವವರು. ಆದರೆ, ಕರ್ನಾಟಕ ಜಾಹೀರಾತು ನೀತಿ–2026 ಮೂಲಕ ಅನವಶ್ಯಕ ಷರತ್ತುಗಳನ್ನು ವಿಧಿಸಿ ಪತ್ರಿಕೆಗಳ ಕುತ್ತಿಗೆ ಹಿಸುಕುವ ಕಾರ್ಯಕ್ಕೆ ಸರಕಾರ ಮುಂದಾಗಿದೆ. ಒಬ್ಬ ಕಳ್ಳನನ್ನು ತಡೆಯಲು ವಿಶ್ವಾಸರ್ಹತೆ ಉಳಿಸಿಕೊಂಡಿರುವ ಇಡೀ ಪತ್ರಿಕಾ ಸಮ್ಹೂಹಕ್ಕೆ ಕೋಳ ತೊಡಿಸಲು ಸರಕಾರ ಮುಂದಾಗಿದೆ. ವಾರ್ತಾ ಇಲಾಖೆಯು ಪೂರ್ವಾಗ್ರಹ ಮನಸ್ಥಿತಿಯಿಂದ ಹೊರ ಬಂದು ಹೊಸ ಜಾಹಿರಾತು ನೀತಿಯನ್ನು ಎಲ್ಲರ ಸಲಹೆ ಪಡೆದು ಪುನರ್ ಪರಿಶೀಲಿಸಬೇಕು. ಪತ್ರಿಕೆಗಳು ನಾಶವಾದರೆ ಪ್ರಜಾಪ್ರಭುತ್ವವೂ ನಾಶವಾಗಲಿದೆ ಎಂಬ ಅರಿವು ಸರಕಾರಕ್ಕೆ ಇರಬೇಕು.

**ಕೆ.ದೀಪಕ್**
ಅಧ್ಯಕ್ಷ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ

# ಧರೆಗುರುಳಿದ ಬೃಹತ್ ಮರ: ವಾಹನಗಳು ಜಖಂ






ಮೈಸೂರು: ಏಕಾಏಕಿ ಬೃಹತ್ ಮರವೊಂದು ರಸ್ತೆಗೆ ಉರುಳಿದ್ದು ಕಾರು, ಆಟೋ ಜಖಂಗೊಂಡು ಕೆಲಸ ಸಂಚಾರ ವ್ಯತ್ಯಯ ಉಂಟಾಗಿ ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗಿಲ್ಲ.

ಸಂಜೆ 4ರ ಸಮಯಕ್ಕೆ ಏಕಾಏಕಿ ಮರವು ನೆಲಕ್ಕೆ ಉರುಳಿದ್ದು, ಸದ್ಯ ಕಾರಿನಲ್ಲಿದ್ದವರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಜತೆಗೆ ನಿಂತಿದ್ದ ಆಟೋ ಸಹ ಸಂಪೂರ್ಣ ಜಖ ಆಗಿದೆ. ಇದು ಹಾರ್ಡಿಂಜ್ ವೃತ್ತಕ್ಕೆ ಸೇರುವ ಮುಖ್ಯ ರಸ್ತೆಯಾಗಿದ್ದ ಹಿನ್ನೆಲೆಯಲ್ಲಿ ರಸ್ತೆಗೆ ಬೃಹತ್ ಮರ ಉರುಳಿದ ಪರಿಣಾಮ ಕೆಲ ಕಾಲ ರಸ್ತೆ ಸಂಚಾರ ಸ್ಥಗಿತಗೊಂಡಿತ್ತು. ವಿಷಯ ತಿಳಿಯುತ್ತಿದ್ದಂತೆ ನಗರಪಾಲಿಕೆಯ ಅಭಯ ತಂಡ ಸ್ಥಳಕ್ಕೆ ಆಗಮಿಸಿ ಮರದ ರೆಂಬೆಗಳನ್ನು ಕತ್ತರಿಸಿದರು. ಅಲ್ಲದೆ, ಇಟಾಚಿ ನೆರವಿನೊಂದಿಗೆ ಬುಡವನ್ನು ರಸ್ತೆಯ ಪಕ್ಕಕ್ಕೆ ಸರಿಸುವ ಕಾರ್ಯಾಚರಣೆ ನಡೆಸಿದರು. ಮಳೆಗಾಲಕ್ಕೂ ಮುನ್ನವೇ ಬೃಹತ್ ಮರವೊಂದು ಧರೆಗುರುಳಿದ್ದು, ಪಾಲಿಕೆ ಇಂತಹ ಮರಗಳನ್ನು ಮುನ್ನೆಚ್ಚರಿಕೆಯಾಗಿ ತೆರವುಗೊಳಿಸಲಿ ಎಂಬುದೇ ಎಲ್ಲರ ಒತ್ತಾಸೆಯಾಗಿದೆ.

# ವಿಕ್ರಾಂತ್ ಪಿ.ದೇವೇಗೌಡ ನಿಧನ

ಮೈಸೂರು: ಮೈಸೂರು ನಗರ ಕಾಂಗ್ರೆಸ್ ಹಾಲಿ ಉಪಾಧ್ಯಕ್ಷರು, ಮೈಸೂರು-ಚಾಮರಾಜನಗರ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷರೂ ಆದ ವಿಕ್ರಾಂತ್ ಪಿ.ದೇವೇಗೌಡ (64) ಶುಕ್ರವಾರ ರಾತ್ರಿ 11.45 ಗಂಟೆ ವೇಳೆಗೆ ಅಪೋಲೋ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಲಕ್ಷ್ಮಿ, ಪುತ್ರ ಶ್ರೀನಿವಾಸ, ಪುತ್ರಿಯರಾದ ಪದ್ಮಾವತಿ, ರೇಖಾ, ಅಳಿಯ ಚಂದನ್, ಮೊಮ್ಮಕ್ಕಳು ಸೇರಿ ಅನೇಕರನ್ನು ಅಗಲಿದ್ದಾರೆ.



ಮೂಲತಃ ಕನ್ನೇಗೌಡನ ಕೊಪ್ಪಲು-ಜಯನಗರದವರಾದರೂ (ಕೆ.ಜಿ.ಕೊಪ್ಪಲು) ಕುವೆಂಪುನಗರದ ಜೋಡಿ ಬಸವ ರಸ್ತೆಯಲ್ಲಿ ನೆಲೆಸಿದ್ದರು. ಶನಿವಾರ ಮಧ್ಯಾಹ್ನ ಕಾವೇರಿ ಸ್ಕೂಲ್ ಪಕ್ಕದ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು. ವಿಕ್ರಾಂತ್ ಟೈರ್ಸ್ (ಹಾಲಿ ಜೆ.ಕೆ.ಟೈರ್ಸ್) ಕಾರ್ಖಾನೆಯಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿದ ನಂತರ ಸ್ವಯಂ ನಿವೃತ್ತಿ ಪಡೆದು ವೆಂಕಟೇಶ್ವರ ಟ್ರೇಡರ್ಸ್ ಹೆಸರಿನ ಪೇಂಟ್ಸ್ ಅಂಗಡಿಯನ್ನು ತೆರೆದು ಕೊನೆಯವರೆಗೂ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ತಮ್ಮ ಹೆಸರಿನ ಮುಂದೆ 'ವಿಕ್ರಾಂತ್ ಸೇರಿಸಿ ಕೊಂಡು ಆತ್ಮೀಯರಲ್ಲಿ ಅತ್ಯಂತ ವಿಶ್ವಾಸಕ್ಕೆ ಪಾತ್ರರಾಗಿ ದ್ದರು. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಕಟ್ಟಾ ಅಭಿಮಾನಿ ಆಗಿದ್ದು, ಅವರ ಹೆಸರಲ್ಲಿ ಅಭಿಮಾನಿ ಬಳಗವನ್ನೇ ಕಟ್ಟಿದ್ದರು. ಆ ಮೂಲಕ ಸಾಕಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಎಸ್.ಎಂ.ಕೃಷ್ಣ ಹಾಗೂ ಅವರ ಕುಟುಂಬ ಮೈಸೂರಿಗೆ ಭೇಟಿ ನೀಡಿದ ವೇಳೆ ಅವರನ್ನು ಉಪಚರಿಸುವುದರಲ್ಲಿ ಗೌಡರು ಸಂಭ್ರಮಿಸುತ್ತಿದ್ದರು. ಎಸ್.ಎಂ.ಕೃಷ್ಣ ಅವರು ಮತ್ತು ಅವರ ಕುಟುಂಬವೂ ಸಹ ಇವರನ್ನು ಅತ್ಯಂತ ಪ್ರೀತಿ-ವಿಶ್ವಾಸದಿಂದ ಕಾಣುತ್ತಾ ಬಂದಿತು.

ಮೃತರ ನಿಧನಕ್ಕೆ ಶಾಸಕ ಕೆ. ಹರೀಶ್‌ಗೌಡ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಎಂ.ಬಿ.ಮಂಜೇಗೌಡ ಸೇರಿ ಅನೇಕರು ಸಂತಾಪ ಸೂಚಿಸಿದ್ದಾರೆ.

ಮೊದಲ ಪುಟದಿಂದ

## ಸರ್ಕಾರಿ ಶಾಲೆಗೆ ಹೈಟೆಕ್ ಸ್ಪರ್ಶ,

ಶಾಲಾ ವಾತಾವರಣ ಬದಲಾಗಿದೆ. ಮಾತ್ರವಲ್ಲದೆ, ಇಂದು ಶಾಲೆಯಲ್ಲಿ ಆರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಶಾಲಾ ದಾಖಲಾತಿಯೂ 60 ಮಕ್ಕಳಿಗೆ ಹೆಚ್ಚಳಗೊಂಡಿದ್ದಾರೆ. ಬಾಲ್ಯ ಫೌಂಡೇಶನ್ ನಿಂದ ಕಂಪ್ಯೂಟರ್‌ಗಳನ್ನು ಒದಗಿಸಿರುವುದರಿಂದ ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳು ಎಲ್ಲವನ್ನೂ ಕಲಿಯಬಹುದಾದ ವಾತಾವರಣ ನಿರ್ಮಾಣಗೊಂಡಿರುವುದು ಮಾದರಿಯಾಗಿದೆ. ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಮಕ್ಕಳೇ ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿರುವ ಈ ಶಾಲೆಯ ಮೂಲಭೂತ ಸೌಕರ್ಯ ಸಿಕ್ಕ ಸಂತಸದಲ್ಲೇ ಈ ಸಾಲಿನಿಂದ ಎಲ್‌ಕೆಜಿ, ಯುಕೆಜಿಯನ್ನು ಪ್ರಾರಂಭಿಸಲು ಮತ್ತು ದ್ವಿಭಾಷಾ ಅನುಸರಿಸಿ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಲು ಚಿಂತನೆ ನಡೆಸಿದೆ. ಹೀಗೆ ವಿದೇಶಿ ಹಿರಿಯ ವಿದ್ಯಾರ್ಥಿಯೊಬ್ಬರ ನೆರವಿನ ಬಲ ಸರ್ಕಾರಿ ಶಾಲೆಯ ಪೂರ್ಣ ಚಿತ್ರಣವನ್ನೇ ಬದಲಿಸಿರುವುದು ಈಗ ನಗರಕ್ಕೆ ಮಾದರಿಯಾಗಿದೆ. ಇಂತಹ ಅವಕಾಶ ಇತರ ಶಾಲೆಗಳಿಗೂ ಸಿಕ್ಕರೆ ಸರ್ಕಾರಿ ಶಾಲೆಗಳು ತಾನಾಗಿಯೇ ಬಲವರ್ಧನೆಗೊಳ್ಳಲಿವೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

## ಪತ್ರಿಕೆಗಳ ದಮನಕ್ಕೆ ಸರ್ಕಾರ ತಯಾರಿ

ಸಂಪಾದಕರು ಕಳವಳ ವ್ಯಕ್ತಪಡಿಸಿದರು. ಸಾಮಾನ್ಯ ವರ್ಗದ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರಲು 2 ವರ್ಷದಿಂದ 3 ವರ್ಷಕ್ಕೆ ಪ್ರಕಟಣಾ ಅವಧಿಯನ್ನು ವಿಸ್ತರಿಸಿರುವುದು ಹಾಗೂ ಪರಿಶಿಷ್ಟ ಜಾತಿ, ವರ್ಗ, ವಿಶೇಷ ಸ್ಥಾನಮಾನ ಹೊಂದಿರುವ ಜಿಲ್ಲೆಗಳ ಪತ್ರಿಕೆಗಳು ಹಾಗೂ ಪ್ರಾದೇಶಿಕ ಭಾಷಾ ಪತ್ರಿಕೆಗಳಿಗೆ ಇದ್ದ 1 ವರ್ಷದ ಪ್ರಸಾರಣ ಅವದಿಯನ್ನು 2 ವರ್ಷಕ್ಕೆ ವಿಸ್ತರಿಸಿರುವುದು ಹೊಸ ಪತ್ರಿಕೆಗಳ ಆರಂಭಕ್ಕೆ ಕಡಿವಾಣ ಹಾಕುವ ಹುನ್ನಾರವಾಗಿದೆ. ಸದ್ಯ ಮಾನ್ಯತಾ ಪಟ್ಟಿಯಲ್ಲಿರುವ ಪತ್ರಿಕೆಗಳ ಮಾನ್ಯತೆಯನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಮಾಧ್ಯಮ ಪರಿಶೀಲನಾ ಸಮಿತಿಯಿಂದ ಪುನರ್ ಪರಾಮರ್ಶಿಸುವುದು, ಪ್ರಾದೇಶಿಕ ಪತ್ರಿಕೆಗಳು ಸ್ವಂತ ಕಛೇರಿ ಮತ್ತು ಮುದ್ರಣಾ ಘಟಕ ಹೊಂದಿರಬೇಕು ಹಾಗೂ ಕನಿಷ್ಠ 15 ಜನ ಖಾಯಂ ನೌಕರರರನ್ನು ಹೊಂದಿರಬೇಕು ಹಾಗೂ ಕನಿಷ್ಠ 6 ಜಿಲ್ಲೆಗಳಲ್ಲಿ 25,000 ಪ್ರತಿಗಳ ಪ್ರಸಾರ ಸಂಖ್ಯೆಯನ್ನು ಹೊಂದಿರಬೇಕು ಎಂದು ಷರತ್ತು ಹಾಕಲಾಗಿದೆ. ಪ್ರಾದೇಶಿಕ ಪತ್ರಿಕೆ ನಡೆಸುತ್ತಿರುವ ಎಲ್ಲರೂ ಪ್ರತ್ಯೇಕ ಮುದ್ರಣ ಘಟಕ ಸ್ಥಾಪಿಸಲು ಸಾಧ್ಯವೆ ? ಎಂದು ಸಭೆಯಲ್ಲಿ ಆಕ್ಷೇಪ ವ್ಯಕ್ತವಾಯಿತು. ಪತ್ರಿಕೆ ಟೈಟಲ್ ವರ್ಗಾವಣೆ ರದ್ದು: ಪತ್ರಿಕೆಯ ಟೈಟಲ್ ವರ್ಗಾವಣೆಯನ್ನು ಕೇವಲ ಕುಟುಂಬಕ್ಕೆ ಸೀಮಿತಗೊಳಿಸುವುದು ಒಂದು ಪತ್ರಿಕೆಯ ಪರಂಪರೆ ಮುಂದುವರಿಕೆಗೆ ಧಕ್ಕೆಯಾಗಲಿದೆ. ಸಂಪಾದಕ ಸತ್ತರೂ ಪತ್ರಿಕೆಗಳು ಸಾಯಬಾರದು. ಪತ್ರಿಕೆಗಳ ಟೈಟಲ್ ವರ್ಗಾವಣೆ ಮಾಡಿದರೆ ಮಾನ್ಯತಾ ಪಟ್ಟಿಯಿಂದ ಕೈಬಿಡುವ ಕ್ರಮವೂ ಸಹ ಪತ್ರಿಕೆ ಮಾಲೀಕನ ಹಕ್ಕುಗಳನ್ನು ಕಸಿದುಕೊಳ್ಳುವಂತಾಗಲಿದೆ. ಹಾಗೂ ಪತ್ರಿಕೆಗಳು ದೀರ್ಘಕಾಲ ಮುದ್ರಣಗೊಳ್ಳಲು ತೊಡಕಾಗಲಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಜಾಹೀರಾತು ದರ ಪರಿಷ್ಕರಣೆ ವಿಷಯದಲ್ಲಿ ಕರ್ನಾಟಕ ಜಾಹೀರಾತು ನೀತಿ-2013 ಅನ್ವಯ ಶೇ. 12ರಷ್ಟು ಜಾಹಿರಾತು ದರವನ್ನು 2 ವರ್ಷಕ್ಕೊಮ್ಮೆ ಪರಿಷ್ಕರಿಸಬೇಕಿತ್ತು. ಅದರೆ, ಕಳೆದ ಐದು ವರ್ಷಗಳಿಂದ ದರ ಪರಿಷ್ಕರಣೆಯಾಗಿಲ್ಲ. ಈನಡುವೆ, ಪರಿಶಿಷ್ಟ ಜಾತಿ ಮತ್ತು ವರ್ಗದವರ ಮಾಲಿಕತ್ವದ ಪತ್ರಿಕೆಗಳಿಗೆ ಜಾಹಿರಾತು ಹಣವನ್ನು ಎಸ್.ಸಿ.ಎಸ್.ಪಿ/ಟಿ.ಎಸ್.ಪಿಗೆ ಅನುದಾನದ ವ್ಯಾಪ್ತಿಗೆ ಒಳಪಡಿಸಿ ವಾರ್ತಾ ಇಲಾಖೆಯಿಂದ ಬೇರ್ಪಡಿಸಿ, ಈ ಸಮುದಾಯಗಳ ಪತ್ರಿಕೆಗಳನ್ನು ಮುಖ್ಯವಾಹಿನಿಯಿಂದ ದೂರವಿಡುವ ಷಡ್ಯಂತರ ನಡೆದಿದೆ ಎಂದು ದೂರಲಾಯಿತು.

## ಟಿಕೆಟ್ ಮಾರಾಟ ಮಾಹಿತಿ

ಸಾಮಾನ್ಯವಾಗಿ ಮೊದಲು ಆರ್‌ಸಿಬಿ ಆಪ್‌ನ ಸದಸ್ಯರಿಗೆ ಟಿಕೆಟ್ ನೀಡಲಾಗುತ್ತದೆ. ನಂತರ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುತ್ತದೆ. ಟಿಕೆಟ್, ದರ, ಗೇಟ್‌ಗಳ ನಕ್ಷೆ, ಎಂಟ್ರಿ, ಎಕ್ಸಿಟ್ ಬಗ್ಗೆ ಸೋಮವಾರ ಅಧಿಕೃತವಾಗಿ ಮಾಹಿತಿ ನೀಡುವ ಸಾಧ್ಯತೆಯಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮಾರ್ಚ್ 28ರಂದು ಆವೃತ್ತಿಯ ಮೊದಲ ಪಂದ್ಯ ನಡೆಯಲಿದೆ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಆರ್‌ಸಿಬಿ ಸೆಣಸಾಡಲಿದೆ. ನಂತರ ಏಪ್ರಿಲ್ 5ರಂದು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಪಂದ್ಯ ನಡೆಯಲಿದೆ. ತವರಿನಲ್ಲಿ ನಡೆಯಲಿರುವ ಈ ಪಂದ್ಯಗಳಿಗಾಗಿ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ.

## ಯಾರ ಬೆದರಿಕೆಗೂ ಮಣಿಯಲ್ಲ

ಎಲ್ಲರೂ ಉಸ್ತುವಾರಿಗಳಿಗೆ ವರದಿ ಸಲ್ಲಿಸಿದ್ದಾರೆ. ಅವರು ಹೈಕಮಾಂಡ್‌ಗೆ ವರದಿ ಸಲ್ಲಿಸಿರಬಹುದು. ಎಲ್ಲಾ ಸಮುದಾಯದವರು ಹೋಗಿ ಮನವಿ ಮಾಡಿದ್ದಾರೆ. ಅದನ್ನು ಸರ್ವೇ ಮಾಡಿ ವರದಿ ಸಲ್ಲಿಸಿದ್ದಾರೆ. ಎರಡೂ ಕಡೆ ನಾವು ಗೆಲ್ಲಬೇಕು. ಅಂಥ ಅಭ್ಯರ್ಥಿಯನ್ನೇ ಆಯ್ಕೆ ಮಾಡಬೇಕು ಎಂದು ತಿಳಿಸಿದರು.

## ಜಮೀರ್ ರಾಜೀನಾಮೆ ಬೆದರಿಕೆ?

ನೀಡಬೇಕು. ಇಲ್ಲದಿದ್ದರೆ ರಾಜೀನಾಮೆ ನೀಡುವುದಾಗಿ ಜಮೀರ್ ಅಹಮ್ಮದ್ ಹೇಳಿದ್ದಾರೆ ಎನ್ನಲಾಗಿದೆ. ಜಮೀರ್ ಬೆದರಿಕೆಗೆ ಮಣಿಯಲ್ಲ ಎಂದು ಪರೋಕ್ಷವಾಗಿ ಸುರ್ಜೇವಾಲ ಎಚ್ಚರಿಕೆ ನೀಡಿದ್ದಾರೆ.

## ಲಿಂಗಾಯತ ನಾಯಕರ ಅಸಮಾಧಾನ

ಎನ್ನಲಾಗಿದೆ. ರಾಜ್ಯ ಉಸ್ತುವಾರಿ ಸುರ್ಜೇವಾಲಾ ಮುಂದೆ ಸಚಿವರಾದ ಈಶ್ವರ್ ಖಂಡ್ರೆ, ಎಸ್.ಎಸ್. ಮಲ್ಲಿಕಾರ್ಜುನ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಾಮನೂರು ಅವರಿಂದ ತೆರವಾದ ಕ್ಷೇತ್ರದ ಟಿಕೆಟ್ ಅನ್ನು ಅವರ ಕುಟುಂಬಕ್ಕೆ ಕೊಡಬೇಕು. ಸಾರ್ವತ್ರಿಕ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕ್ಲೈಮ್ ಮಾಡಲಿ. ಆದರೆ, ಉಪಚುನಾವಣೆ ಸಂದರ್ಭದಲ್ಲಿ ಟಿಕೆಟ್ ಕ್ಲೈಮ್ ಮಾಡುವುದು ಸರಿ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಪುಂಡಾನೆ ಹಾವಳಿ: ಆಟೋ ಜಖಂ

ಸಲಗವನ್ನು ಕಂಡ ಗ್ರಾಮಸ್ಥರು ದಿಕ್ಕಪಾಲಾಗಿ ಓಡಿ ದಾಳಿಯಿಂದ ತಪ್ಪಿಸಿಕೊಂಡಿದ್ದಾರೆ. ಒಂಟಿ ಸಲಗ ಗ್ರಾಮದಲ್ಲಿ ಸಂಚರಿಸಿದ ಬಗ್ಗೆ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಸಿಬ್ಬಂದಿ ಡ್ರೋನ್ ಕ್ಯಾಮೆರಾ ಬಳಸಿ ಆನೆಯನ್ನು ಪತ್ತೆಹಚ್ಚಿ ಕಾಡಿಗೆ ಅಟ್ಟಿದ್ದಾರೆ.

## ರಾಷ್ಟ್ರಪತಿ ಮುರ್ಮು ಭೇಟಿ

ದರ್ಶನ ಪಡೆದು ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಕಾರ್ಯಕ್ರಮದಲ್ಲಿ ಒಂದೂವರೆ ಗಂಟೆಗಳ ಕಾಲ ಇರಲಿದ್ದಾರೆ ಎಂದು ಸಿದ್ದಗಂಗಾ ಮಠದಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಮಾಹಿತಿ ನೀಡಿದರು.

# ಮೈಸೂರಿನಲ್ಲಿ ರಂಜಾನ್ ಸಂಭ್ರಮ

## ಎಲ್ಲೆಡೆ ಸಾಮೂಹಿಕ ಪ್ರಾರ್ಥನೆ, ಶಾಂತಿ, ಸಹಭಾಳ್ವೆ ಸಂದೇಶ

ಮೈಸೂರು: ಶಾಂತಿ, ಸೌಹಾರ್ದತೆಯ ಸಂದೇಶ ಸಾರುವ ರಂಜಾನ್(ಈದ್ ಉಲ್ ಫಿತರ್) ಹಬ್ಬವನ್ನು ನಗರದೆಲ್ಲಡೆ ಮುಸ್ಲಿಂ ಸಮುದಾಯದವರು ಭಕ್ತಿಭಾವದೊಂದಿಗೆ ಸಂಭ್ರಮದಿಂದ ಆಚರಿಸಿದರು.

ತಿಲಕ್ ನಗರ, ರಾಜೀವ್‌ನಗರ, ಗೌಸಿಯಾ ನಗರದ ಈದ್ಗಾಗಳಲ್ಲಿ ಈದ್ ಸಾಮೂಹಿಕ ಪ್ರಾರ್ಥನೆ ನಡೆಸಲಾಯಿತು. ಜತೆಗೆ ಬಡಾವಣೆಗಳಲ್ಲಿ ಇರುವ ಮಸೀದಿಗಳಲ್ಲೂ ಪ್ರಾರ್ಥನೆ ಸಲ್ಲಿಸಿ ಗಮನ ಸೆಳೆದರು. ಮೂವತ್ತು ದಿನಗಳ ರಂಜಾನ್ ಉಪವಾಸವನ್ನು ಕಟ್ಟುನಿಟ್ಟಾಗಿ ಪಾಲಿಸಿದ ಮುಸ್ಲೀಮರು ತಮ್ಮ ಆದಾಯದ ಶೇ.2.5ರಷ್ಟನ್ನು ಜಕಾತ್ ರೂಪದಲ್ಲಿ ದಾನ ಮಾಡಿ, ಪ್ರತಿ ಕುಟುಂಬ ಸದಸ್ಯರಿಂದ ಫಿತ್ರಾ ನೀಡಿದ ನಂತರ ತಿಲಕ್ ನಗರದ ಈದ್ಗಾ ಮೈದಾನದಲ್ಲಿ ಭಕ್ತಿಪೂರ್ವಕವಾಗಿ ಸೇರಿ ಹಬ್ಬವನ್ನು ಆಚರಿಸಿದರು. ನಗರದ ವಿವಿಧ ಕಡೆಗಳಲ್ಲಿರುವ ಮಸೀದಿಗಳಲ್ಲಿ ಶನಿವಾರ ಮುಂಜಾನೆಯಿಂದಲೇ ಪ್ರಾರ್ಥನೆ ಸಲ್ಲಿಸಿ ಬಳಿಕ ತಿಲಕ್‌ನಗರದ ಈದ್ಗಾ ಮೈದಾನಕ್ಕೆ ತೆರಳಿ ಮುಸ್ಲಿಂ ಧರ್ಮಗುರು ಸರ್‌ಖಾಜಿ ಮೌಲಾನ ಮಹಮ್ಮದ್ ಉಸ್ಮಾನ್ ಶರೀಫ್ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಸಾಮೂಹಿಕ ಪ್ರಾರ್ಥನೆ ನಂತರ ಪರಸ್ಪರ ಆಲಂಗಿಸಿಕೊಂಡು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರಲ್ಲದೆ ಸಿಹಿ ವಿತರಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬಡ ಮುಸ್ಲಿಂ ಸಮುದಾಯದವರಿಗೆ ಹಬ್ಬದ ಅಂಗವಾಗಿ ಸಿಹಿ ತಿಂಡಿ, ಹಾಲು, ಹಣ್ಣು, ಬಟ್ಟೆ ಇತ್ಯಾದಿಗಳನ್ನು ವಿತರಿಸಲಾಯಿತು. ಇದಾದ ಬಳಿಕ ಸ್ನೇಹಿತರ ಮನೆಗಳಿಗೆ, ಅಕ್ಕಪಕ್ಕದ ಮನೆಗಳಿಗೆ ತೆರಳಿ ಶುಭಾಶಯ ವಿನಿಮಯ ಮಾಡಿಕೊಂಡರು. ಸಾಮೂಹಿಕ ಪ್ರಾರ್ಥನೆ ಹಾಗೂ ಸಾಮೂಹಿಕ ನಮಾಜ್ ಸಮಯದಲ್ಲೂ ಕೂಡ ಎಲ್ಲರೂ ಒಬ್ಬರನ್ನು ಒಬ್ಬರು ಬಿಗಿದ್ದಪ್ಪಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಅಬಾಲವೃದ್ಧರಾದಿಯಾಗಿ ಎಲ್ಲರೂ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸಿದರು.





ಈ ವೇಳೆ ಧರ್ಮ ಸಂದೇಶದ ನೀಡಿದ ಧರ್ಮಗುರು ಸರ್‌ಖಾಜಿ ಮೌಲಾನ ಮಹಮ್ಮದ್ ಉಸ್ಮಾನ್ ಶರೀಫ್, ಇಸ್ಲಾಂ ಧರ್ಮದ ಮುಖ್ಯ ಉದ್ದೇಶ ದೇವರ ಆರಾಧನೆ ಹಾಗೂ ಮಾನವ ಸೇವೆ. ಉಪವಾಸ, ನಮಾಜ್, ಜಕಾತ್ ಮತ್ತು ಫಿತ್ರಾ ಮೂಲಕ ಬಡವರಿಗೂ ಸಹಾಯ ಮಾಡುವುದೇ ಈ ಹಬ್ಬದ ಮಹತ್ವ. ಈದ್ ಹಬ್ಬ ಕೇವಲ ಆಚರಣೆ ಮಾತ್ರವಲ್ಲ, ವಿಶ್ವಕ್ಕೆ ಮಾನವೀಯತೆ, ಏಕತೆ ಮತ್ತು ಸಹೋದರತ್ವದ ಸಂದೇಶ ನೀಡುವ ಹಬ್ಬವಾಗಿದೆ ಎಂದು ಹೇಳಿದರು. ಪ್ರವಾದಿ ಮಹಮ್ಮದ್ ಅವರ ಜೀವನಶೈಲಿಯನ್ನು ಅನುಸರಿಸುವುದರೊಂದಿಗೆ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕಬೇಕು. ಯುವಕರು ಮದ್ಯಪಾನ, ಮಾದಕ ವಸ್ತುಗಳಂತಹ ದುಶ್ಚಟಗಳಿಂದ ದೂರವಿದ್ದು ಉತ್ತಮ ಜೀವನ ನಡೆಸಬೇಕು ಎಂದು ಸಲಹೆ ನೀಡಿದ ಅವರು, ದೇಶದ ಹಾಗೂ ವಿಶ್ವದ ಶಾಂತಿ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸಿದರು. ಶಾಸಕ ತನ್ವೀರ್ ಸೇಠ್ ಅಶೋಕ ರಸ್ತೆಯ ಮಸ್ಜಿದ್-ಎ-ಕಚ್ಚಿ ಮೆಮನ್‌ನಲ್ಲಿ ಬೆಳಗ್ಗೆ ಈದ್ ನಮಾಜ್‌ನಲ್ಲಿ ಪಾಲ್ಗೊಂಡು ಮುಸ್ಲಿಂ ಸಹೋದರರಿಗೆ ಹಬ್ಬದ ಶುಭಾಶಯ ಕೋರಿದರು. ಶಾಸಕ ಕೆ.ಹರೀಶ್ ಗೌಡ ಈದ್ಗಾ ಮೈದಾನಕ್ಕೆ ಭೇಟಿ ನೀಡಿ ಮುಸಲ್ಮಾನರಿಗೆ ರಂಜಾನ್ ಶುಭಾಶಯ ತಿಳಿಸಿದರು. ವಿಟಿಯು ಮಾಜಿ ಡೀನ್ ಡಾ.ಶಕೀಬ್ ಉರ್ ರೆಹಮಾನ್, ಕೆ.ಸಿ.ಶೌಕತ್ ಪಾಷಾ, ಮಾಜಿ ಮೇಯರ್ ಅನ್ವರ್ ಬೇಗ್, ಮುಖಂಡರಾದ ಮುಷ್ತಾಕ್ ಅಹ್ಮದ್, ಜಮೀಲ್ ಅಹ್ಮದ್ ಅಶ್ರಫಿ, ಮುಮ್ತಾಜ್ ಅಹ್ಮದ್, ಮಚ್ಚಿ ತಾಜ್, ಸುಹೇಲ್ ಬೇಗ್ ಸೇರಿ ಅನೇಕರಿದ್ದರು.

> ಪ್ರಪಂಚಕ್ಕೆ ಒಳಿತಾಗಲಿ ಎಂಬ ಪ್ರಾರ್ಥನೆ ಈದ್ಗಾ ಮೈದಾನದಲ್ಲಿ ಆಗಿದೆ. ತ್ಯಾಗ, ಸೌಹಾರ್ದತೆ, ಪ್ರೀತಿ, ವಿಶ್ವಾಸದಿಂದ ಗೆಲ್ಲುವುದೇ ರಂಜಾನ್ ಆಗಿದೆ. ಇಲ್ಲದವರಿಗೆ ಉಳ್ಳವರು ನೀಡುವ ಹಬ್ಬ ಇದಾಗಿದೆ. ನಿನ್ನೆ ಯುಗಾದಿ, ಇಂದು ರಂಜಾನ್ ಪರಸ್ಪರ ಎರಡು ಸಮುದಾಯ ಕೋರಿಕೊಳ್ಳುವ ಮೂಲಕ ಸಂದೇಶ ನೀಡಿದ್ದೇವೆ. ನಡೆಯುತ್ತಿರುವ ಯುದ್ಧಗಳನ್ನು ಇಂತಹ ಶಾಂತಿ ಸಂದೇಶದ ಮೂಲಕ ನಿಲ್ಲುವಂತಾಗಲಿ.
>
> -ಕೆ.ಹರೀಶ್ ಗೌಡ ಶಾಸಕ





**ಬಡಗಲಪುರ ನಾಗೇಂದ್ರ ಹೇಳಿಕೆ**

# ಚಳವಳಿ ಸಿದ್ಧಾಂತಕ್ಕೆ ಪೂರಕ ಹೋರಾಟ ಅಗತ್ಯ

ಮೈಸೂರು: ಚಳುವಳಿಗಿಂತ ಯಾರೂ ದೊಡ್ಡವರಲ್ಲ. ಚಳುವಳಿ ಎಲ್ಲರಿಗಿಂತ ದೊಡ್ಡದು. ಚಳುವಳಿ ಸಿದ್ಧಾಂತಕ್ಕೆ ಪೂರಕವಾಗಿ ಹೋರಾಟ ನಡೆಯಬೇಕು ಎಂದು ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದರು.

ನಗರದ ಹುಣಸೂರು ರಸ್ತೆಯ ಕೃಷಿ ಮಾರುಕಟ್ಟೆ ಅಧ್ಯಯನ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಶನಿವಾರ ನಡೆದ ಜಿಲ್ಲಾ ಕಾರ್ಯಕರ್ತರ ಸಭೆ ಹಾಗೂ ಮೈಸೂರು ತಾಲ್ಲೂಕು ಸಮಿತಿ ಪುನರ್ ರಚನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಚಳುವಳಿಯ ಸಿದ್ಧಾಂತಕ್ಕೆ ಪೂರಕವಾಗಿ ಕೆಲಸ ಮಾಡಿದರೆ ನಮಗೆ ಗೌರವ ಸಿಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಸಹ ಚಳುವಳಿಯ ಸಿದ್ಧಾಂತಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಬೇಕು. ಎಐ ತಂತ್ರ ಜ್ಞಾನದಲ್ಲೂ ರಾಜ್ಯ ರೈತ ಸಂಘದ ಹೋರಾಟದ ಬಗ್ಗೆ ದಾಖಲು ಮಾಡುತ್ತಿದೆ. ಅದನ್ನು ಪ್ರತಿಯೊಬ್ಬರೂ ಓದಬೇಕು. ಕರ್ನಾಟದಲ್ಲಿ ರೈತ ಸಂಘ ಹಲವಾರು ಬಣಗಳಾಗಿ ಹೊಡೆದು ಹೋಗಿದ್ದರೂ ಸೈದ್ಧಾಂತಿಕವಾಗಿ



ಜನಮಾನಸದಲ್ಲಿ ಸಂಘದ ಚಳುವಳಿಯನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವುದರಲ್ಲಿ ನಮಗೆ ಎಐ ದಾಖಲು ಮಾಡಿದೆ ಎಂದು ತಿಳಿಸಿದರು.

ಸಂಘದಲ್ಲಿ ರಾಜ್ಯಮಟ್ಟದ ಪದಾಧಿಕಾರಿಗಳು, ತಳಮಟ್ಟದ ಪದಾಧಿಕಾರಿಗಳ ತಂಡ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ಎಂಬ ಮೂರು ಹಂತದ ಕಾರ್ಯಕರ್ತರ ತಂಡವಿದೆ. ಜಿಲ್ಲಾ ಹಾಗೂ ತಾಲ್ಲೂಕು ಸಮಿತಿಯ ಪದಾಧಿಕಾರಿಗಳಿಗೆ ಪ್ರಭುದ್ಧತೆ ಇಲ್ಲದೆ ಹೋದರೆ ಚಳುವಳಿಗಳಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ತಾಲ್ಲೂಕು ಪದಾಧಿಕಾರಿಗಳಿಗೆ ಮೊದಲು ಕಾರ್ಯಾಗಾರವಾ ಗಬೇಕು. ಪದಾಧಿಕಾರಿಗಳಿಗೆ ಕಾರ್ಯಾಗಾರವಾಗದೆ ಹೋದರೆ ಅವರಿಗೆ ಸಂಘವನ್ನು ಹೇಗೆ ನಡೆಸಬೇಕು ಎಂಬ ಗೊತ್ತು ಗುರಿ ಇಲ್ಲದಾಗುತ್ತದೆ. ಅದಕ್ಕಾಗಿ ಪದಾಧಿಕಾರಿಗಳಿಗೆ ಸಂಘದ ಮಹತ್ವ, ಇತಿಹಾಸ, ಸಂಘದ ಉದ್ದೇಶ, ಅದರ ಸಿದ್ಧಾಂತಗಳ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ತಿಳಿಸಿದರು. ಎಲ್ಲಾ ಜಿಲ್ಲೆಗಳ ಅಭಿಪ್ರಾಯಗಳನ್ನು ಕೇಳಿ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ತೆಗೆದುಕೊಂಡ ತೀರ್ಮಾನ ಜಾರಿ ಮಾಡಬೇಕಾದರೆ ಜಿಲ್ಲಾ ಸಮಿತಿಯಲ್ಲಿ, ತಾಲ್ಲೂಕು ಸಮಿತಿಯಲ್ಲಿ ಮಂಡನೆಯಾಗಬೇಕು. ಇದು ಗ್ರಾಮಗಳಿಗೆ ಹಾಗೂ ಪದಾಧಿಕಾರಿಗಳಿಗೆ ಗೊತ್ತಗಬೇಕು. ಹೀಗಾಗಿ ಪ್ರತಿಯೊಂದು ಸಮಿತಿ ಕರೆಯುವ ಸಭೆಯಲ್ಲಿ ಪದಾಧಿಕಾರಿಗಳು ಭಾಗವಹಿಸಬೇಕು. ಅಶಿಸ್ತು ಮತ್ತು ಸಿದ್ಧಾಂತವನ್ನು ಒಪ್ಪಿಕೊಳ್ಳದೆ ಹೋದರೆ ಅಂತಹ ಚಳುವಳಲ್ಲಿ ನಾನಿರಲ್ಲ. ಚಳುವಳಿಯ ಸಿದ್ಧಾಂತಗಳಿಗೆ ವಿರುದ್ಧವಾಗಿ ನಡೆದುಕೊಳ್ಳಬೇಕೆಂದರೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಎಂದು ಹೇಳಿದರು. ಸಭೆಯಲ್ಲಿ ರಾಜ್ಯ ರೈತ ಸಂಘದ ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾಧ್ಯಕ್ಷ ವಸಂತ ಕುಮಾರ್, ಜಿಲ್ಲಾ ಖಜಾಂಚಿ ಈಶ್ವರ್, ಟಿ.ನರಸೀಪುರ ತಾಲ್ಲೂಕು ಅಧ್ಯಕ್ಷ ಕರೊಟ್ಟಿ ಕುಮಾರಸ್ವಾಮಿ, ಮೈಸೂರು ತಾಲ್ಲೂಕು ಅಧ್ಯಕ್ಷ ಆನಂದ್ ಪ್ರಭಾಕರ್, ನಂಜನಗೂಡು ತಾಲ್ಲೂಕು ಅಧ್ಯಕ್ಷ ಮಹೇಶ್ ಕೆ. ಆರ್.ಪುರ, ಹುಣಸೂರು ತಾಲ್ಲೂಕು ಅಧ್ಯಕ್ಷ ಬೆಂಕಿಪುರ ಚಿಕ್ಕಣ್ಣ ಸೇರಿ ಇತರರು ಹಾಜರಿದ್ದರು.

ಮೊದಲ ಪುಟದಿಂದ

## ಮೂರ್ಖರ ಹೇಳಿಕೆಗೆ ಉತ್ತರಿಸಲ್ಲ

ಟಿಕೆಟ್ ಸಿದ್ದೇಶ್ವರ ಅವರ ಬಣದವರಿಗೆ ಹೈಕಮಾಂಡ್ ಟಿಕೆಟ್ ನೀಡಿದೆ. ಯಡಿಯೂರಪ್ಪ ಬೆಂಬಲಿತ ಅಭ್ಯರ್ಥಿಗೆ ಟಿಕೆಟ್ ಸಿಕ್ಕಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ ಎಂಬ ಸುದ್ದಿಗಾರರ ಪ್ರಶ್ನೆಗೆ, ಹಿರಿಯರಾದ ಸಿದ್ದೇಶ್ವರ, ರೇಣುಕಾಚಾರ್ಯ ಮತ್ತು ನಮ್ಮೆಲ್ಲಾ ಸ್ಥಳೀಯ ಮುಖಂಡರ ಜೊತೆ ಚರ್ಚೆ ಮಾಡಿ ಯಾವ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಪಕ್ಷಕ್ಕೆ ಒಳ್ಳೆಯದಾಗುತ್ತದೆ ಎಂದು ಚರ್ಚೆ ಮಾಡಿ ಅಭ್ಯರ್ಥಿಯನ್ನು ನಿಲ್ಲಿಸಿದ್ದೇವೆ. ಮೂವರ ಹೆಸರುಗಳನ್ನು ಅಖೈರುಗೊಳಿಸಿ ಹೈಕಮಾಂಡ್ ಗೆ ಕಳುಹಿಸಿದ್ದೆವು. ಪಕ್ಷದ ವರಿಷ್ಠರು ನಮ್ಮ ಆಯ್ಕೆಗೆ ಸಮ್ಮತಿ ಸೂಚಿಸಿದರು ಎಂದರು.

## ದ್ವೇಷ ಬೋಧಿಸಲ್ಲ

ವಿವಿಧ ಜಾತಿ ಸಂಸ್ಕೃತಿಗಳಿಂದ ಕೂಡಿದೆ. ವಿವಿಧತೆಯಲ್ಲಿ ಏಕತೆಯಿರುವ ನಮ್ಮ ದೇಶದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು ಎಂದರು. ಇಂದು ರಂಜಾನ್ ಹಬ್ಬ. ನಾವೆಲ್ಲ ಸೇರಿ ಒಟ್ಟಿಗೆ ಪ್ರಾರ್ಥನೆ ಮಾಡಿದ್ದೇವೆ. ಮನುಕುಲಕ್ಕೆ ಹಾಗೂ ದೇವರಿಗೆ ಪ್ರಾರ್ಥನೆ ಮಾಡಿದ್ದೇವೆ. ನಾವೆಲ್ಲ ಮಾನವರಾಗಿ ಬಾಳೋದು ಅವಶ್ಯ. ನಾವೆಲ್ಲ ಮಾನವೀಯತೆಯಿಂದ, ಪ್ರೀತಿ ವಿಶ್ವಾಸದಿಂದ ಇರಬೇಕು ಎಂದು ತಿಳಿಸಿದರು. ದಾವಣಗೆರೆ ಟಿಕೆಟ್ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆ ಎಂದು ನನಗೆ ಗೊತ್ತಿಲ್ಲ. ಮುಸಲ್ಮಾನ ನಾಯಕರು ಎಷ್ಟು ಶಕ್ತಿ ಇದೆ ಅಂತ ತೋರಿಸ್ತಾರೆ ನೋಡೋಣ. ಎಂದರು.

## ನಿಯೋಗ

ಹಾಗೂ ಸರಕಾರ ಪತ್ರಿಕಾ ಸಂಪಾದಕರ ಸಂಘಗಳು, ಪತ್ರಕರ್ತರ ಸಂಘಗಳು ಒಳಗೊಂಡ ಸಮಿತಿಯ ಮೂಲಕ ಹೊಸ ನೀತಿಯನ್ನು ಪುನರ್ ಪರಿಶೀಲಿಸಬೇಕೆಂದು ಆಗ್ರಹಿಸಲಾಯಿತು. ಸಭೆಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಪ್ರತಿನಿಧಿ ಪತ್ರಿಕೆಯ ಪ್ರಕಾಶಕರಾದ ಶ್ರೀಹರಿ ದ್ವಾರಕನಾಥ್, ಸಂಪಾದಕರಾದ ಸಿ.ಕೆ.ಮಹೇಂದ್ರ, ರಾಜ್ಯಧರ್ಮ ಪತ್ರಿಕೆ ಸಂಪಾದಕಿ ಎಸ್.ಕವಿತಾ, ಪ್ರಜಾನುಡಿ ಪತ್ರಿಕೆಯ ಸಂಪಾದಕ ಸ್ವರೂಪ್, ವರ್ತಮಾನ ಪತ್ರಿಕೆಯ ಸಂಪಾದಕ ಕೆ.ಎನ್.ರವಿ, ಮೈಸೂರು ಪತ್ರಿಕೆಯ ಸಂಪಾದಕ ಮೋಹನ್, ನಗರ ಬೆಳಕು ಪತ್ರಿಕೆ ಸುವರ್ಣ, ಮಲ್ಲಿಗೆ ಮಾಚಮ್ಮ, ಸಾಧ್ವಿ ಪತ್ರಿಕೆ ಸಂಪಾದಕ ಬಿ.ರಾಘವೇಂದ್ರ, ನಿಜದನಿ ಪತ್ರಿಕೆಯ ಸಂಪಾದಕ ಸುನಿಲ್, ನನ್ನೂರು ಮೈಸೂರು ಪತ್ರಿಕೆ ಎನ್. ಸುರೇಶ್, ಲೋಕಹಿತ ಪತ್ರಿಕೆಯ ಸಂಪಾದಕ ಲೋಹಿತ್, ಪ್ರಬುದ್ಧ ಮಿತ್ರ ಪತ್ರಿಕೆಯ ರಾಘವೇಂದ್ರಸ್ವಾಮಿ, ಪ್ರಬುದ್ಧ ವಿಜಯ ಪತ್ರಿಕೆ ಸಂಪಾದಕ ಕಿಶೋರ್ ನಾಗ್ ಹಾಗೂ ಅನೇಕ ಪತ್ರಿಕೆಗಳ ಪ್ರತಿನಿಧಿಗಳು, ಸಂಘದ ಪದಾಧಿಕಾರಿಗಳಾದ ದಾರಾ ಮಹೇಶ್, ನಿರ್ದೇಶಕರಾದ ಸೋಮಶೇಖರ್, ಹನಗೋಡು ನಟರಾಜ್ ಮತ್ತಿತರರು ಹಾಜರಿದ್ದರು.

## ಕಲ್ಲು ಮಂಟಪಕ್ಕೆ ಬೆಂಕಿ

ಬೆಂಕಿ ಕ್ಷಣಾರ್ಧದಲ್ಲಿ ಸುತ್ತಲಿನ ಗಿಡಗಂಟೆಗಳಿಗೆ ಹರಡಿತು. ಬೆಂಕಿಯ ಬಗ್ಗೆ ಗಮನಿಸಿದ ಸ್ಥಳೀಯರು ತಕ್ಷಣ ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದರು. ಅಗ್ನಿಶಾಮಕ ಸಿಬ್ಬಂದಿ ಮತ್ತು ಸ್ಥಳೀಯರು ಸೇರಿ ಸಮಯೋಚಿತವಾಗಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಪುರಾತತ್ವ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮಂಟಪದ ಸುತ್ತಲೂ ಗಿಡಗಂಟೆಗಳು ಬೆಳೆದು ನಿಂತಿವೆ. ಬೇಸಿಗೆಯ ಝಳಕ್ಕೆ ಒಣಗಿದ್ದ ಸಸ್ಯಗಳು ಬೆಂಕಿಗೆ ಆಹುತಿಯಾಗಿವೆ. ಐತಿಹಾಸಿಕ ಕಲ್ಲು ಮಂಟಪವನ್ನು ಸಂರಕ್ಷಿಸುವ ಜವಾಬ್ದಾರಿ ಪುರಾತತ್ವ ಇಲಾಖೆಯದ್ದಾಗಿದೆ. ಆದರೆ ಇಲ್ಲಿ ಸಂರಕ್ಷಣೆ ಎಂಬುದೇ ಇಲ್ಲ. ಸಮಯಕ್ಕೆ ಸರಿಯಾಗಿ ಕ್ರಮ ಕೈಗೊಂಡಿರಲಿಲ್ಲವಾದರೆ ದೊಡ್ಡ ದುರಂತವೇ ಸಂಭವಿಸಬಹುದಿತ್ತು ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.\

## ಸಹಾಯಕ ಅಧಿಕಾರಿ ಆತ್ಮಹತ್ಯೆ

ಮಾಡಿದ್ದಾರೆ. ಜಂಟಿ ನಿರ್ದೇಶಕ ಕೃಷ್ಣಪ್ಪ ನನಗೆ ತೊಂದರೆ ಕೊಟ್ಟಿರುವುದರಿಂದ ನಾನು ಈ ನಿರ್ಧಾರಕ್ಕೆ ಬಂದಿರುವೆ. ಅವರಿಗೆ ದೇವರೇ ಶಿಕ್ಷೆ

ನೀಡುತ್ತಾನೆ. ಅವನು ತರ್ಲೆ ಇರುವುದರಿಂದ ನಮ್ಮ ಕುಟುಂಬದವರು ಏನು ಸೇಡು ತೀರಿಸಿಕೊಳ್ಳುವ ಅವಶ್ಯಕತೆ ಇಲ್ಲ. ಅವನಿಗೆ ದೇವರು, ಕಾನೂನು ಶಿಕ್ಷೆ ಕೊಟ್ಟೆ ಕೊಡುತ್ತದೆ ಎಂದು ವೀಡಿಯೋದಲ್ಲಿ ಉಲ್ಲೇಖಿಸಿದ್ದಾರೆ. ನನ್ನ ತಾಯಿ, ಹೆಂಡತಿ ಮಕ್ಕಳು ನಮ್ಮ ಇಡೀ ಸಂಸಾರ ನನ್ನನ್ನು ಚೆನ್ನಾಗಿ ನೋಡಿಕೊಂಡಿದೆ. ನನಗೆ ಒಳ್ಳೆಯ ಬೆಲೆ ಕೊಟ್ಟಿದ್ದಾರೆ. ನಾನು ಅವರಿಗೆ ಇನ್ನು ಸಹಾಯ ಮಾಡಬೇಕಿತ್ತು. ಆದರೆ ಅದು ಆಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಪಾವಗಡದ ಗುಂಡರ್ಲಹಳ್ಳಿ ಗ್ರಾಮದ ಮಲ್ಲಿಕಾರ್ಜುನ್, ಕಳೆದ 3 ವರ್ಷಗಳಿಂದ ಪಾವಗಡ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು

# ಶ್ರದ್ಧಾಭಕ್ತಿಯ ರಂಜಾನ್ ಆಚರಣೆ





ಚಾಮರಾಜನಗರ, ನಗರದಲ್ಲಿ ಮುಸ್ಲಿಂ ಭಾಂದವರು ರಂಜಾನ್ ಹಬ್ಬವನ್ನು ಸಡಗರ, ಸಂಭ್ರಮ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸುವ ಮೂಲಕ ಕಳೆದ 30 ದಿನಗಳಿಂದ ನಡೆಸುತ್ತಿದ್ದ ಉಪವಾಸವನ್ನು ಕೊನೆಗೊಳಿಸಿದರು.

ನಗರದದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಬಳಿ ಇರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. 30 ದಿನಗಳ ಉಪವಾಸದ ಬಳಿಕ ಚಂದ್ರನ ದರ್ಶನ ಪಡೆದ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.ಹಬ್ಬದ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಮಕ್ಕಳು, ಸ್ನೇಹಿತರು ಮತ್ತು ಸಂಬಂಧಿಗಳ ಜೊತೆ ಮಸೀದಿಗಳಿಗೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿ ಸಿದರು.


### ಶಾಸಕ ಸಿ.ಪುಟ್ಟರಂಗಶೆಟ್ಟಿ ಭಾಗಿ

ಎಂಎಸ್ ಐಎಲ್ ಅಧ್ಯಕ್ಷ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಮುಸ್ಲಿಂ ಧರ್ಮಗುರುಗಳನ್ನು ಸನ್ಮಾನಿಸಿ ಶುಭಾಶಯ ಕೋರಿದರು. ಈದ್ಗಾ ಮೈದಾನದ ಮುಂದುವರಿದ ಕಾಮಗಾರಿಗೆ ಅನುದಾನ ನೀಡು ವಂತೆ ಧರ್ಮಗುರು ಶಾಸಕರಿಗೆ ಮನವಿ ಸಲ್ಲಿಸಿದರು.

### ಬಿಗಿಪೊಲೀಸ್ ಬಂದೋಬಸ್ತ್

ರಂಜಾನ್ ಹಬ್ಬದ ಅಂಗವಾಗಿ ನಗರದಲ್ಲಿ ಜಿಲ್ಲಾ ಪೋಲಿಸ್ ವತಿಯಿಂದ ಬಿಗಿ ಬಂದೋಬಸ್ತ್ ಅಯೋಜಿಸಲಾಗಿತ್ತು.

# ಹಿರಿಯ ವಿದ್ಯಾರ್ಥಿನಿಯರ ಸಮಾವೇಶ




ಚಾಮರಾಜನಗರ, ನಗರದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ" ಹಳೆ ಬೇರು- ಹೊಸ ಚಿಗುರು" ಎಂಬ ಶೀರ್ಷಿಕೆ ಅಡಿಯಲ್ಲಿ ಹಿರಿಯ ವಿದ್ಯಾರ್ಥಿನಿಯರ ಸಮಾವೇಶವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತ ಶಿಕ್ಷಕಿ ಆರ್. ಸರ್ವಮಂಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಸಂಸ್ಥೆಯನ್ನು ಕಟ್ಟಿ ಬೆಳೆಸಿರುವ ಬಗ್ಗೆ ವಿವರಿಸಿದರು. ಶಿಕ್ಷಣ ನಮಗೆ ಬದುಕನ್ನು ಕಟ್ಟಿಕೊಡಲಿದೆ. ಆದ್ದರಿಂದ ಪ್ರತಿಯೊಬ್ಬರೂ ಸುಶಿಕ್ಷಿತರಾಗಬೇಕು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚಾಮರಾಜನಗರದ ಜೆಎಸ್ಎಸ್ ಆಸ್ಪತ್ರೆಯ ಸ್ತ್ರೀರೋಗ ತಜ್ಞರಾಗಿರುವ ಡಾ.ಚಂದ್ರಿಕಾ ಮಾತನಾಡಿ

ಸಂಸ್ಥೆಯು ಹಲವಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ. ಉತ್ತಮ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಶೈಕ್ಷಣಿಕವಾಗಿ ಗುರಿಯನ್ನು ಆಯ್ಕೆ ಮಾಡಲು ಸ್ಪೂರ್ತಿದಾಯಕವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪದವಿ ಕಾಲೇಜಿನ ಕಾಲೇಜಿನ ಪ್ರಾಂಶುಪಾಲ ಟಿ.ಎಂ. ಮರಿಸ್ವಾಮಿ ಮಾತನಾಡ ವಿದ್ಯಾರ್ಥಿಗಳು ಕಾಲೇಜಿನ ಪರಂಪರೆಯ ಪ್ರತಿನಿಧಿಗಳಾಗಿದ್ದಾರೆ ಅಲ್ಲದೆ ವಿವಿಧ ಕ್ಷೇತ್ರದಲ್ಲಿ ಕಾರ್ಯಾ ನಿರ್ವಹಿಸುತ್ತಿರುವುದರ ಕುರಿತು ಪ್ರಶಂ ಶಿಸಿದರು. ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಡಾ.ಉಮಾರಾಣಿ, ಚಂದ್ರಕಲಾ, ಲತಾ, ಸಂಪದ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿನಿಯರ ಸಂಘದ ಪದಾಧಿಕಾರಿಗಳು ಸದಸ್ಯರು ಹಾಗೂ ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಪಿಡಬ್ಲ್ಯೂಡಿ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಚುನಾವಣೆ

# ಶಿವಕುಮಾರ್, ವೈ.ಪಿ. ರಾಜೇಂದ್ರ ಬಣಕ್ಕೆ ಜಯ

### ಎರಡು ಅವಧಿಯ ನಮ್ಮ ತಂಡದ ಕಾರ್ಯ ವೈಖರಿ ಗಮನಿಸಿ ಮತ್ತೆ ಅಧಿಕಾರ ನೀಡಿದ ಸದಸ್ಯರು :ಅಯ್ಯನಪುರ ಶಿವಕುಮಾರ್ ಸಂತಸ



ಚಾಮರಾಜನಗರ, ಚಾಮರಾಜನಗರ ತಾಲೂಕು ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಐದು ವರ್ಷಗಳ ಅವಧಿಯ ಅಡಳಿತ ಮಂಡಲಿಗೆ ನಡೆದ ಚುನಾವಣೆಯಲ್ಲಿ ಹಾಲಿ ಸಂಘದ ಅಧ್ಯಕ್ಷ ಅಯ್ಯನಪುರ ಶಿವಕುಮಾರ್ , ವೈ.ಪಿ. ರಾಜೇಂದ್ರ ಪ್ರಸಾದ್ಅವರ ನೇತೃತ್ವದ 11 ಮಂದಿಗೆ ಜಯಗಳಿಸುವ ಮೂಲಕ ಮತ್ತೆ ಸಂಘದ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ನಗರದ ಪಿಡಬ್ಲ್ಯೂಡಿ ಕಚೇರಿ ಅವರಣದಲ್ಲಿ ಸಂಘದ ಕಚೇರಿ ಸಭಾಂಗಣದಲ್ಲಿ 12 ಮಂದಿ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಮತದಾನ ಬೆಳಗ್ಗೆಯಿಂದ ಮಧ್ಯಾಹ್ನದ ವರೆಗೆ ನಡೆಯಿತು. ಬಳಿಕ ನಡೆದ ಮತ ಎಣಿಕೆಯಲ್ಲಿ 11 ಮಂದಿ ಶಿವಕುಮಾರ್ ಬಣದವರು ಹೆಚ್ಚು ಮತಗಳನ್ನು ಪಡೆದು ಆಯ್ಕೆಯಾದರೆ, ಮತ್ತೊಂದು ಬಣದ ಅಬ್ದುಲ್ ಅಜೀಜ್ ಆಯ್ಕೆಯಾದರು. ಇನ್ನು ಎರಡು ಸ್ಥಾನಗಗಳಿಗೆ ಅವಿರೋಧವಾಗಿ ಆಯ್ಕೆಯಾಗಿತ್ತು.

### ನೂತನ ನಿರ್ದೇಶಕರಿವವರು

ಸಂಘ ನೂತನ ನಿರ್ದೇಶಕರಾಗಿ ಅಯ್ಯನಪುರ ಶಿವಕುಮಾರ್( 58 ಮತಗಳು) ವೈ.ಪಿ. ರಾಜೇಂದ್ರಪ್ರಸಾದ್ (61 ಮತಗಳು) ಎಂ. ರವಿ ( 62 ಮತಗಳು ) ಬಸಪ್ಪನಪಾಳ್ಯ ನಟರಾಜು( 58 ಮತಗಳು) ಎಂ. ಶಿವಕುಮಾರ್( 57 ಮತಗಳು) ನಲ್ಲೂರು ಮಹದೇವಸ್ವಾಮಿ ಬಿ (50 ಮತಗಳು), ಶಿವಬಸವಣ್ಣ(49 ಮತಗಳು) ಎಂ.ಸಿ.ಸುರೇಂದ್ರ( 49 ಮತಗಳು) ಮಲೆಯೂರು ಎಂ.ಎ.ನಾಗರಾಜು( 48 ಮತಗಳು) ಅಬ್ದುಲ್ ಅಜೀಜ್(41 ಮತಗಳು) ನಂಜುಂಡಸ್ವಾಮಿ(41 ಮತಗಳು) ಸುಬ್ಬೇಗೌಡ (45 ಮತಗಳು )ಪಡೆದು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಮಹಿಳಾ ಮೀಸಲು ಕ್ಷೇತ್ರದಿಂದ ದೇವಾಜಮ್ಮಣಿ, ಎಸ್ಟಿ ಮೀಸಲು ಕ್ಷೇತ್ರದಿಂದ ದೊರೆಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಅಧಿಕಾರಿ ನಾಗೇಶ್ ತಿಳಿಸಿದ್ದಾರೆ. ಸಂಘ ಸಿಇಓ ಬರ್ನಾಲ್ಟ್ ದೀಕ್ಷಿತ್ ಸಿ ಭಾಗವಹಿಸಿದ್ದರು.

### ಗುತ್ತಿಗೆದಾರ ಹಿತರಕ್ಷಣೆಗೆ ಬದ್ಧ

ನೂತನ ನಿರ್ದೇಶಕರಾಗಿ ಆಯ್ಕೆಯಾದ ಶಿವಕುಮಾರ್ ಮಾತನಾಡಿ, ಸಂಘದ ಸದಸ್ಯರು ನಮ್ಮ ತಂಡದ ಮೇಲೆ ವಿಶ್ವಾಸವಿಟ್ಟು 11 ಮಂದಿಯನ್ನು ಗೆಲ್ಲಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರು ನಮ್ಮ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸಕ್ಕೆ ಚಿರಋಣಿಯಾಗಿದ್ದೇವೆ. ಕಳೆದ 2015ರಲ್ಲಿ ಸಂಘ ಸ್ಥಾಪನೆ ಗೊಂಡು ತಾಲೂಕಿನ ಗುತ್ತಿಗೆದಾರರನ್ನು ಅರ್ಥಿಕವಾಗಿ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಸಂಘ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಸಂಘದ ಸದಸ್ಯರಿಗೆ 2 ಲಕ್ಷ ದ ವರೆಗೂ ಅರ್ಜಿ ಸಲ್ಲಿಸಿದ ಕೆಲವ ನಿಮಿಷಗಳಲ್ಲಿ ಅವರ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಲಾಗುತ್ತದೆ. ಅದೇ ರೀತಿ ಸದಸ್ಯರು ಸಹ ಮರು ಪಾವತಿ ಮಾಡುತ್ತಿದ್ದಾರೆ. ಹೀಗಾಗಿ ನಮ್ಮ ಸಂಘ ಒಟ್ಟು ಷೇರು 20 ಲಕ್ಷ ರೂ. ಆಗಿದ್ದು, ಇದುವರೆಗೆ 45 ಲಕ್ಷ ರೂ. ನಿವ್ವಳ ಲಾಭ ಬಂದಿದೆ. ಈಗ ಸಂಘದ ಖಾತೆಯಲ್ಲಿ 65 ಲಕ್ಷ ರೂ. ಇದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಯೋಜನೆಗಳು ಹಾಗೂ ಸಂಘ ಸದಸ್ಯರ ಆರ್ಥಿಕ ಸಬಲೀಕರಣಕ್ಕೆ ಕಾರ್ಯಕ್ರಮಗಳನ್ನು ರೂಪಿಸುವುದಾಗಿ ತಿಳಿಸಿದರು. ಅಲ್ಲದೆ ಚಾಮರಾಜನಗರದಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಉತ್ತಮ ಸಂಘವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸಹಕಾರ ಪ್ರಶಸ್ತಿ ಪಡೆದುಕೊಂಡಿದೆ ಎಂದರು. ನೂತನ ನಿರ್ದೇಶಕರನ್ನು ನಗರಸಭಾ ಮಾಜಿ ಸದಸ್ಯ ನಂಜುಂಡಸ್ವಾಮಿ, ರಾಮಸಮುದ್ರ ಯಜಮಾನ ಪಾಪಣ್ಣ, ಹಿರಿಬೇಗೂರು ಗುರುಸ್ವಾಮಿ ಸೇರಿದಂತೆ ಅನೇಕ ಮುಖಂಡರು ಅಭಿನಂದಿಸಿದರು. ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು

# ರೇವಣಸಿದ್ದೇಶ್ವರರ ಅಧ್ಯಯನ ಅಗತ್ಯ

## ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ | ಚಂದ್ರಶೇಖರಯ್ಯ ಅವರ ಕೃತಿ ಬಿಡುಗಡೆ



ರಾಮನಗರ: ಶ್ರೀ ರೇವಣಸಿದ್ಧರ ಬಗ್ಗೆ ಹೆಚ್ಚಿನ ಅಧ್ಯಯನ, ಸಂಶೋಧನೆಗಳು ನಡೆಯಬೇಕಾಗಿದೆ ಎಂದು ಶಿವಗಂಗಾ ಕ್ಷೇತ್ರದ ಮೇಲಣಗವಿ ಸಂಸ್ಥಾನ ಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿಯವರು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿಯ ಸಮೀಪವಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ದಾಸೋಹ ಭವನದಲ್ಲಿ ಶ್ರೀ ಬಸವೇಶ್ವರ ಸಾರ್ವಜನಿಕ ವಿದ್ಯಾರ್ಥಿ ನಿಲಯ ಟ್ರಸ್ಟ್ ವತಿಯಿಂದ ನಡೆದ ವಿದ್ವಾನ್ ಚಂದ್ರಶೇಖರಯ್ಯ ಅವರ 'ಶಿವಕು ಲತಿಲಕ ಆಚಾರ್ಯ ಶ್ರೀ ರೇವಣಸಿದ್ದೇಶ್ವರ' ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ರೇವಣಸಿದ್ಧರು ಒಬ್ಬರೇ ಅಲ್ಲ, ಅವರದ್ದು ಒಂದು ಗುರು ಪರಂಪರೆ. ರೇವಣಸಿದ್ಧರ ಬಗ್ಗೆ ಎದ್ದಿರುವ ಗೊಂದಲಗಳಿಗೆ ಇತಿಶ್ರೀ ಹಾಡಲು, ಅವರ ಬಗ್ಗೆ ಹೆಚ್ಚಿನ ಅಧ್ಯಯನ, ಸಂಶೋಧನೆಗಳು ನಡೆಯಬೇಕು. ಈ ನಿಟ್ಟಿನಲ್ಲಿ ಸಂಶೋಧಕರು, ವಿದ್ವಾಂಸರು ಮುಂದಿನ ದಿನಗಳಲ್ಲಿ ಸತ್ಯಾಂಶವನ್ನು ಜಗಜ್ಜಾಹೀರು ಪಡಿಸಬೇಕು ಎಂದರು.

### ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದ ರೇವಣಸಿದ್ದೇಶ್ವರರು

ಸಾಹಿತಿ ಡಾ.ಸಿ. ಶಿವಕುಮಾರಸ್ವಾಮಿ ಮಾತನಾಡಿ, ರೇಣುಕಾದಿ ಪಂಚಾಚಾರ್ಯರು ನಾಲ್ಕು ಯುಗಗಳಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ಭೂಲೋಕದ ಶಿವಲಿಂಗಗಳಿಂದ ಅವತರಿಸಿ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದರು. ಅವರಲ್ಲಿ ಮೊದಲ ನೆಯವರು ರೇಣುಕಾಚಾರ್ಯರು. ಇವರು ಕೊಲ್ಲಿ ಪಾಕಿಯ ಸೋಮೇಶ್ವರಲಿಂಗದಿಂದ ಅವತರಿಸಿದರು. ಅವರು ಕೃತಾಯುಗದಲ್ಲಿ ಅವರಿಗೆ ಏಕಾಕ್ಷರ, ತೇತ್ರಾಯುಗದಲ್ಲಿ ಏಕವಕ್ತ್ರ ದ್ವಾಪರಯುಗದಲ್ಲಿ ರೇಣುಕಾ ಮತ್ತು ಕಲಿಯುಗದಲ್ಲಿ ರೇವಣಸಿದ್ಧ ಅಥವಾ ರೇವಣಾರಾಧ್ಯ ಎಂಬ ಹೆಸರುಗಳಿಂದ ಪ್ರಸಿದ್ಧರಾದರು ಎಂದರು.

ರೇಣುಕಾಚಾರ್ಯರು ಕೊಲ್ಲಿಪಾಕಿಯ ಸೋಮೇಶ್ವರಲಿಂಗದಿಂದ ಅವತರಿಸಿ ಮಲಯಾಚಲಕ್ಕೆ ಬಂದು ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ವೀರಶೈವ ಸಿದ್ಧಾಂತವನ್ನು ಜಗತ್ತಿಗೆ ಬೋಧಿಸಿದರು. ಕಲಿಯುಗದಲ್ಲಿ ಅದೇ ರೇಣುಕಾಚಾರ್ಯರು ರೇವಣಸಿದ್ಧ ಅಥವಾ ರೇವಣಾರಾಧ್ಯ ಎಂಬ ಹೆಸರಿನಿಂದ ಅವತರಿಸಿ ರಂಭಾಪುರಿ ಪೀಠದಲ್ಲಿದ್ದುಟ್ಟುಕೊಂಡು ವೀರಶೈವ ಸಿದ್ಧಾಂತವನ್ನು ಉಪದೇಶಿಸಿದರು ಎಂದರು.

### ಹರಿಹರನ ರಗಳೆ ಉಲ್ಲೇಖ

ಇತಿಹಾಸಕಾರರು ಮತ್ತು ಪ್ರಾಚೀನ ಕವಿಗಳು ರೇಣುಕಾಚಾರ್ಯ ಮತ್ತು ರೇವಣ ಸಿದ್ಧರನ್ನು ಒಬ್ಬರೇ ಎಂಬುದಾಗಿ ಸಮೀಕರಿಸಿ ತಮ್ಮ ಕಾವ್ಯಗಳನ್ನು ರಚನೆ ಮಾಡಿದ್ದಾರೆ. ಅವರಲ್ಲಿ ಹರಿಹರನು ಪ್ರಮುಖನು. ಹರಿಹರ ತನ್ನ ರೇವಣಸಿದ್ದೇಶ್ವರ ರಗಳೆಯಲ್ಲಿ ರೇವಣಸಿದ್ಧರು 1400 ವರ್ಷಗಳ ಕಾಲ ಅಂದರೆ 700 ವರ್ಷಗಳ ಕಾಲ ಗುಪ್ತವಾಗಿ, 700 ವರ್ಷಗಳ ಕಾಲ ಪ್ರಕಟವಾಗಿದ್ದರು ಎಂದು ನಿರೂಪಸಿದ್ದನ್ನು ನಂತರದ ವಿದ್ವಾಂಸರು ಒಬ್ಬನೇ ರೇವಣಸಿದ್ಧ ಎಂಬುದಾಗಿ ಪ್ರತಿಪಾದನೆ ಮಾಡಿದ್ದಾರೆ. ಆದರೆ ರೇವಣಸಿದ್ಧರು ಒಬ್ಬರೆ ಅಲ್ಲ, ಅದು ಒಂದು ಪರಂಪರೆ ಎಂದು ತಿಳಿಸಿದರು.

'ಶಿವಕುಲತಿಲಕ ಆಚಾರ್ಯ ಶ್ರೀ ರೇವಣಸಿದ್ಧೇಶ್ವರ' ಕೃತಿಯನ್ನು ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜಶೇಖರ್ ಬಿಡುಗಡೆ ಮಾಡಿದರು. ಗಾಯಕ ವಿಜಯೇಂದ್ರ ಮತ್ತು ತಂಡದವರು ಗೀತಗಾಯನ ನಡೆಸಿಕೊಟ್ಟರು.

ರಾಮನಗರ ತಾಲ್ಲೂಕಿನ ಅವ್ವೇರಹಳ್ಳಿ ಸಮೀಪದಲ್ಲಿರುವ ಶ್ರೀ ರೇವಣಸಿದ್ದೇಶ್ವರ ಕ್ಷೇತ್ರದಲ್ಲಿ ತಪಸ್ಸನ್ನು ಮಾಡಿದ್ದಂತಹ ರೇವಣಸಿದ್ಧರು ಒಬ್ಬರಾಗಿದ್ದು, ಅವರು 12 ನೇ ಶತಮಾನದ ನಂತರದಲ್ಲಿ ಇದ್ದ ರೇವಣ ಸಿದ್ಧರಿರಬಹುದು ಎಂದು ಅಭಿಪ್ರಾಯಪಟ್ಟರು.

ಈ ರೇವಣಸಿದ್ಧರು ಧರ್ಮ ಪ್ರಚಾರವನ್ನು ಮಾಡುತ್ತಾ ಇಲ್ಲಿಗೆ ಬಂದು ಇಲ್ಲಿನ ಪ್ರಶಾಂತ ರಮಣೀಯ ಪರಿಸರಕ್ಕೆ ಮಾರು ಹೋಗಿ ಅಲ್ಲಿಯೇ ಅನೇಕ ವರ್ಷಗಳ ಕಾಲ ತಪಸ್ಸನ್ನು ಮಾಡಿ ಆ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿದರು ಎಂದು ತಿಳಿಸಿದರು.

8ನೇ ಶತಮಾನದ ಆದಿ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗ ಮತ್ತು ರತ್ನಗರ್ಭ ಗಣಪತಿಯನ್ನು ರಂಭಾಪುರಿ ಪೀಠದ ಜಗದ್ಗುರುಗಳಾಗಿದ್ದ ಆ ಕಾಲದ ರೇವಣಸಿದ್ಧರು ಪ್ರದಾನ ಮಾಡಿರುವ ವಿಷಯ ಶೃಂಗೇರಿ ಪೀಠದ ಇತಿಹಾಸವನ್ನು ನಿರೂಪಿಸಿರುವ ಕಾಶಿಲಕ್ಷ್ಮಣಶಾಸ್ತ್ರಿ ವಿರಚಿತ ಗುರುವಂಶ ಕಾವ್ಯದಲ್ಲಿ ಪ್ರತಿಪಾದಿತವಾಗಿರುವುದನ್ನು ಉಲ್ಲೇಖಿಸಿದರು. ಬಸವಣ್ಣನವರ ಹಿರಿಯ ಸಮಕಾಲೀನರಾಗಿದ್ದ ಮತ್ತೊಬ್ಬ ರೇವಣಸಿದ್ಧರು ಸೊನ್ನಲಿಗೆ ಹೋಗಿ ಅಲ್ಲಿನ ಮುದ್ದುಗೌಡ ಮತ್ತು ಸುಗ್ಗಲಾದೇವಿ ದಂಪತಿಗಳಿಗೆ ದರ್ಶನವಿಟ್ಟು ಆಕೆಯ ಉದರವನ್ನು ಸ್ಪರ್ಶಿಸಿ ಕಾಯಕಯೋಗಿಯೂ ಶಿವಯೋಗಿಯೂ ಆದ ಪುತ್ರನು ನಿನ್ನ ಗರ್ಭದಲ್ಲಿ ಜನಿಸಲಿದ್ದಾನೆ ಎಂಬುದಾಗಿ ಆಶೀರ್ವದಿಸುತ್ತಾರೆ. ಈ ರೇವಣಸಿದ್ಧರ ಆಶೀರ್ವಾದದಿಂದ ಜನಿಸಿದವರೆ ಶಿವಯೋಗಿ ಸಿದ್ಧರಾಮೇಶ್ವರರ ಎಂದರು. ಸಮಾರಂಭದಲ್ಲಿ ನಿವೃತ್ತ ಡಿಜಿಪಿ ಎಲ್. ರೇವಣಸಿದ್ಧಯ್ಯ, ಗುಬ್ಬಿ ತೋಟದಪ್ಪ ಧರ್ಮ ಸಂಸ್ಥೆಯ ಕಾರ್ಯದರ್ಶಿ ಸದಾಶಿವಪ್ಪ, ಶ್ರೀ ರೇವಣ ಸಿದ್ದೇಶ್ವರ ಕ್ಷೇತ್ರಾಭಿವೃದ್ಧಿ ಸೇವಾ ಸಮಿತಿ ಟ್ರಸ್ಟಿನ ರೇಣುಕಾನಂದಸ್ವಾಮಿ, ಚನ್ನಬಸಪ್ಪ ಹಾಗೂ ಇತರು ಇದ್ದರು. ಸಾಧನ ಶಾಲೆಯ ಮುಖ್ಯಶಿಕ್ಷಕ ಎಂ.ಎಸ್. ಚನ್ನವೀರಪ್ಪ ನಿರೂಪಿಸಿದರು. ಗಂಗಾಬಿಕಾ ಸ್ವಾಗತಿಸಿದರು. ಶಿಕ್ಷಕಿ ಕೆ.ಆರ್. ವಿನುತಾ ಲೇಖಕರನ್ನು ಪರಿಚಯಿಸಿದರು. ಉಪನ್ಯಾಸಕ ವೇಣುಗೋಪಾಲ್ ವಂದಿಸಿದರು.

### ಎಸ್.ಆರ್.ಎಸ್ ಬೆಟ್ಟ – ಪ್ರಸಿದ್ಧ ಧಾರ್ಮಿಕ ಕ್ಷೇತ್ರ

'ಶಿವಕುಲತಿಲಕ ಆಚಾರ್ಯ ಶ್ರೀ ರೇವಣಸಿದ್ಧೇಶ್ವರ' ಕೃತಿಯ ಕರ್ತೃ ವಿದ್ವಾನ್ ಚಂದ್ರಶೇಖರಯ್ಯ ಮಾತನಾಡಿ ರಾಮನಗರದಲ್ಲಿರುವ ರೇವಣಸಿದ್ಧೇಶ್ವರ ಬೆಟ್ಟ ಪ್ರಸಿದ್ಧ ಧಾರ್ಮಿಕ ಸ್ಥಳವಾಗಿದೆ. ರೇವಣಸಿದ್ಧರನ್ನು ಕುರಿತು ಸರಳವಾಗಿ ಬರೆದಿದ್ದೇನೆ ಎಂದು ತಿಳಿಸಿದರು.

# ಬೀರೇಶ್ವರ, ಬಸವೇಶ್ವರರ ಉತ್ಸವ



ಮೈಸೂರು: ಮೈಸೂರು ತಾಲೂಕಿನ ಮೂಡಲ ಹುಂಡಿ ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಬೀರೇಶ್ವರ, ಬಸವೇಶ್ವರರ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು

ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ತಿ.ನರಸೀಪುರದ ತ್ರಿವೇಣಿ ಸಂಗಮ ಕ್ಷೇತ್ರಕ್ಕೆ ಬೀರೇಶ್ವರ, ಬಸವೇಶ್ವರ, ಬನ್ನಿಮಹಾಕಾಳೇಶ್ವರಿ(ಬನ್ನಮ್ಮ) ದೇವರ ಉತ್ಸವ ಮೂರ್ತಿಯನ್ನು ಸಂಪ್ರದಾಯದಂತೆ ಕೊಂಡೊಯ್ದು ಮಜ್ಜನ ಸೇವೆ ಮಾಡಿ ವಿಶೇಷ ಪೂಜೆ ಸಲ್ಲಿಸಿ ವರಕೋಡು ಗ್ರಾಮಕ್ಕೆ ತರಲಾಯಿತು. ಗುರುವಾರ ರಾತ್ರಿಯಿಡೀ ವರಕೋಡು ಗ್ರಾಮದಲ್ಲಿ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಮಂಗಳವಾದ್ಯದೊಂದಿಗೆ ನೆರವೇರಿಸಲಾಯಿತು. ಶುಕ್ರವಾರ ಬಡಗಲಹುಂಡಿ, ಕೆಂಪೇಗೌಡನಹುಂಡಿ ಹಾಗೂ ಹೊಸಹುಂಡಿ ಗ್ರಾಮದಲ್ಲಿ ಉತ್ಸವ ಮೂರ್ತಿಯ ಮೆರವಣಿಗೆ ನಡೆಸಲಾಯಿತು.

ಶುಕ್ರವಾರ ಸಂಜೆ 6.30ರಿಂದ ರಾತ್ರಿ 11.15 ರವರೆಗೆ ಮೂಡಲಹುಂಡಿ ಗ್ರಾಮದಲ್ಲಿ ಬೀರೇಶ್ವರ, ಬಸವೇಶ್ವರರ ಉತ್ಸವ ಮೂರ್ತಿ ಹಾಗೂ ಬನ್ನಿಮಹಾಕಾಳೇಶ್ವರಿಯ ಪೂಜಾ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ಮೆರವಣಿಗೆಯಲ್ಲಿ ಗ್ರಾಮದ ಕಂಸಾಳೆ ತಂಡ, ವೀರಮಕ್ಕಳ ತಂಡ, ಮಂಗಳವಾದ್ಯ, ತಮಟೆ ಮೇಳ ಜಾತ್ರೆಗೆ ಮೆರಗು ತುಂಬಿದವು. ಈ ವೇಳೆ ಗ್ರಾಮದ ಮಹಿಳೆಯರು ಬೀರೇಶ್ವರ ಹಾಗೂ ಮಲೆ ಮಹದೇಶ್ವರರ ಆರಾಧಿಸುವ ಜಾನಪದ ಗೀತೆ, ಸೋಬಾನೆ ಪದ ಹಾಡುತ್ತಾ ಯುಗಾದಿ ಪೂಜಾ ಮಹೋತ್ಸವಕ್ಕೆ ಕಳೆ ಕಟ್ಟಿದರು. ಬಳಿಕ ದೇವರ ಉತ್ಸವ ಮೂರ್ತಿಯನ್ನು ವರಕೋಡು ಗ್ರಾಮದ ಬೀರೇಶ್ವರ ದೇವಾಲಯಕ್ಕೆ ಕೊಂಡೊಯ್ದು ಇಡುವ ಮೂಲಕ ಯುಗಾದಿ ಜಾತ್ರಾ ಸಂಭ್ರಮಕ್ಕೆ ತೆರೆ ಎಳೆಯಲಾಯಿತು.

# ಬೊಮ್ಮನಹಳ್ಳಿ ಪಿಎಸಿಸಿ ಕಾಂಗ್ರೆಸ್ ತೆಕ್ಕೆಗೆ



ಗುಂಡ್ಲುಪೇಟೆ: ತಾಲ್ಲೂಕಿನ ಬೊಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸ್ಪರ್ಧಿಸಿದ ಕಾಂಗ್ರೆಸ್ ಪಕ್ಷದ ಚುಣಾಯಿತ ಅಭ್ಯರ್ಥಿಗಳು

10 ಅಭ್ಯರ್ಥಿಗಳಲ್ಲಿ 5 ಅಭ್ಯರ್ಥಿಗಳು ಅವಿರೋಧ ಆಯ್ಕೆ ಅದರಲ್ಲಿ ಐದು ಜನರಲ್ಲಿ ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಗಳು 100 ಮತಗಳ ಅಧಿಕ ಅಂತರದಲ್ಲಿ ಜಯಗಳಿಸಿದ್ದಾರೆ.

ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳೆಂದರೆ ಸಿದ್ದರಾಜು ಕುರುಬರಹುಂಡಿ, ರಾಜಮ್ಮ ರಾಮಯ್ಯನಪುರ, ಶಿವಸ್ವಾಮಿ ಕಡಬೂರು, ದೊಡ್ಡಮ್ಮ ಬೊಮ್ಮನಹಳ್ಳಿ ,ಕುನ್ನಮಣಿಯಯ್ಯ ಅವಿರೋಧವಾಗಿ ಅಯ್ಕೆಯಾದರೆ ಚುನಾವಣೆಯಲ್ಲಿ ಬೊಮ್ಮನಹಳ್ಳಿ ಜಿ ಮಡಿವಾಳಪ್ಪ , ಪ್ರಭುಸ್ವಾಮಿ ಮತ್ತು ಸಿದ್ದರಾಜು ಚಿರಕನಹಳ್ಳಿ,ಚನ್ನಬಸಪ್ಪ , ಶಿವಣ್ಣರವರು 100 ಮತಗಳಿಗೂ ಹೆಚ್ಚಿನ ಅಂತರದಲ್ಲಿ ಜಯಗಳಿಸಿದ್ದಾರೆ.

ಈ ಸಂದರ್ಭದಲ್ಲಿ ಬೊಮ್ಮನಹಳ್ಳಿ, ಕುರುಬರ ಹುಂಡಿ, ರಾಮಯ್ಯನಪುರ, ಕಡಬೂರು, ಚಿರಕನ ಹಳ್ಳಿ ಗ್ರಾಮದ ಮುಖಂಡರು ಭಾಗಿಯಾಗಿದ್ದರು.

# ಬಿರುಗಾಳಿ ಸಹಿತ ಮಳೆ : ತೆಂಗಿನ ಮರ ಬಿದ್ದು ದೇವರಗುಡ್ಡ ಸಾವು

ಚಾಮರಾಜನಗರ, ಯುಗಾದಿ ಹಬ್ಬದ ಹಿಂದಿನ ಬಿದ್ದ ಬಿರುಗಾಳಿ ಸಹಿತ ಮಳೆಯಿಂದ ತೆಂಗಿನ ಮರ ಬಿದ್ದು ರೈತನೊಬ್ಬ( ದೇವರಗುಡ್ಡ) ಮೃತಪಟ್ಟಿರುವ ಘಟನೆ ತಾಲೂಕಿನ ಅರಳೀಪುರ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಅರಳೀಪುರ ಗ್ರಾಮದ ರೈತ ಹಾಗೂ ದೇವರಗುಡ್ಡರಾಗಿದ್ದ ರೇವಣ್ಣ (55) ಮೃತಪಟ್ಟರು. ಜೋರು ಬಿರುಗಾಳಿ ಸಹಿತ ಮಳೆ ಬುಧವಾರ ರಾತ್ರಿ ಸುರಿಯುತ್ತಿದ್ದಾಗ ರೇವಣ್ಣ ತಮ್ಮ ಜಮೀನಿನಿಂದ ಮನೆಗೆ ಹಿಂದಿರುಗ ಸಮಯದಲ್ಲಿ ತೆಂಗಿನ ಮರ ಮುರಿದು ರೇವಣ್ಣ ಅವರ ತಲೆ ಮೇಲೆ ಬಿದ್ದಿದೆ. ಹೀಗಾಗಿ ಸ್ಥಳದಲ್ಲಿಯೇ ರೇವಣ್ಣ (ದೇವಗುಡ್ಡ ) ಅವರು ಮೃತಪಟ್ಟಿದ್ದಾರೆ. ರಾತ್ರಿ ಬಹಳ ಸಮಯವಾದರು ರೇವಣ್ಣ ಮನೆ ಬರದ ಹಿನ್ನೆಲೆಯಲ್ಲಿ ಕುಟುಂಬದವರು ಹುಡುಗಿಕೊಂಡು ಹೋದಾಗ ರೇವಣ್ಣ ತೆಂಗಿನ ಮರ ಬಿದ್ದು ತೀವ್ರ ರಕ್ತಸ್ರಾವದಿಂದ ಮೃತಪಟ್ಟಿರುವುದು ದೃಢಪಟ್ಟಿದೆ. ನಂತರ ಸ್ವಗ್ರಾಮದಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

# ಮಾ.25ರಂದು ಉಚಿತ ನೇತ್ರ ತಪಾಸಣಾ, ಶಸ್ತ್ರ ಚಿಕಿತ್ಸಾ ಶಿಬಿರ

ಕೆ.ಆರ್.ನಗರ: ಕ್ಷೇತ್ರದ ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾ.25ರಂದು ಉಚಿತ ನೇತ್ರ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜನೆ ಮಾಡಲಾಗಿದೆ



ಎಂದು ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ. ಆರ್.ಶ್ಯಾಮಸುಂದರ್ ತಿಳಿಸಿದ್ದಾರೆ.

ಅವರು ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿ ಮೈಸೂರು ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಕರುನಾಡ ದೀಪ ಸೇವಾ ಟ್ರಸ್ಟ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ, ತಾಲೂಕು ಆರೋಗ್ಯ ಅಧಿಕಾರಿಗಳು, ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಸಹಯೋಗದಲ್ಲಿ ಮಾ.25ರ ಬುಧವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡಿಸಿಕೊಳ್ಳಬೇಕೆಂದು ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ. ಆರ್.ಶ್ಯಾಮಸುಂದರ್ ಮನವಿ ಮಾಡಿದ್ದಾರೆ.

# ರಂಜಾನ್: ಮಜ್ಜಿಗೆ ವಿತರಿಸಿ ಶುಭಾಶಯ ಕೋರಿದ ಕೆ.ಶೇಷಾದ್ರಿ

ರಾಮನಗರ: ರಂಜಾನ್ ಹಬ್ಬದ ವೇಳೆ ಆಹಾರ ತ್ಯಜಿಸಿ ಉಪವಾಸ ಮಾಡುವುದು ಮಾತ್ರವಲ್ಲ, ಕೆಟ್ಟ ಆಲೋಚನೆಗಳು, ಸುಳ್ಳು, ಅಸೂಯೆ ಮತ್ತು ದ್ವೇಷವನ್ನು ತ್ಯಜಿಸಿ, ಮನಸ್ಸು ಮತ್ತು ಆತ್ಮವನ್ನು ಶುದ್ಧೀಕರಿಸುವ ಪ್ರಕ್ರಿಯೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅಭಿಪ್ರಾಯಪಟ್ಟರು.

ನಗರದ ಈದ್ಗಾ ಮೈದಾನದಲ್ಲಿ ಈದ್-ಉಲ್-ಫಿತುರ್ ಪ್ರಯುಕ್ತ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಮುಸ್ಲಿಂ ಬಾಂಧವರಿಗೆ ಗಾಂಧಿ ಉದ್ಯಾನವನದ ಬಳಿ ಏರ್ಪಡಿಸಿದ್ದ ತುಂಪು ಪಾನಿಯ, ಮಜ್ಜಿಗೆ ವಿತರಿಸಿ, ಶುಭಾಶಯ ಕೋರಿದ ವೇಳೆ ಅವರು ಮಾತನಾಡಿದರು. ಒಂದು ತಿಂಗಳ ಕಾಲ ಮುಸ್ಲಿಂ ಬಾಂಧವರು ಈ ಧಾರ್ಮಿಕ ನಿಯಮಗಳನ್ನು ಪಾಲಿಸಿದ್ದಾರೆ ಎಂದರು. ರಂಜಾನ್ ಹಬ್ಬದ ಕೊನೆ ದಿನ ಮುಸ್ಲಿಂ ಬಾಂಧವರೆಲ್ಲ ಈದ್ಗ ಮೈದಾನದಲ್ಲಿ ಕಲೆಯುತ್ತಾರೆ. ಧರ್ಮ ಗುರುಗಳ ಪ್ರವಚನ, ಸಂದೇಶದ ನಂತರ ಅಲ್ಲಾಹುರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ತದನಂತರ ಹಬ್ಬದ



ಶುಭಾಶಯಗಳನ್ನು ವಿನಿಮಯ ಮಾಡುತ್ತಾರೆ. ರಾಮನಗರದಲ್ಲಿ ಈ ಪರಂ ಪರೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ ಎಂದರು. ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಸುರೇಶ್ (ದೊಡ್ಡಿ),

### ಸಾವಿರಾರು ಮಂದಿಗೆ ಪಾನಿಯ ವಿತರಣೆ

ಈದ್ಗ ಮೈದಾನದಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಹಿಂದುರಿಗಿದ ಮುಸಲ್ಮಾನ ಬಾಂಧವರಿಗೆ ನ್ಯಾಯಾಲಯದ ರಸ್ತೆಯಲ್ಲಿರುವ ಗಾಂಧಿ ಉದ್ಯಾನವನದ ಬಳಿ ಬೃಹತ್ ಪೆಂಡಾಲ್ ಅಳವಡಿಸಿದ್ದ ಕೆ.ಶೇಷಾದ್ರಿ, ಸಾವಿರಾರು ಮಂದಿಗೆ ತಂಪು ಪಾನಿಯ ಮತ್ತು ಮಜ್ಜಿಗೆ ವಿತರಿಸಿದರು. ಸಾವಿರಕ್ಕೂ ಅಧಿಕ ಮಂದಿಗೆ ಶುಭಾಶಯ ಕೋರಿದರು.

ನಗರಸಭೆ ಸದಸ್ಯ ಮುತ್ತುರಾಜು, ನಗರಾಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಪ್ರವೀಣ್, ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಭೂ?ಣ್, ಮುಖಂಡರಾದ ಹಾಲಿನಚಂದ್ರು, ಕಬ್ಬಡಿವಿಜಿ, ದೇವರಾಜು, ಮಲ್ಲೇಗೌಡ, ರಾಮು, ಪ್ರಮೋದ್ (ಮೋದಿ), ಉಮಾಶಂಕರ್, ಲವ, ನಂದೀಶ್, ಶಿವರಾಜು ಮತ್ತಿತರರು ಇದ್ದರು.

# 23ರಂದು ನಗರದಲ್ಲಿ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ

ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯಕ್ತಾಶ್ರಯದಲ್ಲಿ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ಮಾರ್ಚ್ 23ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ದೇವರ ದಾಸಿಮಯ್ಯ ಭಾವಚಿತ್ರದ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು. ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ ಮತ್ತು ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ (ಮುನ್ನ) ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕೊಳ್ಳೇಗಾಲ ಸಾಹಿತಿಗಳಾದ ಡಾ. ಎನ್. ಮಧುಸೂದನ ಅವರು ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

# ಗುಂಡ್ಲುಪೇಟೆ: ಟಿಪ್ಪರ್‌ಗಳ ಹಾವಳಿ ತಡೆಯಲು ಕ್ರಮ



ಗುಂಡ್ಲುಪೇಟೆ: ತಾಲೂಕಿನಲ್ಲಿ ಟಿಪ್ಪರ್‌ಗಳ ಹಾವಳಿ ಸಂಚಾರ ನಿಯಮ ಉಲ್ಲಂಘಿಸಿ ಕೇರಳಕ್ಕೆ ತಾಲೂಕಿನ ಸಂಪತ್ತು ಲೂಟಿ ವಿಚಾರವಾಗಿ ಕಡಿವಾಣ ಹಾಕಲು ಹಾಗೂ ಮಾಜಿ ಶಾಸಕ ನಿರಂಜನ್ ಕುಮಾರ್ ಅರೋಪಕ್ಕೆ ವಿರುದ್ಧವಾಗಿ ಪಟ್ಟಣದ ಹೊಸ ಪ್ರವಾಸಿ ಮಂದಿರದಲ್ಲಿ ಶಾಸಕ ಎಚ್ ಎಂ ಗಣೇಶ ಪ್ರಸಾದ್ ಪತ್ರಿಕಗೋಷ್ಠಿ ನಡೆಸಿದರು

ಲಾರಿಗಳ ವಿಚಾರವಾಗಿ ಕಡಿವಾಣ ಹಾಕಲು ಜಿಲ್ಲಾಧಿಕಾರಿಗಳು ತಹಶೀಲ್ದಾರ್ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅರ್ ಟಿ ಓ ಹಾಗೂ ಪೊಲೀಸ್ ಇಲಾಖೆಯ ಗಮನಕ್ಕೆ ತರಲಾಗಿದೆ, ಕರಿಕಲ್ಲು ತ್ಯಾಜ್ಯ ಮಾತ್ರ ಕೇರಳಕ್ಕೆ ಸಾಗಾಣೆಯಾಗುತ್ತಿದ್ದು , ಟನ್ ಸರಿಯಾಗಿ ಹಾಕಬೇಕು ಓವರ್ ಲೋಡ್ ಓವರ್ ಸ್ಪೀಡ್ ಗೆ ಕಡಿವಾಣ ಹಾಕಿ ಯಾವುದೇ ಒತ್ತಡಕ್ಕೆ ಒಳಗಾಗಬೇಡಿ ಓವರ್ ಕಂಡು ಬಂದರೆ ಸೀಜ್ ಮಾಡಿ ಸಾರ್ವಜನಿಕ ಜೀವದ ಜೊತೆ ಆಟವಾಡುವ ವಿರುದ್ಧ ಕ್ರಮ ವಹಿಸಿ ಎಂದು ಹೇಳಿದ್ದೇನೆ ಎಂದರು ,

ಮಾಜಿ ಶಾಸಕ ನಿರಂಜನ್ ಕುಮಾರ್ ಅವರ ರೀತಿ ಅಧಿಕಾರ ದುರುಪಯೋಗ ಪಡಿಸಿಕೊಳ್ಳುವ ಅವಶ್ಯಕತೆ ಇಲ್ಲ ಕರಿಕಲ್ಲು ಕೇರಳಕ್ಕೆ ಸಾಗಿಸಲು ಅನುಮತಿ ನೀಡಿರುವುದೇ ಬಿಜೆಪಿ ಸರ್ಕಾರದ ಅವಧಿಯಲ್ಲಿ 2021–22 ರ ಅವದಿಯಲ್ಲಿ ಇವರೇ ಅನುಮತಿ ನೀಡಿದ್ದಾರೆ, ಆದರೆ ಪರ್ಮಿಟ್ ವಂಚಿಸಿ ಓವರ್ ಲೋಡ್ ಸಾಗಾಣೆ ಮಾಡುವವರ ವಿರುದ್ದ ಕ್ರಮ ಕೈಗೊಳ್ಳಬೇಕು ಎಂಬುದು ನಮ್ಮ ಆಗ್ರಹ ಎಂದರು.

ಪರ್ಮಿಟ್ ಇದೆ ಎಂದು ದಿನಕ್ಕೆ ಹತ್ತು ಲಾರಿ ಹದಿನೈದು ಲಾರಿ ಕೊಡಲು ಹಾಗಲ್ಲ, ಎಷ್ಟು ಲಾರಿಗೆ ಪರ್ಮಿಟ್ ಇದೆ ಅಷ್ಟು ಮಾತ್ರ ಅವಕಾಶ ನೀಡಬೇಕು ಇದರ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಆರ್ ಟಿಓ ಇಲಾಖೆ ಕಣ್ಣಿಡಬೇಕು ಎಂದರು.

**ಬಿಳಿಕಲ್ಲು ಕೇರಳಕ್ಕೆ ಸಾಗಾಟ ಮಾಡುವಂತಿಲ್ಲ:**

ಕರಿಕಲ್ಲು ತ್ಯಾಜ್ಯ ಸಾಗಾಟಕ್ಕೆ ಅವಕಾಶವಿದೆ ಆದರೆ ಬಿಳಿಕಲ್ಲು ಕೇರಳಕ್ಕೆ ಕೊಂಡೊಯ್ಯುವಂತಿಲ್ಲ ಅಂತಹ ಅನುಮಾನ ಇದರ ಬಗ್ಗೆ ಕಂಡು ಬಂದಲ್ಲಿ ಆರ್ ಟಿಓ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕ್ರಮ ಕೈಗೊಳ್ಳಬೇಕು ಇಂತಿಷ್ಟೆ ಪ್ರಮಾಣದಲ್ಲಿ ಗಣಿಗಾರಿಕೆಯಲ್ಲಿ ಕಲ್ಲು ತೆಗೆಯಲು ಅವಕಾಶವಿದ್ದು ಇಷ್ಟ ಬಂದಷ್ಟು ತೆಗೆಯುವ ಹಾಗಿಲ್ಲ ಇದನ್ನು ಅಧಿಕಾರಿಗಳು ಪರಿಶೀಲಿಸಬೇಕು ಎಂದರು.

ಬಿಜೆಪಿ ಕಚೇರಿ ರಿಯಲ್ ಎಸ್ಟೇಟ್ ಆಫೀಸ್ ಮಾಡಿಕೊಂಡಿದ್ದಾರೆ ಎಲ್ಲಿ ಜಮೀನು ಸಿಗುತ್ತೆ ಎಲ್ಲಿ ಇನ್ವೆಸ್ಟ್ ಮಾಡಬಹುದು ಎಂಬುದನ್ನು ಕಚೇರಿಯಲ್ಲೆ ಮಾಡುತ್ತಾರೆ ಎಂದು ಬಿಜೆಪಿ ಮುಖಂಡರೆ ನಮ್ಮಜೊತೆ ಹೇಳುತ್ತಾರೆ , ಇವರು ಗುಂಡ್ಲುಪೇಟೆ ಯಲ್ಲಿ ಇವರ ಅದಿಕಾರ ಅವಧಿಯಲ್ಲಿ ಏನೇನು ಮಾಡಿದ್ದಾರೆ ಎಂಬುವುದು ನಮಗೆ ಗೊತ್ತಿಲ್ಲವೇ ಎಂದರು. ಈ ಸಂದರ್ಭದಲ್ಲಿ ಮಾಜಿ ಕಾಡಾ ಅಧ್ಯಕ್ಷ ಹೆಚ್ ಎಸ್ ನಂಜಪ್ಪ, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಜಿ.ಪಂ ಉಪಾಧ್ಯಕ್ಷ ಕೆ,ಎಸ್ ಮಹೇಶ್, ಮಾಜಿ ಜಿ.ಪಂ ಸದಸ್ಯ ನವೀನ್ ಕೆರೆಹಳ್ಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಹಾಪ್ ಕಾಮ್ಸ್ ಅಧ್ಯಕ್ಷ ನಾಗೇಶ್, ಎಪಿಎಂಸಿ ಅಧ್ಯಕ್ಷ ನಾಗರಾಜು, ಮಹದೇವಸ್ವಾಮಿ ಕುರುಬರಹುಂಡಿ, ಬಿ ಜಿ ಶಿವಕುಮಾರ್ ಜಿ , ಮದುಸೂಧನ್ ,ಅಣ್ಣಯ್ಯಸ್ವಾಮಿ, ಬಸವರಾಜು ಹಾಲಹಳ್ಳಿ ಲೋಕೇಶ್. ಮಣಿ ಮಡಹಳ್ಳಿ,ಪ್ರಮೋದ್ ಮತ್ತಿತರರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಚಾಮರಾಜನಗರ: ಬಂಡೀಡಿಗೆರ ಗ್ರಾಮದಲ್ಲಿ 50ಲಕ್ಷ,ರೂ, ವೆಚ್ಚದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಂದ ಭೂಮಿಪೂಜೆ ನಂತರ ಮಾತನಾಡಿ, ವಿಶೇಷ ಅಭಿವೃದ್ಧಿ ಅನುದಾನ ಯೋಜನೆಯಡಿ ಯಲ್ಲಿ ಬಂಡಿಗೆರ ಗ್ರಾಮದ ಉಪ್ಪಾರ ಬೀದಿಗೆ 50ಲಕ್ಷ,ರೂ, ವೆಚ್ಚದಲ್ಲಿ ರಸ್ತೆ, ಚರಂಡಿ ನಿರ್ಮಾಣ ಮಾಡಲಾಗುತ್ತಿದೆ.

ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ದರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ ಆಶ್ರಯಮನೆ ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರಕಾರ ಮಂಜೂರುಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕ ವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಕಾಮಗಾರಿ ನಿರ್ವಹಣೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದರು.

ಇದೇವೇಳೆ ಗ್ರಾಮಕ್ಕೆ ಮೂಲಸೌಕರ್ಯ ಕಲ್ಪಿಸುವಂತೆ ಶಾಸಕರಲ್ಲಿ ಮನವಿ ಮಾಡಿದರು.

ತಾ.ಪಂ ಮಾಜಿ ಸದಸ್ಯ ಎಚ್,ಎಂ,ನಹದೇವಶೆಟ್ಟಿ, ಮಾಜಿ ಗ್ರಾ.ಪಂ ಅಧ್ಯಕ್ಷ ಮಂಜುನಾಥ್, ಎ,ಪಿ,ಎಂ,ಸಿ ಮಾಜಿ ಅಧ್ಯಕ್ಷ ಸೋಮೇಶ್, ಗಡಿಯಜಮಾನ ಜಯಸ್ವಾಮಿ, ಮುಖಂಡರಾ ಕೃಷ್ಣಶೆಟ್ಟಿ, ಶಿವಯ್ಯಶೆಟ್ಟಿ,ದಿನೇಶ್,ಪಿ,ಎ,ಸಿ,ಸಿ ನಿರ್ದೇಶಕ, ಬಂಗಾರನಾಯಕ,ಗೌಡಿಕೆ ಶಿವರಾಮ್, ಕೇಶವಮೂತಿ ? ,ಶಿವಣ್ಣಶೆಟ್ಟಿ, ರಂಗಸ್ವಾಮಿ, ರವಿಕುಮಾರ್, ಗ್ರಾಮಸ್ಥರು ಹಾಜರಿದ್ದರು

# ಕಟಾವಿಗೆ ಬಂದಿದ್ದ ಬಾಳೆ ಫಸಲು ನಾಶ



ಚಾಮರಾಜನಗರ: ಇತ್ತೀಚೆಗೆ ಸುರಿದ ಧಾರಾಕಾರ ಮಳೆ,ಗಾಳಿಗೆ ರಾಮಸಮುದ್ರದಲ್ಲಿ ಬಾಳೆ ಬೆಳೆ ಸಂಪೂರ್ಣವಾಗಿ ನೆಲಕಚ್ಚಿದ್ದು,

ಕಟಾವಿಗೆ ಸಿದ್ಧವಾಗಿದ್ದು, ನಾಳೆ ಬಾಳೆ ಕಟಿಂಗ್ ವ್ಯಾಪಾರಿಗಳು ಬರುತ್ತಿದ್ದರು. ಕಾಸು ಕೈಸೇರುವ ಮೊದಲೇ ಬಾಳೆ ನಾಶವಾಗಿದೆ. ರೈತರಲ್ಲಿ ಆತಂಕ ತಂದಿದೆ. ರಾಮಸಮುದ್ರ ಗ್ರಾಮದ ಮಹಾದೇವಸ್ವಾಮಿ ( ರಾಜು ) ಎಂಬ ರೈತರಿಗೆ ಸೇರಿದ ,1.5 ಎಕರೆ ಪ್ರದೇಶದ ಸುಮಾರು 1500ಕ್ಕೂ ಹೆಚ್ಚು ಬಾಳೆ ಗಿಡಗಳು ನೆಲಸಮವಾಗಿದ್ದು, ಸುಮಾರು ಒಂದು ಲಕ್ಷಕ್ಕೂ ಹೆಚ್ಚು ರೂ.ನಷ್ಟವಾಗಿದೆ. ಬಾಳೆಗೆ ಫಸಲಿಗೆ ಮಾಡಿದ ಸಾಲ ಬಡ್ಡಿ ಕಟ್ಟಲು ತೊಂದರೆ ಆಗಿದೆ. ಜಿಲ್ಲಾಡಳಿತ ಸೂಕ್ತ ಪರಿಹಾರ ನೀಡಬೇಕು ಎಂದು ನಷ್ಟಕ್ಕೊಳಗಾದ ರೈತ ಮಹಾದೇವಸ್ವಾಮಿ ಆಳಲು ತೊಡಗಿಕೊಂಡಿದ್ದಾರೆ.

# ಆತ್ಮ, ದೇಹ ಶುದ್ಧೀಕರಿಸುವ ರಂಜಾನ್

## ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ | ಪ್ರಯುಕ್ತ ನಡೆದ ವಿಶೇಷ ಪ್ರಾರ್ಥನಾ ಸಭೆ

ರಾಮನಗರ: ಆತ್ಮ ಮತ್ತು ದೇಹಗಳನ್ನು ಶುದ್ಧೀಕೊರಿಸಿಕೊಳ್ಳಲು ಅವಕಾಶ ನೀಡುವ ಪವಿತ್ರವಾದ ಮಾಸ ರಂಜಾನ್ ಆಚರಣೆ. ನಮ್ಮ ಗಳಿಕೆಯ ಒಂದು ಪಾಲನ್ನು ಬಡವರಿಗೆ ಹಂಚಿ ಅವರನ್ನು ಸಂತೋಷಪಡಿಸುವುದು ಸೇರಿದಂತೆ ಇಸ್ಲಾಂ ಧರ್ಮದ ಅನೇಕ ಮೌಲ್ಯಗಳನ್ನು ಎತ್ತಿಹಿಡಿಯವ ಮಾಸವೂ ಹೌದು ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಈದ್ಗ ಮೈದಾನದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ನಡೆದ ವಿಶೇಷ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ನಂತರ ಅವರು ಮಾಧ್ಯಮ ಪತ್ರಿನಿಧಿಗಳ ಬಳಿ ಮಾತನಾಡಿದರು.

ಇದು ಪವಿತ್ರವಾದ ಮಾಸ. ಉಪವಾಸ ಮಾಡುವುದು ಮಾತ್ರವಲ್ಲಿ ಮನುಷತ್ವವವನ್ನು ರೂಢಿಸಿಕೊಳ್ಳವ ಮಾಸ. ಇಸ್ಲಾಂ ಧರ್ಮದ ಮೌಲ್ಯಗಳನ್ನು ಜೀವಂತ ಮಾಡುವುದಕ್ಕೆ ಸಿಗುವ ಅವಕಾಶ. ಇಡೀ ವಿಶ್ವದಲ್ಲಿ ಮುಸ್ಲೀಂ ಬಾಂಧವರು ಬಹಳ ಭಕ್ತಿಯಿಂದ ಈ ಮಾಸವನ್ನು ಆಚರಿಸುತ್ತಾರೆ ಎಂದರು.

ವಿಶ್ವದಲ್ಲ ಎಲ್ಲರೂ ಒಗ್ಗಟ್ಟಿನಿಂದ ಇದ್ದೇವೆ. ನಂಬಿಕೆ, ವಿಶ್ವಾಸದಿಂದ ಬದುಕು ಕಟ್ಟಿಕೊಳ್ಳವಂತಾಗಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು.

**ಇರಾನ್ ಯುದ್ಧ, ತಟ್ಟುತ್ತಿದೆ ಬೆಲೆ ಏರಿಕೆಯ ಬಿಸಿ**

ಗಲ್ಫ್ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ದದಿಂದಾಗಿ ನಮ್ಮ ದೇಶದಲ್ಲೂ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬಿಸಿ ತಟ್ಟಲಾರಂಭಿಸಿದೆ ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು. ಶೇ 80ರಷ್ಟು ಪೆಟ್ರೋಲ್, ಡೀಸಲ್ ಮತ್ತು ಅಡುಗೆ ಅನೀಲವನ್ನು ಭಾರತ ಆಮದು ಮಾಡಿಕೊಳ್ಳುತ್ತಿದೆ. ಯುದ್ದದಿಂದಾಗಿ ಸಮಸ್ಯೆಗಳು ಎದುರಾಗಿದೆ. ಅಡುಗೆ ಅನಿಲ ಅಲಭ್ಯವಾಗುತ್ತಿದೆ. ಅನೇಕ ಹೋಟೆಲ್‌ಗಳು ಮುಚ್ಚಿವೆ. ಪೆಟ್ರೋಲ್ ಬೆಲೆ ಏರಿಕೆಯಾಗಿದೆ, ಇದರ ಬಿಸಿ ತಟ್ಟುತ್ತಿದೆ ಎಂದರು.

ಡ್ರೈಫ್ರೂಟ್ಸ್ ಬೆಲೆ ಹೆಚ್ಚಳವಾಗಿರುವ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಅವರು, ಖರ್ಜೂರ ಸೇರಿದಂತೆ ಡ್ರೈಫ್ರೂಟ್ಸ್ ಕೂಡ ಆಮದಾಗುತ್ತಿದೆ, ಹೀಗಾಗಿ ಅದರ ಬೆಲೆ ಏರಿಕೆಯು ಆಗಿದೆ ಎಂದರು.



### ಸಚಿವ ಸ್ಥಾನ ಬಯಸಿ ಮೊದಲ ಬಾರಿ ಗೆದ್ದ ಶಾಸಕರ ಸಭೆ

**ಮೂರ್‍ನಾಲ್ಕು ಬಾರಿ ಶಾಸಕರಾಗಿ ಗೆದ್ದವರು ಸಚಿವರಾಗಲು ಬಯಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಪ್ರಿಯಾಂಕ ಖರ್ಗೆ ಮುಂತಾದವರು ಮೊದಲನೆ ಬಾರಿಗೆ ಗೆದ್ದು ಸಚಿವರಾಗಿದ್ದಾರೆ. ಈ ನಾಯಕರು ಈ ವಿಚಾರವನ್ನು ಹೇಳಿಕೊಂಡಿದ್ದಾರೆ. ಹೀಗಾಗಿ ಒಂದು, ಎರಡು ಬಾರಿ ಗೆದ್ದ ಶಾಸಕರು ಸಹ ಸಚಿವರಾಗಲು ಬಯಸಿ ಸಭೆ ಸೇರಿದ್ದೆವು. ಸುಮಾರು 55 ಮಂದಿ ಭಾಗವಹಿಸಿದ್ದೆವು. ನಮ್ಮ ಅಭಿಪ್ರಾಯಗಳು, ಉದ್ದೇಶಗಳನ್ನು ಮುಖ್ಯ ಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳ ಬಳಿ ಹೇಳಿಕೊಳ್ಳಲು ಈ ಸಭೆಯ ಉದ್ದೇಶವಾಗಿತ್ತು ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದರು.**

### ಪರಸ್ಪರ ಆಲಂಗನ

**ರಂಜಾನ್ ಮಾಸ ಮುಕ್ತಾಯದ ಹಿನ್ನಲೆಯಲ್ಲಿ ನಗರದ ಸಾವಿರಾರು ಮುಸಲ್ಮಾನರು ಇಲ್ಲಿನ ಈದ್ಗ ಮೈದಾನದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈದ್ಗ ಮೈದಾನ ತುಂಬಿದ್ದರಿಂದ ಮುಂಭಾಗದ ಬೆಂಗಳೂರು ಮೈಸೂರು ಹೆದ್ದಾರಿಯಲ್ಲೂ ನಮಾಜ್ ಪ್ರಕ್ರಿಯೆ ನಡೆಯಿತು. ಈ ವೇಳೆ ಭಾಗವಹಿಸಿದ ಪುಟ್ಟ ಮಕ್ಕಳು ದೊಡ್ಡವರನ್ನು ಅನುಕರಿಸಿ ಪ್ರಾರ್ಥನೆ ಮಾಡಿದರು. ತದ ನಂತರ ತಮ್ಮ ಹಿರಿಯರನ್ನು ಅನುಸರಿಸಿ ಪರಸ್ಪರ ಆಲಂಗಿಸಿಕೊಂಡು ಶುಭಾಶಯಗಳನ್ನು ಕೋರಿದರು.**

ಮುಸಲ್ಮಾನರು ಡ್ರೈಫ್ರೂಟ್ಸ್ ಸೇವನೆಯ ಬಗ್ಗೆ ಮಾತನಾಡಿದ ಅವರು ಮೊಹಮ್ಮದ್ ಫೈಗಂಬರ್ ಅವರು ತಮ್ಮ ಜೀವಿತಾವಧಿಯಲ್ಲಿ ಖರ್ಜೂರವೇ ಅವರ ಆಹಾರವಾಗಿತ್ತು. ಅಂದು ಅನೇಕರು ಖರ್ಜೂರ ತಿಂದು ಜೀವನ ಸಾಗಿಸುತ್ತಿದ್ದರು. ಖರ್ಜೂರ ದೇಹಕ್ಕೆ ಶಕ್ತಿ ಮತ್ತು ಬುದಕಿಗೆ ಸ್ಫೂರ್ತಿ ಕೊಡುತ್ತದೆ ಎಂಬ ನಂಬಿಕೆ ಇಂದಿಗೂ ಇದೆ. ಹೀಗಾಗಿ ಖರ್ಜೂರ ಸೇವನೆಗೆ ಆದ್ಯತೆ ಕೊಡುತ್ತೇವೆ ಎಂದರು. ಮೆಕ್ಕ, ಮದೀನ ಪ್ರವಾಸದ ವೇಳೆ ಖರ್ಜೂರ ಬೆಳೆಯುವ ತೋಟಗಳನ್ನು ನೋಡಬಹುದು. ಪೈಗಂಬರ್ ಅವರು ಖರ್ಜೂರ ಸೇವಿಸುತ್ತಿದ್ದ ತೋಟಗಳು, ಅವರು ವಾಸಿಸುತ್ತಿದ್ದ ಮನೆ, ನೀರು ಸೇವಿಸುತ್ತಿದ್ದ ಬಾವಿ ಮುಂತಾದ ಪವಿತ್ರವಾದ ಸ್ಥಳಗಳನ್ನು ನೋಡಲು ಸಿಗುತ್ತವೆ. ಈಗ ಯುದ್ದದಿಂದಾಗಿ ಡ್ರೈಫ್ರೂಟ್ಸ್‌ಗೂ ಸಮಸ್ಯೆ ಆಗಿದೆ. ಆರ್ಥಿಕತೆಗೂ ಸಮಸ್ಯೆಯಾಗುತ್ತಿದೆ ಎಂದು ತಿಳಿಸಿದರು. ಪ್ರಾರ್ಥನೆ ವೇಳೆ ಶಾಸಕ ಇಕ್ಬಾಲ್ ಹುಸೇನ್, ನಗರಸಭೆ ಮಾಜಿ ಅಧ್ಯಕ್ಷ ಸೈಯದ್ ಜಿಯಾವುಲ್ಲಾ ಸೇರಿದಂತೆ ಗಣ್ಯರು ಭಾಗವಹಿಸಿದ್ದರು.

# ವೈಭವದ ಹನುಮಂತೋತ್ಸವ



**ಹೊಳೆನರಸೀಪುರ:** ಪಟ್ಟಣದ ಪ್ರಸಿದ್ಧ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ದೇವಾಲಯದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಹನುಮಂತೋತ್ಸವವು ಗುರುವಾರ ರಾತ್ರಿ ಅತ್ಯಂತ ವೈಭವದಿಂದ ಜರುಗಿತು.

ಹಬ್ಬದ ಪ್ರಯುಕ್ತ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿಯ ಮೂಲ ಮೂರ್ತಿಗೆ ಪಂಚಾಮೃತ ಅಭಿಷೇಕ, ಅರ್ಚನೆ ಹಾಗೂ ವಿಶೇಷ ಅಲಂಕಾರಗಳನ್ನು ಮಾಡಲಾಗಿತ್ತು. ಶ್ರೀ ಉತ್ತರಾದಿ ಮಠದ ವತಿಯಿಂದ ಸಮರ್ಪಿಸಲಾದ ವಜ್ರಖಚಿತ ಆಭರಣಗಳಿಂದ ಸ್ವಾಮಿಯನ್ನು ಕಂಗೊಳಿಸುವಂತೆ ಶೃಂಗರಿಸಲಾಗಿತ್ತು. ನಿತ್ಯಾರಾಧನೆ, ಬಲಿ ಪ್ರದಾನ ಮತ್ತು ಕೃಷ್ಣಗಂಧೋತ್ಸವದ ನಂತರ ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು.

# ಪ್ರೊ.ಭೈರವಮೂರ್ತಿ ಬದುಕು ಬರಹ ಚಿರಸ್ಥಾಯಿ



ಮೈಸೂರು: ಸಂಘ ಜೀವಿಯಾಗಿ ಬದುಕಿ ಆದರ್ಶಗಳನ್ನು ಬಳುವಳಿಯಾಗಿ ನೀಡಿದ ಸರಳ ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸ್ಮರಿಸಿದರು.

ಮೈಸೂರಿನ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಚಿಗುರು ಸಾಹಿತ್ಯ ಬಳಗದ ವತಿಯಿಂದ ತ.ಸು.ಶಾಮರಾವ್ ಸ್ಮರಣಾರ್ಥ ಆಯೋಜಿಸಿದ್ದ ಹಿರಿಯ ವಿದ್ವಾಂಸ ಪ್ರೊ.ಕೆ.ಭೈರವಮೂರ್ತಿ ಬದುಕು ಬರಹ– ಒಂದು ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೃಜನಶೀಲ ಸಾಹಿತಿಗಳಲ್ಲಿ ಒಬ್ಬರಾದ ಡಾ.ಭೈರವಮೂರ್ತಿ ಅವರು, ಸಾಧು ಸ್ವಭಾವ, ಸರಳ ಸಜ್ಜನಿಕೆಯ ಮೂರ್ತಿಯಾದ ಅವರು, ಆಳವಾದ ಅಧ್ಯಯನ ಮಾಡುತ್ತಿದ್ದರಲ್ಲದೆ ಸಾಹಿತ್ಯ ಕ್ಷೇತ್ರಕ್ಕೆ ಅಮೂಲಾಗ್ರ ಕೊಡುಗೆ ನೀಡಿದ್ದಾರೆ. ಅವರೊಂದಿಗೆ ವೈಯಕ್ತಿಕವಾಗಿ ಒಡನಾಟ ಇದ್ದು, ಪರಸ್ಪರ ಚರ್ಚಿಸುತ್ತಿದ್ದೇವು ಎಂದು ಸ್ಮರಿಸಿದರು.

ಬಳಿಕ ಹಿರಿಯ ವಿದ್ವಾಂಸ ಪ್ರೊ.ಕೆ.ಭೈರವಮೂರ್ತಿ ಬದುಕು ಬರಹ ಕುರಿತು ಹಿರಿಯ ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಮಾತನಾಡಿ, ಅಜಾತಶತ್ರು, ಉತ್ತಮ ಸಂಘಟಕ, ಸಾಹಿತ್ಯವನ್ನೇ ಉಸಿರಾಗಿಸಿಕೊಂಡವರು ಪ್ರೊ. ಭೈರವಮೂರ್ತಿ ಎಂದರು. ಬಹುಶಃ ನಾಡಿನಲ್ಲಿಯೇ ಅತಿ ಹೆಚ್ಚು ಅಭಿನಂದನಾ ಗ್ರಂಥಗಳನ್ನು ಹೊರತಂದ ಹೆಗ್ಗಳಿಕೆ ಇವರದು, ವಚನ ಸಾಹಿತ್ಯ ದಲ್ಲಿ ಹೆಚ್ಚಿನ ಕೃಷಿ ಮಾಡಿರುವ ಇವರು ಶಿಶು ಸಾಹಿತ್ಯದಲ್ಲಿಯೂ ಉತ್ತಮ ಕೆಲಸ ನಿರ್ವಹಿಸಿದ್ದಾರೆ ಎಂದರು.

ಇತ್ತೀಚೆಗೆ ನಿಧನರಾದ ಸಾಹಿತಿ ಚಂಪಾ ಶಿವಣ್ಣ ಹಾಗೂ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಅವರಿಗೆ ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೇಷ್ಠ ಸಾಹಿತಿಯಾಗಿದ್ದ ಪ್ರೊ. ಭೈರವಮೂರ್ತಿ ಅವರು ತಮ್ಮ ಪತ್ನಿ ವಿಜಯ ಕುಮಾರಿ ಅವರಿಗೂ ಸಾಹಿತ್ಯದ ಅಭಿರುಚಿ ಮೂಡಿಸಿ, ಮುಂದೆ ಅವರಿಂದ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಕೊಡುಗೆ ನೀಡಲು ಕಾರಣಕರ್ತರಾದರು ಎಂದರು. ಹೆಂಡತಿಗೂ ಪೂಜನೀಯ ಸ್ಥಾನ ನೀಡಿದ ಅಗ್ರಮಾನ್ಯ ಸಾಹಿತಿ ಎಂದು ಕೊಂಡಾಡಿದರು. ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ.ಲತಾ ಮೋಹನ್, ಉಪಾಧ್ಯಕ್ಷ ಎನ್. ಅನಂತ, ಚಿಗುರು ಸಾಹಿತ್ಯ ಬಳಗದ ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಕಾರ್ಯದರ್ಶಿ ನಾಗೇಂದ್ರ ಹೆಬ್ಬಾರ್, ಹರ್ಷವರ್ಧನ ಮತ್ತಿತರರಿದ್ದರು.

# ಬಾಳೆಬೆಳೆ ಹಾನಿ: ಶಾಸಕರ ಬೇಟಿ



ಚಾಮರಾಜನಗರ, ಮೂರುದಿನಗಳ ಹಿಂದೆ ಸುರಿದ ಮಳೆ ಪರಿಣಾಮ ತಾಲೂಕು ವ್ಯಾಪ್ತಿಯ ದೊಡ್ಡಮೋಳೆ, ಕಟ್ನವಾಡಿ, ಗ್ರಾಮಗಳಲ್ಲಿ ಮಳೆಯಿಂದ ಮನೆ ಗೋಡೆ ಕುಸಿತದ ಪರಿಣಾಮ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪರಿಶೀಲಿಸಿ, ವೈಯಕ್ತಿಕ ವೈಯಕ್ತಿಕ ಪರಿಹಾರ ನೀಡಿದರು.

ಇದೇವೇಳೆ ಕೆ.ಕೆ. ಹುಂಡಿ ಗ್ರಾಮ, ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿನೀಡಿ, ಗಾಳಿ ಮಳೆಯಿಂದ ಬಾಳೆಬೆಳೆ, ತೆಂಗಿನಗಿಡ ಸೇರಿದಂತೆ ಬೆಳೆಗಳು ಹಾನಿಯಾಗಿರುವ ಸಂಬಂಧ ರೈತರಿಂದ ಮಾಹಿತಿ ಪಡೆದುಕೊಂಡರು.

ತಾಲೂಕು ವ್ಯಾಪ್ತಿಯ ದೊಡ್ಡಮೋಳೆ, ಕಟ್ನವಾಡಿ, ಗ್ರಾಮಗಳಲ್ಲಿ ಮಳೆಯಿಂದ ಮನೆ ಗೋಡೆ ಕುಸಿದಿದ್ದು,. ಮನೆಗಳಿಗೆ ಸೂಕ್ತ ಪರಿಹಾರ, ಗಾಳಿ ಮಳೆಗೆ ಬೆಳೆಗಳು ಎಲ್ಲೆಲ್ಲಿ ಹಾನಿಯಾಗಿವೆ. ಅಂತಹ ಗ್ರಾಮಗಳಿಗೆ ರಾಜಸ್ವ ನಿರೀಕ್ಷಕರು, ಕಂದಾಯಾಧಿಕಾರಿಗಳು ಭೇಟಿನೀಡಿ ರೈತರಿಂದ ಮಾಹಿತಿಪಡೆದುಕೊಂಡು, ಸೂಕ್ತ ಪರಿಹಾರ ಕೊಡಿಸುವ ಸಂಬಂಧ ಸರ್ಕಾರಕ್ಕೆ ಅಂದಾಜುಪಟ್ಟಿ ಸಲ್ಲಿಸುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸೂಚನೆ ನೀಡಿದರು.

ರಾಜಸ್ವ ನಿರೀಕ್ಷಕಗಳಾದ ರಾಜಶೇಖರ್, ಗುರುಸಿದ್ದಪ್ಪ, ಗ್ರಾಮಆಡಳಿತಾಧಿಕಾರಿ ವೆಂಕಟೇಶ್, ತಾಪಂ ಮಾಜಿ ಸದಸ್ಯ ಎಚ್.ಎಂ.ಮಹದೇವಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಮಂಜುನಾಥ್, ಕುಮಾರ್, ಮುಖಂಡರಾದ ಉಡಿಗಾಲನಂಜಪ್ಪ, ದೊರೆಸ್ವಾಮಿ, ಕೇಶವಮೂರ್ತಿ, ಶಿವಣ್ಣ, ಸುಬ್ರಹ್ಮಣ್ಯ, ಮಹದೇವಸ್ವಾಮಿ, ಕುಮಾರ್ ಇತರರು ಹಾಜರಿದ್ದರು.

### ಜಿಲ್ಲಾ ಪತ್ರಕರ್ತರ ಸಂಘದ ಸಂತಾಪ

# ಕೆ.ವಿ.ಶ್ರೀನಿವಾಸನ್, ಕೆ.ಜೆ.ಕುಮಾರ್‌ಗೆ ಸಂತಾಪ

ಮೈಸೂರು: ನಗರದ ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಈಚೆಗೆ ನಿಧನರಾದ ನಗರದ ಹಿರಿಯ ಪತ್ರಕರ್ತರಾದ ಕೆ.ವಿ.ಶ್ರೀನಿವಾಸನ್ ಹಾಗೂ ಕೆ.ಜೆ.ಕುಮಾರ್ ಒಡನಾಡಿಗಳು ಅಗಲಿದ ಒಡನಾಡಿಗಳ ಸ್ಮರಿಸಿದರು.

ಹಿರಿಯ ಪತ್ರಕರ್ತ ಪ್ರಭುರಾಜ್ ಮಾತನಾಡಿ, ಶ್ರೀನಿವಾಸನ್ ಹಾಗೂ ತಮ್ಮ ನಡುವಿನ ಒಡನಾಟ 55 ವರ್ಷಗಳದ್ದಾಗಿದೆ. ಅವರು ಚಿಕ್ಕ ಹುಡುಗರನ್ನೂ ಬ್ರದರ್ ಎಂದೇ ಕರೆಯುತ್ತಿದ್ದ ಕಾರಣ ಬ್ರದರ್ ಎಂದೇ ಪತ್ರಿಕಾ ವಲಯದಲ್ಲಿ ಖ್ಯಾತರಾಗಿದ್ದರು. ಆಕಾಶವಾಣಿಯಲ್ಲಿ ಅವರು ಅನೇಕ ವರ್ಷ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಈ ನಡುವೆ ಯಾರಿಂದಲೂ ಒಂದು ಪೈಸೆಯನ್ನೂ ಪಡೆಯದ ಅವರು ತಮ್ಮ ಖರ್ಚು ಕಳೆದು ಉಳಿದುದನ್ನು ಇತರರಿಗೆ ವಿನಿಯೋಗಿಸುತ್ತಿದ್ದರೆಂದರು.

ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಮಾತನಾಡಿ, ಶ್ರೀನಿವಾಸನ್ ಮೈಸೂರು ಪತ್ರಿಕೋದ್ಯಮದ ಬಗ್ಗೆ ಅಪಾರ ಒಲವು ಹೊಂದಿದ್ದರು. ಹೀಗಾಗಿಯೇ ಪತ್ರಕರ್ತರ ಸಂಘದಲ್ಲಿ ಹಲವರ ಹೆಸರಿನಲ್ಲಿ ಅನೇಕ ವಾರ್ಷಿಕ ಪ್ರಶಸ್ತಿ ಸ್ಥಾಪಿಸಿದ್ದಾರೆ. ಅವರು ನಮ್ಮೆಲ್ಲರಿಗೂ ಸದಾ ಮಾರ್ಗದರ್ಶಕರಾಗಿರುವರು ಎಂದು ಹೇಳಿದರು.



ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಕೆ.ವಿ. ಶ್ರೀನಿವಾಸನ್ ಹಾಗೂ ಕೆ.ಜೆ. ಕುಮಾರ್ ಮೈಸೂರು ಪತ್ರಿಕೋದ್ಯಮ ಕಂಡ ವಿಶಿಷ್ಟ ವ್ಯಕ್ತಿಗಳಾಗಿದ್ದಾರೆ. ಮೈಸೂರು ಅನೇಕ ಹೊಸ ಪೀಳಿಗೆಯ ಪತ್ರಕರ್ತರನ್ನು ತನ್ನ ಒಡಲಿಗೆ ತುಂಬಿಕೊಳ್ಳುತ್ತಿದೆ. ಆದರೆ, ಇದೇ ವೇಳೆ ಈ ರೀತಿಯ ಹಿರಿಯ ಪತ್ರಕರ್ತರನ್ನೂ ಕಳೆದುಕೊಳ್ಳುತ್ತಿರುವುದು ಬೇಸರದ ಸಂಗತಿಯಾಗಿದೆ. ಕೆ.ವಿ.ಶ್ರೀನಿವಾಸನ್ ಓರ್ವ ಸಂತರಂತೆ ಕಾಣುತ್ತಿದ್ದರು. ಎಂದಿಗೂ ಯಾರನ್ನೂ ನೋಯಿಸದ, ಕೇಡು ಬಯಸದ ಪತ್ರಕರ್ತರಾಗಿದ್ದು, ಗಾಂಧೀ ವಾದಿಗಳು ಹೇಗಿರುತ್ತಾರೆಂಬುದನ್ನು ತಿಳಿಯಬೇಕಿದ್ದವರು ಇವರನ್ನು ನೆನೆಸಿಕೊಂಡರೆ ಸಾಕಾಗುವಂತೆ ಜೀವನ ನಡೆಸುತ್ತಿದ್ದಾರೆ. ಕೆ.ಜೆ.ಕುಮಾರ್ ಸಹಾ ಬರವಣಿಗೆ ಕೇವಲ ಸಾಹಿತ್ಯವಲ್ಲ, ಅದೊಂದು ಕಲೆ ಎಂಬುದಕ್ಕೆ ಸಾಕ್ಷಿಯಾಗಿದ್ದರು. ಕನ್ನಡ ಸಿನಿಮಾ ಬರವಣಿಗೆಯನ್ನು ಅವರಷ್ಟು ಉತ್ತಮವಾಗಿ ಬರೆಯುತ್ತಿದ್ದವರು ನಿಜಕ್ಕೂ ತೀರಾ ಅಪರೂಪವೇ ಆಗಿದ್ದಾರೆ. ಸಿನಿಮಾ ಬರವಣಿಗೆ ಹೇಗಿರಬೇಕೆಂಬುದನ್ನು ಹಲವರಿಗೆ ಕಲಿಸಿಕೊಟ್ಟವರೂ ಅವರಾಗಿದ್ದಾರೆಂದು ಸ್ಮರಿಸಿದರು. ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ಪ್ರಕಾಶ್ ಬಾಬು, ಹಿರಿಯ ಪತ್ರಕರ್ತ ಕಾಶಿನಾಥ್, ಕನ್ನಡಪರ ಚಳವಳಿ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಪತ್ರಕರ್ತ ಎಂ.ಟಿ.ಯೋಗೇಶ್‌ಕುಮಾರ್ ಇನ್ನಿತರರು ಹಾಜರಿದ್ದರು.

## ಸಂಕ್ಷಿಪ್ತ ಸುದ್ದಿ

### ಉಚಿತ ನೇತ್ರ ತಪಾಸಣಾ ಶಿಬಿರ ಮಾ.25ಕ್ಕೆ



**ಕೆ.ಆರ್.ನಗರ:** ಕ್ಷೇತ್ರದ ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ

ಮಾ.25ರಂದು ಉಚಿತ ನೇತ್ರ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜನೆ ಮಾಡಲಾಗಿದೆ ಎಂದು ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್ ತಿಳಿಸಿದ್ದಾರೆ.

ಅವರು ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿ ಮೈಸೂರು ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಕರುನಾಡ ದೀಪ ಸೇವಾ ಟ್ರಸ್ಟ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ, ತಾಲೂಕು ಆರೋಗ್ಯ ಅಧಿಕಾರಿಗಳು, ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಸಹಯೋಗದಲ್ಲಿ ಮಾ.25ರ ಬುಧವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡಿಸಿಕೊಳ್ಳಬೇಕೆಂದು ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್ ಮನವಿ ಮಾಡಿದ್ದಾರೆ.

### ವಿಕ್ರಾಂತ್ ಪಿ.ದೇವೇಗೌಡ ನಿಧನ



**ಮೈಸೂರು:** ಮೈಸೂರು ನಗರ ಕಾಂಗ್ರೆಸ್ ಹಾಲಿ ಉಪಾಧ್ಯಕ್ಷರು, ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷರೂ ಆದ ವಿಕ್ರಾಂತ್ ಪಿ.ದೇವೇಗೌಡ (64) ಶುಕ್ರವಾರ ರಾತ್ರಿ 11.45 ಗಂಟೆ ವೇಳೆಗೆ ಅಪೋಲೋ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಲಕ್ಷ್ಮಿ, ಪುತ್ರ ಶ್ರೀನಿವಾಸ, ಪುತ್ರಿಯರಾದ ಪದ್ಮಾವತಿ, ರೇಖಾ, ಅಳಿಯ ಚಂದನ್, ಮೊಮ್ಮಕ್ಕಳು ಸೇರಿ ಅನೇಕರನ್ನು ಅಗಲಿದ್ದಾರೆ. ಮೂಲತಃ ಕನ್ನೇಗೌಡನ ಕೊಪ್ಪಲು–ಜಯನಗರದವರಾದರೂ (ಕೆ.ಜಿ.ಕೊಪ್ಪಲು) ಕುವೆಂಪುನಗರದ ಜೋಡಿ ಬಸವ ರಸ್ತೆಯಲ್ಲಿ ನೆಲೆಸಿದ್ದರು. ಶನಿವಾರ ಮಧ್ಯಾಹ್ನ ಕಾವೇರಿ ಸ್ಕೂಲ್ ಪಕ್ಕದ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು. ವಿಕ್ರಾಂತ್ ಟೈರ್ಸ್ (ಹಾಲಿ ಜೆ.ಕೆ.ಟೈರ್ಸ್) ಕಾರ್ಖಾನೆಯಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿದ ನಂತರ ಸ್ವಯಂ ನಿವೃತ್ತಿ ಪಡೆದು ವೆಂಕಟೇಶ್ವರ ಟ್ರೇಡರ್ಸ್ ಹೆಸರಿನ ಪೇಂಟ್ಸ್ ಅಂಗಡಿ ಯನ್ನು ತೆರೆದು ಕೊನೆಯವರೆಗೂ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ತಮ್ಮ ಹೆಸರಿನ ಮುಂದೆ 'ವಿಕ್ರಾಂತ್ ಸೇರಿಸಿ ಕೊಂಡು ಆತ್ಮೀಯರಲ್ಲಿ ಅತ್ಯಂತ ವಿಶ್ವಾಸಕ್ಕೆ ಪಾತ್ರರಾಗಿ ದ್ದರು. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಕಟ್ಟಾ ಅಭಿಮಾನಿ ಆಗಿದ್ದು, ಅವರ ಹೆಸರಲ್ಲಿ ಅಭಿಮಾನಿ ಬಳಗವನ್ನೇ ಕಟ್ಟಿದ್ದರು. ಆ ಮೂಲಕ ಸಾಕಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಎಸ್.ಎಂ.ಕೃಷ್ಣ ಹಾಗೂ ಅವರ ಕುಟುಂಬ ಮೈಸೂರಿಗೆ ಭೇಟಿ ನೀಡಿದ ವೇಳೆ ಅವರನ್ನು ಉಪಚರಿಸುವುದರಲ್ಲಿ ಗೌಡರು ಸಂಭ್ರಮಿಸುತ್ತಿದ್ದರು. ಎಸ್.ಎಂ.ಕೃಷ್ಣ ಅವರು ಮತ್ತು ಅವರ ಕುಟುಂಬವೂ ಸಹ ಇವರನ್ನು ಅತ್ಯಂತ ಪ್ರೀತಿ–ವಿಶ್ವಾಸದಿಂದ ಕಾಣುತ್ತಾ ಬಂದಿತು.

ಮೃತರ ನಿಧನಕ್ಕೆ ಶಾಸಕ ಕೆ.ಹರೀಶ್‌ಗೌಡ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಎಂ.ಬಿ.ಮಂಜೇಗೌಡ ಸೇರಿ ಅನೇಕರು ಸಂತಾಪ ಸೂಚಿಸಿದ್ದಾರೆ.

# ಚಳವಳಿ ಸಿದ್ಧಾಂತಕ್ಕೆ ಪೂರಕ ಹೋರಾಟ ಅಗತ್ಯ: ಬಡಗಲಪುರ ನಾಗೇಂದ್ರ

**ಮೈಸೂರು:** ಚಳುವಳಿಗಿಂತ ಯಾರೂ ದೊಡ್ಡವರಲ್ಲ. ಚಳುವಳಿ ಎಲ್ಲರಿಗಿಂತ ದೊಡ್ಡದು. ಚಳುವಳಿ ಸಿದ್ಧಾಂತಕ್ಕೆ ಪೂರಕವಾಗಿ ಹೋರಾಟ ನಡೆಯಬೇಕು ಎಂದು ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದರು.

ನಗರದ ಹುಣಸೂರು ರಸ್ತೆಯ ಕೃಷಿ ಮಾರುಕಟ್ಟೆ ಅಧ್ಯಯನ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಶನಿವಾರ ನಡೆದ ಜಿಲ್ಲಾ ಕಾರ್ಯಕರ್ತರ ಸಭೆ ಹಾಗೂ ಮೈಸೂರು ತಾಲ್ಲೂಕು ಸಮಿತಿ ಪುನರ್ ರಚನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಚಳುವಳಿಯ ಸಿದ್ಧಾಂತಕ್ಕೆ ಪೂರಕವಾಗಿ ಕೆಲಸ ಮಾಡಿದರೆ ನಮಗೆ ಗೌರವ ಸಿಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಸಹ ಚಳುವಳಿಯ ಸಿದ್ಧಾಂತಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಬೇಕು. ಎಐ ತಂತ್ರಜ್ಞಾನದಲ್ಲೂ ರಾಜ್ಯ ರೈತ ಸಂಘದ ಹೋರಾಟದ ಬಗ್ಗೆ ದಾಖಲು ಮಾಡುತ್ತಿದೆ. ಅದನ್ನು ಪ್ರತಿಯೊಬ್ಬರೂ ಓದಬೇಕು. ಕರ್ನಾಟದಲ್ಲಿ ರೈತ ಸಂಘ ಹಲವಾರು ಬಣಗಳಾಗಿ ಹೊಡೆದು ಹೋಗಿದ್ದರೂ ಸೈದ್ಧಾಂತಿಕವಾಗಿ ಜನಮಾನಸದಲ್ಲಿ ಸಂಘದ ಚಳುವಳಿಯನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವುದರಲ್ಲಿ ನಮಗೆ ಎಐ ದಾಖಲು ಮಾಡಿದೆ ಎಂದು ತಿಳಿಸಿದರು.



ಸಂಘದಲ್ಲಿ ರಾಜ್ಯಮಟ್ಟದ ಪದಾಧಿಕಾರಿಗಳು, ತಳಮಟ್ಟದ ಪದಾಧಿಕಾರಿಗಳ ತಂಡ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ಎಂಬ ಮೂರು ಹಂತದ ಕಾರ್ಯಕರ್ತರ ತಂಡವಿದೆ. ಜಿಲ್ಲಾ ಹಾಗೂ ತಾಲ್ಲೂಕು ಸಮಿತಿಯ ಪದಾಧಿಕಾರಿಗಳಿಗೆ ಪ್ರಭುದ್ಧತೆ ಇಲ್ಲದೆ ಹೋದರೆ ಚಳುವಳಿಗಳಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ತಾಲ್ಲೂಕು ಪದಾಧಿಕಾರಿಗಳಿಗೆ ಮೊದಲು ಕಾರ್ಯಾಗಾರವಾಗಬೇಕು. ಪದಾಧಿಕಾರಿಗಳಿಗೆ ಕಾರ್ಯಾಗಾರವಾಗದೆ ಹೋದರೆ ಅವರಿಗೆ ಸಂಘವನ್ನು ಹೇಗೆ ನಡೆಸಬೇಕು ಎಂಬ ಗೊತ್ತು ಗುರಿ ಇಲ್ಲದಾಗುತ್ತದೆ. ಅದಕ್ಕಾಗಿ ಪದಾಧಿಕಾರಿಗಳಿಗೆ ಸಂಘದ ಮಹತ್ವ, ಇತಿಹಾಸ, ಸಂಘದ ಉದ್ಧೇಶ, ಅದರ ಸಿದ್ಧಾಂತಗಳ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಎಲ್ಲಾ ಜಿಲ್ಲೆಗಳ ಅಭಿಪ್ರಾಯಗಳನ್ನು ಕೇಳಿ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ತೆಗೆದುಕೊಂಡ ತೀರ್ಮಾನ ಜಾರಿ ಮಾಡಬೇಕಾದರೆ ಜಿಲ್ಲಾ ಸಮಿತಿಯಲ್ಲಿ, ತಾಲ್ಲೂಕು ಸಮಿತಿಯಲ್ಲಿ ಮಂಡನೆಯಾಗಬೇಕು. ಇದು ಗ್ರಾಮಗಳಿಗೆ ಹಾಗೂ ಪದಾಧಿಕಾರಿಗಳಿಗೆ ಗೊತ್ತಗಬೇಕು. ಹೀಗಾಗಿ ಪ್ರತಿಯೊಂದು ಸಮಿತಿ ಕರೆಯುವ ಸಭೆಯಲ್ಲಿ ಪದಾಧಿಕಾರಿಗಳು ಭಾಗವಹಿಸಬೇಕು. ಅಶಿಸ್ತು ಮತ್ತು ಸಿದ್ಧಾಂತವನ್ನು ಒಪ್ಪಿಕೊಳ್ಳದೆ ಹೋದರೆ ಅಂತಹ ಚಳುವಳಲ್ಲಿ ನಾನಿರಲ್ಲ. ಚಳುವಳಿಯ ಸಿದ್ಧಾಂತಗಳಿಗೆ ವಿರುದ್ಧವಾಗಿ ನಡೆದುಕೊಳ್ಳಬೇಕೆಂದರೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಎಂದು ಹೇಳಿದರು. ಸಭೆಯಲ್ಲಿ ರಾಜ್ಯ ರೈತ ಸಂಘದ ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾಧ್ಯಕ್ಷ ವಸಂತ ಕುಮಾರ್, ಜಿಲ್ಲಾ ಖಜಾಂಚಿ ಈಶ್ವರ್, ಟಿ.ನರಸೀಪುರ ತಾಲ್ಲೂಕು ಅಧ್ಯಕ್ಷ ಕರೊಟ್ಟಿ ಕುಮಾರಸ್ವಾಮಿ, ಮೈಸೂರು ತಾಲ್ಲೂಕು ಅಧ್ಯಕ್ಷ ಆನಂದ್ ಪ್ರಭಾಕರ್, ನಂಜನಗೂಡು ತಾಲ್ಲೂಕು ಅಧ್ಯಕ್ಷ ಮಹೇಶ್ ಕೆ.ಆರ್.ಪುರ, ಹುಣಸೂರು ತಾಲ್ಲೂಕು ಅಧ್ಯಕ್ಷ ಬೆಂಕಿಪುರ ಚಿಕ್ಕಣ್ಣ ಸೇರಿ ಇತರರು ಹಾಜರಿದ್ದರು.

# ಪಿರಿಯಾಪಟ್ಟಣ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಿಹಿ ಹಂಚಿ ಸಂಭ್ರಮಿಸಿದ ಶ್ವೇತವಸ್ತ್ರಧಾರಿಗಳು



**ಪಿರಿಯಾಪಟ್ಟಣ:** ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಪಟ್ಟಣದ ಗೋಣಿಕೊಪ್ಪ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ವಿವಿಧ ಬಡಾವಣೆಗಳು ಸೇರಿದಂತೆ ಪಾರೆಕೊಪ್ಪಲು ಮತ್ತು ತಾತನಹಳ್ಳಿ ಗ್ರಾಮಗಳ ಮುಸ್ಲಿಂ ಬಾಂಧವರು ಒಂದು ತಿಂಗಳ ಉಪವಾಸ ಆಚರಿಸಿದ ಬಳಿಕ ಜಕಾತ್ ಮತ್ತು ಫಿತ್ರ ದಾನಗಳನ್ನು ನೆರವೇರಿಸಿದರು.

ಶ್ವೇತವಸ್ತ್ರ ಧರಿಸಿ ಗುಂಪು ಗುಂಪಾಗಿ ಆಗಮಿಸಿದ ಮುಸ್ಲಿಮರು ಮೊದಲು ಸಿಹಿ ಹಂಚಿಕೊಂಡು, ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ನಂತರ ಸಾಮೂಹಿಕ ನಮಾಜ್ ಸಲ್ಲಿಸಿದರು. ಹೊಸ ಬಟ್ಟೆಗಳಲ್ಲಿ, ಸಾಂಪ್ರದಾಯಿಕ ವೇಷಭೂಷಣದಲ್ಲಿ ಕಂಗೊಳಿಸುತ್ತಿದ್ದ ಮಕ್ಕಳು ಹಬ್ಬದ ಸಂಭ್ರಮ ಹೆಚ್ಚಿಸಿದರು.

ಈ ಸಂದರ್ಭದಲ್ಲಿ ಜಾಮೀಯ ಮಸೀದಿ ಪ್ರಧಾನ ಕಾರ್ಯದರ್ಶಿ ಮಹಮದ್ ಷಫೀ ಮಾತನಾಡಿ, ಆತ್ಮಶುದ್ಧಿ, ಪರೋಪಕಾರ, ತ್ಯಾಗ ಮತ್ತು ದಾನದ ಪವಿತ್ರ ಸಂದೇಶ ನೀಡುವ ರಂಜಾನ್ ಹಬ್ಬ ಮನುಕುಲಕ್ಕೆ ಮಾರ್ಗದರ್ಶನವಾಗಲಿ. ದ್ವೇಷ ಮತ್ತು ಅಪನಂಬಿಕೆಗಳು ಅಳಿದು ಸೋದರತೆ, ಸೌಹಾರ್ದತೆ ಇನ್ನಷ್ಟು ಗಟ್ಟಿಯಾಗಲಿ, ಎಂದು ಹೇಳಿದರು. ಅವರು ನಾಡಿನ ಸಮಸ್ತ ಮುಸ್ಲಿಂ ಬಾಂಧವರಿಗೆ ರಂಜಾನ್ ಹಾಗೂ ಯುಗಾದಿ ಹಬ್ಬದ ಶುಭಾಶಯ ಕೋರಿದರು. ಪುರಸಭಾ ಮಾಜಿ ಉಪಾಧ್ಯಕ್ಷ ಹಾಗೂ ಜಾಮೀಯ ಮಸೀದಿ ಅಧ್ಯಕ್ಷ ಅಬ್ದುಲ್ ಅಜೀಜ್ ಮಾತನಾಡಿ, ರಂಜಾನ್ ಹಬ್ಬದಂದು ನಾವೆಲ್ಲರೂ ಒಂದಾಗಿ ಪ್ರಾರ್ಥನೆ ಸಲ್ಲಿಸಿದ್ದೇವೆ. ಮನುಕುಲದ ಒಳಿತಿಗಾಗಿ ಪ್ರಾರ್ಥಿಸಿದ್ದೇವೆ. ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಮಾನವೀಯತೆಯಿಂದ ಬದುಕುವುದು ಅತ್ಯಂತ ಮುಖ್ಯ. ಭಾರತವು ಅನೇಕ ಜಾತಿ–ಧರ್ಮಗಳ ಸಮನ್ವಯದ ದೇಶ. ಎಲ್ಲರೂ ಏಕತೆಯಿಂದ ಬಾಳಬೇಕು. ಯಾವುದೇ ಧರ್ಮ ದ್ವೇಷವನ್ನು ಬೋಧಿಸುವುದಿಲ್ಲ, ಪ್ರೀತಿಯನ್ನೇ ಸಾರುತ್ತದೆ, ಎಂದು ಹೇಳಿದರು. ಅಂತೆಯೇ ಎಲ್ಲ ಮುಸ್ಲಿಮರಿಗೆ ಈದ್ ಮುಬಾರಕ್' ಎಂದು ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಅಬ್ದುಲ್ ಜಾರ್ಫ, ಸದಸ್ಯ ನಿಸಾರ್ ಅಹಮದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪ್ರೊ.ಭೈರವಮೂರ್ತಿ ಅವರ ಬದುಕು ಬರಹ ಚಿರಸ್ಥಾಯಿ:ಡಾ.ಡಿ.ತಿಮ್ಮಯ್ಯ

**ಮೈಸೂರು:** ಸಂಘ ಜೀವಿಯಾಗಿ ಬದುಕಿ ಆದರ್ಶಗಳನ್ನು ಬಳುವಳಿಯಾಗಿ ನೀಡಿದ ಸರಳ ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸ್ಮರಿಸಿದರು.





ಮೈಸೂರಿನ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಚಿಗುರು ಸಾಹಿತ್ಯ ಬಳಗದ ವತಿಯಿಂದ ತ.ಸು.ಶಾಮರಾವ್ ಸ್ಮರಣಾರ್ಥ ಆಯೋಜಿಸಿದ್ದ ಹಿರಿಯ ವಿದ್ವಾಂಸ ಪ್ರೊ.ಕೆ.ಭೈರವಮೂರ್ತಿ ಬದುಕು ಬರಹ– ಒಂದು ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೃಜನಶೀಲ ಸಾಹಿತಿಗಳಲ್ಲಿ ಒಬ್ಬರಾದ ಡಾ.ಭೈರವಮೂರ್ತಿ ಅವರು, ಸಾಧು ಸ್ವಭಾವ, ಸರಳ ಸಜ್ಜನಿಕೆಯ ಮೂರ್ತಿಯಾದ ಅವರು, ಆಳವಾದ ಅಧ್ಯಯನ ಮಾಡುತ್ತಿದ್ದರಲ್ಲದೆ ಸಾಹಿತ್ಯ ಕ್ಷೇತ್ರಕ್ಕೆ ಅಮೂಲಾಗ್ರ ಕೊಡುಗೆ ನೀಡಿದ್ದಾರೆ. ಅವರೊಂದಿಗೆ ವೈಯಕ್ತಿಕವಾಗಿ ಒಡನಾಟ ಇದ್ದು, ಪರಸ್ಪರ ಚರ್ಚಿಸುತ್ತಿದ್ದೇವು ಎಂದು ಸ್ಮರಿಸಿದರು.

ಬಳಿಕ ಹಿರಿಯ ವಿದ್ವಾಂಸ ಪ್ರೊ.ಕೆ.ಭೈರವಮೂರ್ತಿ ಬದುಕು ಬರಹ ಕುರಿತು ಹಿರಿಯ ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಮಾತನಾಡಿ, ಅಜಾತಶತ್ರು, ಉತ್ತಮ ಸಂಘಟಕ, ಸಾಹಿತ್ಯವನ್ನೇ ಉಸಿರಾಗಿಸಿಕೊಂಡವರು ಪ್ರೊ. ಭೈರವಮೂರ್ತಿ ಎಂದರು. ಬಹುಶಃ ನಾಡಿನಲ್ಲಿಯೇ ಅತಿ ಹೆಚ್ಚು ಅಭಿನಂದನಾ ಗ್ರಂಥಗಳನ್ನು ಹೊರತಂದ ಹೆಗ್ಗಳಿಕೆ ಇವರದು, ವಚನ ಸಾಹಿತ್ಯ ದಲ್ಲಿ ಹೆಚ್ಚಿನ ಕೃಷಿ ಮಾಡಿರುವ ಇವರು ಶಿಶು ಸಾಹಿತ್ಯದಲ್ಲಿಯೂ ಉತ್ತಮ ಕೆಲಸ ನಿರ್ವಹಿಸಿದ್ದಾರೆ ಎಂದರು.


ಇತ್ತೀಚೆಗೆ ನಿಧನರಾದ ಸಾಹಿತಿ ಚಂಪಾ ಶಿವಣ್ಣ ಹಾಗೂ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಅವರಿಗೆ ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೇಷ್ಠ ಸಾಹಿತಿಯಾಗಿದ್ದ ಪ್ರೊ. ಭೈರವಮೂರ್ತಿ ಅವರು ತಮ್ಮ ಪತ್ನಿ ವಿಜಯ ಕುಮಾರಿ ಅವರಿಗೂ ಸಾಹಿತ್ಯದ ಅಭಿರುಚಿ ಮೂಡಿಸಿ, ಮುಂದೆ ಅವರಿಂದ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಕೊಡುಗೆ ನೀಡಲು ಕಾರಣಕರ್ತರಾದರು ಎಂದರು. ಹೆಂಡತಿಗೂ ಪೂಜನೀಯ ಸ್ಥಾನ ನೀಡಿದ ಅಗ್ರಮಾನ್ಯ ಸಾಹಿತಿ ಎಂದು ಕೊಂಡಾಡಿದರು. ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ.ಲತಾ ಮೋಹನ್, ಉಪಾಧ್ಯಕ್ಷ ಎನ್. ಅನಂತ, ಚಿಗುರು ಸಾಹಿತ್ಯ ಬಳಗದ ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಕಾರ್ಯದರ್ಶಿ ನಾಗೇಂದ್ರ ಹೆಬ್ಬಾರ್, ಹರ್ಷವರ್ಧನ ಮತ್ತಿತರರಿದ್ದರು.

# ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗೂ ಎಐ ಉಪಶಮನ: ಸಿಜೆಐ ಸೂರ್ಯಕಾಂತ್

**ಬೆಂಗಳೂರು:** ನ್ಯಾಯಾಂಗ ವ್ಯವಸ್ಥೆಗೆ ಎಐ (ಕೃತಕ ಬುದ್ಧಿಮತ್ತೆ) ತಾಂತ್ರಿಕತೆಯನ್ನು ಸಂಯೋಜನೆಗೊಳಿಸುವಾಗ ಅದು ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವ ರೀತಿಯಲ್ಲಿ ಇರಬೇಕೇ ಹೊರತು ಅದರ ಮೇಲೆಯೇ ಸವಾರಿ ಮಾಡುವಂತಿರಬಾರದು ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಪ್ರತಿಪಾದಿಸಿದರು.

'ಕೃತಕ ಬುದ್ಧಿಮತ್ತೆ– ವ್ಯಾಜ್ಯಗಳ ತಡೆಗಟ್ಟುವಿಕೆ ಮತ್ತು ಇತ್ಯರ್ಥ' ಕುರಿತು ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಭಾಂಗಣದಲ್ಲಿ ಯುಐಎ ಇಂಡಿಯಾ ಅಧ್ಯಾಯ, ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ, ಕರ್ನಾಟಕ ನ್ಯಾಯಾಂಗ ಅಕಾಡೆಮಿ ಮತ್ತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಒಂದು ದಿನದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಗಾಧ ಪ್ರಮಾಣದ ದತ್ತಾಂಶ–ದಾಖಲಾತಿಗಳನ್ನು ನಿರ್ವಹಿಸಲು, ಮಾದರಿಗಳನ್ನು ಗುರುತಿಸಲು, ಪ್ರಕ್ರಿಯೆಗಳ ವಿಳಂಬವನ್ನು ತಗ್ಗಿಸಲು ಎಐ ಸಹಾಯಕವಾಗಬೇಕು. ಆದರೆ, ಪ್ರಧಾನ ಕಾರ್ಯವಾದ ತೀರ್ಪು ಪ್ರಕಟಿಸುವಿಕೆಯನ್ನೇ ಅದು ಅತಿಕ್ರಮಿಸುವಂತಾಗಬಾರದು. ತೀರ್ಪು ಪ್ರಕಟಿಸುವಿಕೆಯ ಹಂತದ ಮೇಲೆ ಎಐ ಸಾಧನಗಳಿಗೆ ಹಿಡಿತ ಸಾಧಿಸಲು ಆಸ್ಪದ ಮಾಡಿಕೊಟ್ಟರೆ ಪಾರದರ್ಶಕವಲ್ಲದ ಹಾಗೂ ಉತ್ತರದಾಯಿಯಲ್ಲದ ವ್ಯವಸ್ಥೆ ನಿರ್ಮಾಣವಾಗಲು ನಾವು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಸೂರ್ಯಕಾಂತ್ ಅವರು ಎಚ್ಚರಿಸಿದರು.



ನ್ಯಾಯಾಂಗ ಪ್ರಕ್ರಿಯೆಯ ಅಂತಿಮ ಘಟ್ಟವಾದ ತೀರ್ಪು ಪ್ರಕಟಿಸುವಿಕೆಯಲ್ಲಿ ಮನುಷ್ಯರೇ ನಿರ್ಣಾಯಕ ಪಾತ್ರ ವಹಿಸುವಂತಿರಬೇಕು. ಅಂದರೆ, ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರುಗಳೇ ತರ್ಕ ಶಕ್ತಿ ಹಾಗೂ ಅನುಭವಗಳ ವಿಶ್ಲೇಷಣೆಯ ಬೆಳಕಿನಲ್ಲಿ ತೀರ್ಪುಗಳನ್ನು ಪ್ರಕಟಿಸಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ತರುವ ಪ್ರಯೋಜನಗಳು ಮಾರ್ಗಗಳಾಗಿ ಮಾತ್ರವೇ ಬಳಕೆಯಾಗಬೇಕು. ಆದರೆ, ಯಾವ ದಿಕ್ಕಿನತ್ತ ಸಾಗಬೇಕು ಎಂಬ ದಿಕ್ಸೂಚಿಯ ಪಾತ್ರವನ್ನು ಮನುಷ್ಯನ ಬುದ್ಧಿಯೇ ನಿರ್ಧರಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರು ಗೌರವ ಅತಿಥಿಯಾಗಿ ಮಾತನಾಡಿ, ನ್ಯಾಯಾಂಗ ವ್ಯವಸ್ಥೆಯನ್ನು ಎಐ ಪ್ರವೇಶಿಸಿರುವ ಈ ಸಂದರ್ಭದಲ್ಲಿ, ಮನುಷ್ಯನ ನಿರ್ಧಾರ ತಳೆಯುವ ಶಕ್ತಿಗೆ ಎಐ ಸಹಾಯಕನಂತೆ ವರ್ತಿಸುತ್ತಿದೆಯೇ ಅಥವಾ ಮನುಷ್ಯನ ಉಪಸ್ಥಿತಿಯ ಅಗತ್ಯವೇ ಇಲ್ಲದ ಪರ್ಯಾಯದಂತೆ ಗೋಚರಿಸುತ್ತಿದೆಯೇ? ಇದು ಜನರಿಗೆ ನ್ಯಾಯಿಕ ವ್ಯವಸ್ಥೆಯನ್ನು ಇನಷ್ಟು ಸುಲಭವಾಗಿ ಲಭ್ಯವಾಗಿಸುತ್ತದೆಯೇ ಅಥವಾ, ಹೊಸ ಸ್ವರೂಪದ ಅಸಮಾನತೆಗಳನ್ನು ಹಾಗೂ ಅಪಾರದರ್ಶಕತೆಯನ್ನು ಉಂಟುಮಾಡುತ್ತದೆಯೇ? ಇಂಬಂತಹ ಪ್ರಮುಖ ಪ್ರಶ್ನೆಗಳು ಈಗ ಎದುರಾಗಿವೆ ಎಂದರು.

ನ್ಯಾಯಾಂಗ ಸ್ವಾತಂತ್ರ್ಯ, ಪಾರದರ್ಶಕತೆ ಹಾಗೂ ಕಾನೂನುಬದ್ಧತೆಯ ಅಂಶಗಳು ಈಗ ಅತ್ಯಂತ ಪ್ರಮುಖವಾಗಿ ಪರಿಣಮಿಸಿವೆ. ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಎಐ ಬಳಕೆಯು ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ತತ್ತ್ವಗಳು ಹಾಗೂ ಸೂಕ್ತ ರಕ್ಷಣೆಗಳೊಂದಿಗೆ ನಿರ್ದೇಶಿತವಾಗಬೇಕು. ವಕೀಲರು ಕೂಡ ಎಐ ಟೂಲ್ ಗಳ ಮಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ನ್ಯಾಯಾಂಗ ವ್ಯವಸ್ಥೆಯ ಪ್ರಧಾನ ಘಟಕಗಳಾದ ಪ್ರಾಮಾಣಿಕತೆ ಮತ್ತು ಜವಾಬ್ದಾರಿಗಳು ಅಬಾಧಿತವಾಗಿ ಮುಂದುವರಿಯಬೇಕು ಎಂದರು. ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಅಧ್ಯಕ್ಷರಾದ ಪ್ರಶಾಂತ್ ಕುಮಾರ್ ಅವರು ಮಾತನಾಡಿ, ಎಐ ತಂತ್ರಜ್ಞಾನದಿಂದಾಗಿ ನ್ಯಾಯಾಲಯದ ತೀರ್ಪುಗಳನ್ನು ತ್ವರಿತವಾಗಿ ಸ್ಥಳೀಯ ಭಾಷೆಗಳಿಗೆ ಅನುವಾದ ಮಾಡುವುದು ಸಾಧ್ಯವಾಗುತ್ತಿದ್ದು, ಇದರಿಂದಾಗಿ ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಆಸಕ್ತಿಯಿರುವ ಹಳ್ಳಿಯ ಜನರೂ ಓದಬಹುದಾಗಿದೆ. ಇದು ವಕೀಲರಿಗೆ ತಮ್ಮ ಕಕ್ಷಿದಾರರೊಂದಿಗೆ ವ್ಯವಹರಿಸಲು ಅನುಕೂಲ ಕಲ್ಪಿಸಲಿದೆ ಎಂದರು.

ಭಾರತದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಹಾಗೂ ಯುಐಎನ ಅಧ್ಯಕ್ಷರಾದ ಕೆ.ಕೆ. ವೇಣುಗೋಪಲ್ ಅವರ ಸಂದೇಶಗಳನ್ನು ವಿಡಿಯೋ ವ್ಯವಸ್ಥೆಯ ಮೂಲಕ ಬಿತ್ತರಿಸಲಾಯಿತು. ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ಸಂತೋಷ್ ಹೆಗ್ಡೆ, ಕರ್ನಾಟಕದ ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಯುಐಎ ಇಂಡಿಯಾ ಅಧ್ಯಕ್ಷರಾದ ಎ.ಕೆ. ಗಂಗೂಲಿ, ಹಿರಿಯ ವಕೀಲರಾದ ಕೃಷ್ಣನ್ ವೇಣುಗೋಪಾಲ್, ವಕೀಲೆ ಮತ್ತು ಯುಐಎ ಇಂಡಿಯಾ ಪ್ರಧಾನ ಕಾರ್ಯದರ್ಶಿ ಮಮತಾ ತಿವಾರಿ ಮತ್ತಿತರ ಗಣ್ಯರು, ಹಿರಿಯ ವಕೀಲರು ಹಾಗೂ ಕಾನೂನು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಶೇ.50 ಮಹಿಳಾ ಮೀಸಲಾತಿ ಮಸೂದೆ ಸಂಸತ್ತಿನಲ್ಲಿ ಅನುಮೋದಿಸಬೇಕು: ಪರಂ

**ತುಮಕೂರು:** ಸಂಸತ್ತಿನಲ್ಲೂ ಮಹಿಳಾ ಮೀಸಲಾತಿ ಮಸೂದೆ ಅನುಮೋದನೆ ಆಗಬೇಕು. ಇದರಿಂದ ಸಂಸತ್ತು ಮತ್ತು ವಿಧಾನಮಂಡಲದಲ್ಲಿ ಮಹಿಳೆಯರಿಗೆ ಶೇ. 50 ಸ್ಥಾನಗಳ ಅವಕಾಶ ಸಿಗಲಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ರಾಜೀವಗಾಂಧಿ ಅವರು ಪ್ರಧಾನಮಂತ್ರಿ ಆಗಿದ್ದಾಗ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50ಸ್ಥಾನಮಾನಗಳನ್ನು ಕೊಡುವ ನಿಟ್ಟಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಅವಕಾಶಗಳನ್ನು ನೀಡಲಾಯಿತು. ಅದರಿಂದ ಇದೀಗ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿ ಪ್ರಾಧಾನ್ಯತೆ ಸಿಕ್ಕಿದೆ ಎಂದರು.

ನಂತರ ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿ ಇದ್ದಾಗ ಸಂಸತ್ತಿನಲ್ಲೂ ಶೇ.50 ಅವಕಾಶ ಕಲ್ಪಿಸುವ ಮಹಿಳಾ ಮಸೂದೆಯನ್ನು ಮಂಡಿಸಲಾಯಿತು. ಆ ದಿನಗಳಲ್ಲಿ ರಾಜ್ಯಸಭೆಯಲ್ಲಿ ಅದು ಅನುಮೋದನೆ ಆಗಲಿಲ್ಲ. ಈಗಲಾದರೂ ಕೇಂದ್ರ ಸರ್ಕಾರ ಈ ಮಸೂದೆಯನ್ನು ಅನುಮೋದಿಸಿ ಮಹಿಳೆಗೆ ಶಕ್ತಿ ನೀಡಬೇಕು ಎಂದರು.



ಇಡೀ ವಿಶ್ವದಲ್ಲಿ ಭಾರತದಲ್ಲಿಯೇ ಮಹಿಳೆಯರಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಿ ಸಬಲೀಕರಣಗೊಳಿಸಲಾಗಿದೆ. ಇಂದು ಮಹಿಳೆ ಎಲ್ಲ ಕ್ಷೇತ್ರದಲ್ಲೂ ಪುರುಷರನ್ನು ಹಿಂದಿಕ್ಕಿ ಸಾಧನೆ ಮಾಡುತ್ತಿದ್ದಾರೆ ಎಂದರು.

ನಮ್ಮ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿಯೇ ಘೋಷಿಸಿದಂತೆ ಮಹಿಳೆಯರ ಸಬಲೀಕರಣಕ್ಕೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು.

ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಮಾತನಾಡಿ, ಯಾರೂ ಅವಕಾಶಗಳನ್ನು ಕಾದು ಕೂರುವುದು ಸರಿಯಲ್ಲ. ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು ಎಂದರು.

ವಿಶೇಷವಾಗಿ ಮಹಿಳೆಯವರು ಅತಿದೊಡ್ಡ ಜವಾಬ್ದಾರಿ ಹೊಂದಿರುತ್ತಾರೆ. ಮನೆಯ ಒಳಗೆ ಮತ್ತು ಹೊರಗೆ ದುಡಿಯಬೇಕಾಗುತ್ತದೆ. ಈ ನಡುವೆ ತಮ್ಮ ಆರೋಗ್ಯವನ್ನೂ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ 2ವರ್ಷಗಳು ಜಿಲ್ಲಾಧಿಕಾರಿಯಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಈ ಅವಧಿಯಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದು, ಜಿಲ್ಲೆಯಲ್ಲಿ 1160 ಕಂದಾಯ ಗ್ರಾಮಗಳನ್ನು ಗುರುತಿಸಿದ್ದು, ಸದ್ಯದಲ್ಲೇ 22ಸಾವಿರ ಹಕ್ಕುಪತ್ರಗಳನ್ನು ನೀಡಲಿದ್ದೇವೆ. ಇದನ್ನು ನಾವು ಸೃಷ್ಟಿಕೊಂಡಿದ್ದೇವೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ.ನೂರುನ್ನಿಸಾ ಮಾತನಾಡಿ,

ಮಹಿಳೆ ಪುರುಷರಿಗೆ ಸ್ಪರ್ಧಿಯಾಗುವುದು ಬೇಡ, ಮಹಿಳೆಯೇ ತಮ್ಮ ಆತ್ಮ ಸಂತೋಷಕ್ಕಾಗಿ ಕೆಲವು ಜವಾಬ್ದಾರಿಗಳನ್ನು ನಿಭಾಯಿಸಬೇಕಿದೆ ಎಂದರು.

ಇಂದಿನ ದಿನಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲರಾಗಿದ್ದಾರೆ, ಆದರೆ ಆರ್ಥಿಕ ಸ್ವಾಲಂಭನೆಯನ್ನು ಅನುಭವಿಸುವ ಹಕ್ಕನ್ನು ಜಯಿಸಿಕೊಳ್ಳಬೇಕಿದೆ ಎಂದರು.

# ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಿ

## ಜಿಲ್ಲಾಧಿಕಾರಿಗಳಿಗೆ ಸಚಿವ ಮಧು ಬಂಗಾರಪ್ಪ ಸೂಚನೆ

ಬೆಂಗಳೂರು: ರಾಜ್ಯದಲ್ಲಿ 2026–27ನೇ ಶೈಕ್ಷಣಿಕ ವರ್ಷದ ಆರಂಭದ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಿಸಲು ವಿಶೇಷ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಈ ಕುರಿತು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಜಿಲ್ಲಾಧಿಕಾರಿಗಳು ಹಾಗೂ ಸಿಇಓಗಳಿಗೆ ಮಹತ್ವದ ಸೂಚನೆ ನೀಡಿದ್ದಾರೆ.





ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಜನರಿಗೆ ತಲುಪಿಸುವ ಮೂಲಕ ದಾಖಲಾತಿ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ. ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದಂತೆ ವಿಶೇಷ ಗಮನ ಹರಿಸಲು ಸೂಚಿಸಲಾಗಿದೆ.


ಪ್ರತಿ ಗ್ರಾಮದಲ್ಲೂ ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಹಾಗೂ ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ ಮನೆ ಮನೆಗೆ ಭೇಟಿ ನೀಡಿ ಮಕ್ಕಳನ್ನು



ಶಾಲೆಗೆ ಸೇರಿಸಲು ಪ್ರೇರೇಪಿಸಬೇಕು ಎಂದು ತಿಳಿಸಿದ್ದಾರೆ. ಜೊತೆಗೆ ಹಳೆಯ ವಿದ್ಯಾರ್ಥಿಗಳ ವಾಟ್ಸಾಪ್ ಗುಂಪುಗಳ ಮೂಲಕ ಶಾಲೆಗಳ ಅಭಿವೃದ್ಧಿ ಮತ್ತು ದಾಖಲಾತಿ ಹೆಚ್ಚಿಸುವ ಕಾರ್ಯಕ್ಕೂ ಒತ್ತು ನೀಡಲಾಗಿದೆ.

ಪೂರ್ವ ಪ್ರಾಥಮಿಕದಿಂದ ಹಿಡಿದು ಪ್ರೌಢಶಾಲೆ ಹಾಗೂ ಪದವಿಪೂರ್ವ ಹಂತದವರೆಗೆ ಎಲ್ಲಾ ತರಗತಿಗಳಲ್ಲೂ ದಾಖಲಾತಿ ಹೆಚ್ಚಿಸಲು ಸಮಗ್ರ ಕಾರ್ಯತಂತ್ರ ರೂಪಿಸಬೇಕು ಎಂದು ಸೂಚಿಸಲಾಗಿದೆ.

# ಮಕ್ಕಳು ಮತ್ತು ಮನೋರಂಜನೆ



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನದ ಮಾತು...

ತೊಂಬತ್ತರ ದಶಕದ ಕಾಲವೊಂದಿತ್ತು, ಮನೆಯಲಿ ಇರುವ ದೂರದರ್ಶನದಲಿ ಬರುವ ಒಂದೆ ಚಾನೆಲ್... ದೂರದರ್ಶನ!! ಮನೆಯ ಸದ್ಯಸರು ಎಲ್ಲರೂ ಒಟ್ಟಿಗೆ ಕುಳಿತು ನೋಡುತಿದ್ದರು. ಕೇವಲ ಮನೆಯ ಸದಸ್ಯರಷ್ಟೇ ಅಲ್ಲ ಅಕ್ಕಪಕ್ಕದ ಮನೆಯವರು ಕೂಡ ಬಂದು ನೋಡುತಿದ್ದರು, ಇದು ಎಲ್ಲರಿಗೂ ಗೊತ್ತಿರುವ ವಿಷಯ. ನಂತರದ ದಿನಗಳಲಿ ಈ ಮಾಯಾಪೆಟ್ಟಿಗೆ ಎಲ್ಲರ ಮನೆಗೂ ಕಾಲಿಟ್ಟಿತು. ಆಗಲೂ ಚಂದನ ಮತ್ತು ದೂರದರ್ಶನದಂಥ ಕೆಲವೇ ಚಾನಲ್ ಗಳು.. ನೇರವಾಗಿ ನಿಖರವಾಗಿ ಹೇಳುವ ವಾರ್ತೆ ಮತ್ತು ಮೋಹಕ ಧಾರಾವಾಹಿಗಳು.

ನಂತರ ಪ್ರಗತಿ ಆಯಿತು ಬಣ್ಣದ ರಿಮೋಟನಿಂದ ನಿಯಂತ್ರಿತ ಹಲವು ಚಾನಲ್ಗಳು. ಹಲವು ಸುದ್ದಿ ವಾಹಿನಿಗಳು, ಬಣ್ಣಬಣ್ಣದ ಸಿನೇಮಾಗಳು....ನಿಧಾನವಾಗಿ ಚಿತ್ರಮಂದಿರದ ಜನಪ್ರೀಯತೆ ಕಸಿದುಕೊಂಡವ.

- ಸಾಧನ ಬದಲಾಗಿದೆ, ಆದರೆ ಸಂಸ್ಕಾರ ಬದಲಾಗಬಾರದು!?
ಈಗ ಬರೀ ಚಲನಚಿತ್ರಗಳಷ್ಟೇ ಅಲ್ಲ ಸಿರೀಜ್ ಎಂಬ ಧಾರಾವಾಹಿಗಳ ಸಾಲಿನಲಿ ನೋಡಬಹುದಾದ ಹಲವು ಚಿತ್ರಗಳು, ಇವು ಸಾಮಾಜಿಕ, ನೈಜ ಜೀವನ, ರಾಜಕೀಯ ಅಷ್ಟೇ ಅಲ್ಲ ಕೊಲೆ ಕಾನೂನಿನಂತಹ ರೋಚಕ ಘಟನೆಗಳ ಮೇಲೆ ಆಧಾರಿತವಾಗಿರುತ್ತವೆ. ಮುಗಿಯುವರಗೆ ಕುತೂಹಲ ಮತ್ತು ರಮಣೀಯ ರೋಚಕತೆ ಕಾಯ್ದುಕೊಂಡೂ ನೋಡುಗರ ಕಣ್ಣು ಮನಸ್ಸು ಹಿಡಿದಿಡುತ್ತವೆ. ಅದಲ್ಲದೆ ಹಲವು ವೈದ್ಯಕೀಯ, ವಿಜ್ಞಾನ ಮತ್ತು ಕಾನೂನಿನ ಪರಿಕಲ್ಪನೆ ಕೂಡ ನೀಡುತ್ತವೆ. ಆದರೆ ಇವುಗಳಲಿ ಕಾಣುವ ಒಂದು ದೊಡ್ಡ ಲೋಪ.
ಯಾವದೇ ಸಿರೀಜ್, ಸಿನೇಮಾಗಳನ್ನು ಸಹ ಪರಿವಾರ ನೋಡುವಂತೆ ಇರುವದೇ ಇಲ್ಲ.
- ಮನರಂಜನೆ ಮನಸ್ಸಿಗೆ ಆಹಾರವಾಗಬೇಕು ? ಅಸಹಜತೆಗೆ ಕಾರಣವಾಗಬಾರದು.?
ಪ್ರತಿಯೊಂದರಲಿ ಅತಿಯಾದ ದೈಹಿಕ ಸನ್ನೀವೇಶಗಳ ಅನಾವರಣ, ಚುಂಬನದ ಅಶ್ಲೀಲ ದೃಶ್ಯಗಳು, ಕುಡಿತ ಪ್ರತಿ ಕುಟುಂಬದಲಿ ಸಹಜ ಸಾಮಾನ್ಯ ಎಂಬುವಷ್ಟು ಮಧ್ಯಪಾನ ಸೇವನೆಯ ದೃಷ್ಯಗಳು. ಸಿಗರೇಟ ಮತ್ತು ಮದ್ಯಪಾನ ಮಾಡದವರು ಇಲ್ಲವೇ ಇಲ್ಲ ಎಂಬಷ್ಟು ಅತಿರೇಕದ ವೈಭವ.
- ವ್ಯಸನ ಮತ್ತು ವಾಸನಾವೆಂಬುದು ಆಧುನಿಕತೆಯ ಸಂಕೇತವೇ!? "

ಒಂದು ಪತ್ತೆದಾರಿ ಅಥವಾ ಸಾಮಾಜಿಕ ಚಿತ್ರ ನೋಡುತಾ ಮನೆಮಂದಿ ಎಲ್ಲರೂ ಕುಳಿತಾಗ ಕೇವಲ ಮದುವೆ ಆಯಿತು ಎಂಬುದಷ್ಟೇ ತೋರಿಸದೇ ಅದನ್ನು ಮೀರಿ ತೋರಿಸುವ ದೈಹಿಕ ಒಡನಾಟದ ದೃಷ್ಯಗಳು.. ಮುಕ್ತ ಚುಂಬನಗಳು... ಒಂದು ರೀತಿಯ ಮುಜುಗರದ ಸನ್ನಿವೇಶ ಉಂಟು ಮಾಡುತವೆ.

- ಮನೆಯಲಿ ಹಿರಿಯರು ಇದ್ದರೆ ಅಥವಾ ಬೇರೆಯ ಸದಸ್ಯರು ಅತಿಥಿ ಭಾಗತರು ಬಂದಾಗ ಇಂತಹ ಅತರೇಕದ ಸನ್ನಿವೇಶದಿಂದ ಮುಜುಗರಕ್ಕೆ ಒಳಪಡಿಸುತ್ತವೆ. ಮಕ್ಕಳೊಂದಿಗೆ ಕುಟುಂಬಸಮೇತ ನೋಡುವಂತಹ ಚಿತ್ರಗಳೇ ಇಲ್ಲ ಎನುವಷ್ಟು...



- ಲಜ್ಜೆ ಕಳೆದುಕೊಂಡ ಮನೋರಂಜನೆ ? ಮೌಲ್ಯ ಕಳೆಯುವ ಮೊದಲ ಹೆಜ್ಜೆ.?
ಮಕ್ಕಳಿಗೆ ವಯಸ್ಸಿಗೆ ತಕ್ಕಂತೆ ತಿಳಿಯಬೇಕಾದ ವಿಷಯಗಳು ಸಹಜವಾಗಿ ಮನವರಿಕೆ ಆಗುತ್ತವೆ. ಆದರೆ ಅರೆ ಬಾಲಿಶವಯಸ್ಸಿನ ಮೇಲೆ ಇಂತಹ ಸನ್ನಿವೇಶಗಳು ಏನು ಪರಿಣಾಮ ಬೀರಬಹುದು. ಇಂತಹ ಮನೋವಿಕಾರದ ವಿಷಯಗಳಿಂದ ಮಕ್ಕಳನು ಹೇಗೆ ದೂರ ಇಡಬೇಕು. ಇಬ್ಬರೂ ಕೆಲಸಕೆ ಹೋಗುವ ದಂಪತಿಗಳು ಇರುತ್ತಾರೆ ಮನೆಯಲ್ಲಿ ಟಿ. ವಿ ಇರುವದು ಸಹಜ, ಹಾಗಂತ ಮಕ್ಕಳ ಮನಸ್ಸು ಮತ್ತು ಸ್ವಭಾವ ಎಷ್ಟುಅಂತ ನಿಯಂತ್ರಿಸಲು ಸಾಧ್ಯ!!...
ಇನ್ನು ಸಾಯಂಕಾಲ ಆದರೆ ಬರುವ ಧಾರಾವಾಹಿಗಳ ಧಾರಾಕಾರವಾದ ಅನೈತಿಕತೆಯ ಪ್ರವಾಹ. ಪ್ರತಿ ಧಾರಾವಾಹಿಗಳಲಿ ಒಬ್ಬಳು ಕಲಹಗಾರ್ತಿ ಮತ್ತು ಪಿತೂರಿ ಮಾಡುವ ಹೆಣ್ಣು, ಅವಳು ಎಲ್ಲರ ಮಾತು ಯಾವಾಗಲೂ ಕೇಳಿಸಿಕೊಂಡು ದಿನಕ್ಕೊಂದು ಜಾಲ ಹೆಣೆಯುತಾಳೆ. ಅವಳ ಹತ್ತಿರ ಒಂದು ಪಿಸ್ತೂಲ್ ಇರುತ್ತದೆ, ಅವಳು ಒಂದಿಷ್ಟು ಕೊಲೆ ಮಾಡಿರುತ್ತಾಳೆ ಯಾರಿಗೂ ಗೊತ್ತಿರುವದಿಲ್ಲ... ಅಬ್ಬಾ! ಇನ್ನು ಸೇಡು ತೀರಿಸಿಕೊಳ್ಳುತ್ತಲೇ ಇರುತ್ತಾಳೆ.
- ಅತಿರೇಕದ ಕಥೆಗಳು ? ನೈಜ ಜೀವನದ ಅರಿವನ್ನು ಮಸುಕಾಗಿಸುತ್ತವೆ.?
ವಾಸ್ತವಾಗಿ ಒಂದು ಗನ್ ಅಥವಾ ಪಿಸ್ತೂಲ್ ಇಟ್ಟುಕೊಳ್ಳಬೇಕಾದರೆ ಅದಕ್ಕೆ ಹಲವಾರು ಕಾನೂನು ಕಟ್ಟಳೆ ಇರುತ್ತವೆ. ಅದು ಅಷ್ಟು ಸುಲಭದ ಕೆಲಸವಲ್ಲ!! ಆದರೆ ಅದೊಂದು ಆಟಿಕೆ ಎಂಬಂತೆ ತೋರಿಸುತ್ತಾರೆ ಅದನ್ನು ಬಳಷಲು ಟ್ರೇನಿಂಗ ಬೇಕು... ಇದರ ಅರಿವು ಇರದ ಪ್ರದರ್ಶನ.
- ಜ್ಞಾನವಿಲ್ಲದ ಪ್ರದರ್ಶನ ? ಅಪಾಯದ ಆಹ್ವಾನ!?
ಇನ್ನು ಇನ್ನೊಬ್ಬಳು ದೇವತಾ ಸ್ವರೂಪಿ ಹೆಣ್ಣು ಎಷ್ಟೇ ನೋವು ಕಷ್ಟ ದುಃಖ ಕೊಟ್ಟರು ಸಹಿಸುತ್ತಾ ಯಾರ ಮುಂದೆಯೂ ಹೇಳದೆ ಎಲ್ಲ ಸಮಸ್ಯೆ ಗೆಲ್ಲುತ್ತಾಳೆ... ವಾಸ್ತವದಲಿ ಇಂತಹ ಎರಡು ಪಾತ್ರಗಳು ಅಸ್ತಿತ್ವದಲ್ಲೆ ಇಲ್ಲ!!... ಇಂತಹ ಕಪ್ಪು ಬಿಳಪು ಪಾತ್ರಗಳ ನಡುವೆ ವಾಸ್ತವದ ವಿಷಯಗಳು ಬಣ್ಣ ಕಳೆದುಕೊಂಡವು.
ಇನ್ನು ಇದಕ್ಕೂ ಮೀರಿದ ಪುರುಷಪಾತ್ರಗಳು ಅಬ್ಬಾ!!
ಧಾರಾವಾಹಿಗಳ ಪ್ರಕಾರ ಪ್ರತಿ ಪುರುಷರಿಗೂ ಕಚೇರಿಯಲ್ಲಿ, ಮಹಿಳೆಯೊಂದಿಗೆ ಅನೈತಿಕ ಸಂಬಂಧ ಇದ್ದೆ ಇರುತ್ತದೆ.
- ಅವಿಶ್ವಾಸವನ್ನು ಬಿತ್ತುವ ಕಥೆಗಳು ? ಕುಟುಂಬಗಳನ್ನು ಕಿತ್ತು ಹಾಕುತ್ತವೆ.?
ಇಂಥ ಧಾರಾವಾಹಿ ನೋಡುವ ಮಹಿಳೆಯರು ಕೆಲಸದಿಂದ ದಣಿದು ಬಂದ ಗಂಡನಿಗೆ ಚಹಾನೀಡಿ ಉಪಚರಿಸುವ ಬದಲು ಹೊರಗೆ ಯಾರೊಡನೆ ಸುತ್ತಾಡಿ ಬಂದನೆಂದು ಸಂಶಯದಿ ಕಾಣುವಂತೆ ಮಾಡುವದು! ಇವು ಸಮಾಜಕ್ಕೆ ಏನು ಸಂದೇಶ ನೀಡುತಿವೆ!?
- ಇನ್ನು ಅತಿಯಾಗಿ ಕಾಲ್ಪನಿಕವಾಗಿ ಪ್ರೀತಿ ಮಾಡುವ ಯುವ ಜೋಡಿಗಳ ಕಲ್ಪನೆ, ಪ್ರತಿ ಸಿನೆಮಾದಲ್ಲಿ ಯಥೇಚ್ಛ ಹೊಡೆದಾಟ ಬಡೆದಾಟ ಅಷ್ಟೇ ಅಲ್ಲ ನಾಯಕ ನಾಯಕಿಯರ ಮುಕ್ತ ಮಧ್ಯಪಾನ ತೋರಿಸುವದರಿಂದ ಏನು ಬಜಲಾವಣೆ ಸಾಧ್ಯ
- ಕಲ್ಪನೆ ಮಿತಿಯಲ್ಲಿ ಇರಲಿ ? ಜೀವನ ಸತ್ಯದಲ್ಲಿ ನೆಲೆಯಾಗಲಿ!?
ಇನ್ನು ಮಕ್ಕಳ ರಿಯಾಲಿಟಿ ಶೋಗಳಲಿ ಕೂಡ ಮಕ್ಕಳಿಂದ ಸತತ ದ್ವಂದ್ವ ಅರ್ಥ ಬರುವ ಮಾತುಗಳನು ಹೇಳಿಸುವದು.... ಅಶ್ಲೀಲ ಹಾಡುಗಳಿಗೆ ಕುಣಿಸುವದು, ಹುಡುಗಿಯರನು ಪಟಾಯಿಸುವದೆ ಜೀವನದ ದೊಡ್ಡ ಅಂಶ ಎಂಬಂತೆ ತೋರಿಸುವದು ಮಕ್ಕಳಿಗೆ ಏನು ಮಾದರಿ ನೀಡುತ್ತದೆ.
ಮಕ್ಕಳು ತಮ್ಮ ಮುಗ್ಧದ ಬಾಲ್ಯದ ಅಮಾಯಕತೆ ಬಿಟ್ಟು ಅತಿ ಹಿರೀತನದ ಪ್ರಶ್ನೆ ಕೇಳುವದು ಇದೆಲ್ಲವೂ ವಾಸ್ತವವೆ!?
- ಮುಗ್ಧತೆ ಕಳೆದುಕೊಂಡ ಬಾಲ್ಯ ? ಮರಳಿ ಸಿಗದು.?
ಮರ ಎಷ್ಟೇ ಬೆಳದರೂ ಬೇರಿನೊಂದಿಗೆ ಸಂಬಂಧ ಕಳೆದುಕೊಳ್ಳಲು ಆಗುವದಿಲ್ಲ ಹೀಗೆ ನಾವು ಎಷ್ಟೇ ಆಧುನಿಕತೆ ಸಾಧಿಸಿದರೂ ನಮ್ಮ ಮೂಲ ಭಾರತೀಯತೆಯ ಸಂಪ್ರದಾಯಬಿಟ್ಟು ಸರಿಯಲು ಸಾಧ್ಯವೇ ..
ಹದಿನಾರು ವರುಷದ ಮಕ್ಕಳು ಬಂದು ನಮಗೆ ಬಾಯಫ್ರೆಂಡ ಗರ್ಲ, ಫ್ರೆಂಡ ಅಂತ ತೋರಿಸಿದರೆ ವಿದೇಶಿಯರಂತೆ ನಾವು ಅದನು ಒಪ್ಪಿಕೊಳ್ಳಲು ಸಾಧ್ಯವೇ...ಹಾಗೇ ವಿದೇಶದ ಮುಕ್ತ ವ್ಯಸನ ಮತ್ತು ಅತಿ ಸಲುಗೆಯ ಸ್ನೇಹ ಆಚರಣೆ ನಮಗೆ ಒಗ್ಗುವದಿಲ್ಲ.
- ಆಧುನಿಕತೆ ಸ್ವೀಕರಿಸೋಣ ? ಆದರೆ ಸಂಸ್ಕೃತಿ ಕಳೆದುಕೊಳ್ಳಬಾರದು!?
ಇಷ್ಟೊಂದು ಹಸಿಬಿಸಿ ಸನ್ನಿವೇಶ ಪ್ರತಿ ಸಿನೇಮಾಗಳಲ್ಲ ತೋರಿಸುವ ಅಗತ್ಯವೂಇಲ್ಲ, ಈಗಂತು ಕೈಯಲ್ಲಿ ಮೊಬೈಲ!! ಮಕ್ಕಳು ರೀಲ್ಸ್ ಹೆಸರಿನಲಿ ಏನು ನೋಡುತ್ತಾರೆ ಎಂಬುದೇ



ಗೊತ್ತಾಗುವದಿಲ್ಲ.
ಓದಿಗಾಗಿ ಮನೆಯಿಂದ ದೂರ ಇರುವ ಮಕ್ಕಳ ಕೈಗೆ ಸುರಕ್ಷತೆ ದೃಷ್ಟಿಯಿಂದ ನೀಡಿದ ಮೊಬೈಲ್ ಏನೆಲ್ಲಾ ತೋರಿಸಬಹುದು...
ಮೌಲ್ಯನೀಡದೆ ಮಕ್ಕಳ ಕೈಯಲಿ ಮೋಬೈಲ"
ಇಂದು ಒಂದು ಸ್ಕ್ರೀನ್ ತೆರೆದರೆ ಅನೇಕ ಜಗತ್ತು ಒಳನುಗ್ಗುತ್ತದೆ... ರೀಲ್ಸ್ ಎಂಬ ರಂಗಮಂಚದಲ್ಲಿ
ಕ್ಷಣಗಳೊಳಗೆ ಬಣ್ಣ ಬದಲಿಸುವ ದೃಶ್ಯಗಳು,
ಅವುಗಳ ಅರ್ಥ ತಿಳಿಯುವ ಮುನ್ನವೇ
ಮಕ್ಕಳ ಮನಸ್ಸಿನಲ್ಲಿ ಗುರುತು ಬಿಡುತ್ತವೆ...
ಒಮ್ಮೆ ಅಜ್ಜಿ ಹೇಳಿದ ಕಥೆಗಳುಮಕ್ಕಳ ಕನಸುಗಳಿಗೆ ರೂಪಕೊಡುತ್ತಿತ್ತು,ಇಂದು ಅಲ್ಗೊರಿದಮ್ ಹೇಳುವ ಕಥೆಗಳುಅವರ ಯೋಚನೆಗೆ ದಿಕ್ಕು ತೋರಿಸುತ್ತಿವೆ...
ಹಿಂದೆ ಆಟದ ಮೈದಾನದಲ್ಲಿ ಬಿದ್ದರೂ ಎದ್ದು ನಿಲ್ಲುವುದನ್ನು ಕಲಿತ ಮಕ್ಕಳು,ಇಂದು ಸೋಫಾದ ಮೇಲೆ ಕುಳಿತುಲೈಕ್–ಶೇರ್ ಗಳಲ್ಲಿ ಜಯ–ಪರಾಜಯ ಹುಡುಕುತ್ತಿದ್ದಾರೆ...
**ಪ್ರಶ್ನೆ ಇದಾಗಿದೆ ?**
**ತಂತ್ರಜ್ಞಾನ ತಪ್ಪೇ?**
ಅಥವಾ ಅದನ್ನು ಬಳಸುವ ನಮ್ಮ ಮನಸ್ಸೇ?
ಮನೋರಂಜನೆ ಎಂದರೆಮನಸ್ಸಿಗೆ ರಂಜನೆ ನೀಡಬೇಕೇ ಹೊರತು ಮನಸ್ಸನ್ನೇ ಕಳೆದುಕೊಳ್ಳುವಂತಾಗಬಾರದು...
ಮಕ್ಕಳಿಗೆ ತಡೆಯುವುದು ಮಾತ್ರ ಪರಿಹಾರವಲ್ಲ,
ತಿಳಿಸುವುದು, ಮಾತನಾಡುವುದು,ಅವರೊಂದಿಗೆ ಕಾಲ ಕಳೆಯುವುದುಇವೇ ನಿಜವಾದ ರಕ್ಷಣೆ...
ತಂದೆ ತಾಯಿ ಸಮಯ ಕೊಡದ ಜಾಗದಲ್ಲಿ
ಸ್ಕ್ರೀನ್ ಶಿಕ್ಷಕನಾಗುತ್ತದೆ,ಆದರೆ ಆ ಶಿಕ್ಷಕನಿಗೆ
ನೀತಿ, ಮಿತಿ, ಮೌಲ್ಯ ಗೊತ್ತಿರುವುದಿಲ್ಲ...
ಮರ ಬೆಳೆದಂತೆ ಬೇರು ಗಟ್ಟಿಯಾಗಿರಬೇಕು,
ಹಾಗೆಯೇ ಆಧುನಿಕತೆಯ ನಡುವೆ
ಸಂಸ್ಕಾರಗಳು ನೆಲೆಯಾಗಿರಬೇಕು...
ನಾವು ಮಕ್ಕಳಿಗೆ ಸಾಧನಗಳನ್ನು ಕೊಡುತ್ತಿದ್ದೇವಾ?
ಅಥವಾ ಅವರ ಭವಿಷ್ಯವನ್ನೇ ಒಪ್ಪಿಸುತ್ತಿದ್ದೇವಾ?

# ಭಿನ್ನ ಜೀವಿ ಭಿನ್ನ ಕರ್ಮ

**ಭಿನ್ನ ಜೀವಿ, ಭಿನ್ನ ಕರ್ಮ!**
**ಈ ಮಾತು ಎಷ್ಟು ಸತ್ಯ ಅನಸ್ತದಲ !**
**ನಮ್ಮ ಧರ್ಮ, ನಮ್ಮ ಕರ್ಮ ನಮ್ಮನ್ನು ಕಾಯ್ತದ ಇಲ್ಲ ಸಂಕಷ್ಟಕ್ಕನೂ ಈಡ ಮಾಡ್ತದ!**



ಸ್ನೇಹಾ ಆನಂದ್

ಸ್ನೇಹ ಲೋಕ

ಪ್ರತಿಯೊಬ್ಬರಿಗೂ ಅವರದೇ ಆದ ಕರ್ಮಗಳು ಇರ್ತಾವ, ಹಿಂದಿನ ಜೀವನದ್ದು ನಮ್ಮ ಕರ್ಮ ಭಾಳ ವೈಯಕ್ತಿಕ ಅದಕ್ಕ ನೋಡ್ರಿ ಈಗೀನ ಜೀವನದಾಗ ಒಬ್ಬರ ಸ್ವಭಾವ ಸರಿಯಿಲ್ಲ ಅಂದ್ರೂ ಅವರು ಸುಖದಿಂದ ಇರ್ತಾರ ಅಂದ್ರ ಅದು ಹೋದ ಜನ್ಮದ ಕರ್ಮ ಅಷ್ಟೇ ಹೊರತು ಈ ಜನ್ಮದಾಗ ಗಳಿಸಿದ್ದ ಪುಣ್ಯ ಅಲ್ಲ ಅದು!

**ಉದಾಹರಣೆಗೆ:** ಹೋದ ಜನ್ಮದಾಗ ನಾನು ಬ್ಯಾರೆ ಕುಟುಂಬದಲ್ಲಿ ಹುಟ್ಟಿರ್ತಿನಿ ಅಂತ ತಿಳೀರಿ, ಅಲ್ಲಿಯ ವಾತವರಣಕ್ಕ ತಕ್ಕ ಹಾಂಗೆ ನನ್ನ ಜೀವನ ಇರ್ತದ, ಹಿಂಗಾಗಿ ಈಗೀನ ನನ್ನ ಕುಟುಂಬದವರಿಗೆ ನನ್ನ ಹಿಂದಿನ ಕರ್ಮಕ್ಕ ಸಂಬಂಧನೇ ಇರಂಗಿಲ್ಲ, ಹಿಂಗಾಗಿ ಭಿನ್ನ ಜೀವಿ, ಭಿನ್ನ ಕರ್ಮ ಅಂತ ಅಂತ ಹೇಳಬಹುದು!

ಒಂದು ವೇಳೆ ಈ ಜನ್ಮದಾಗ ಭಾಳ ಒಳ್ಳೆಯ ಗುಣ ಹೊಂದಿದ್ರೂ ಭಾಳ ಆರೋಗ್ಯದ ಸಮಸ್ಯೆ, ಮಾನಸಿಕ ಸಮಸ್ಯೆ ಏನೇ ಇರ್ಲಿ ಅದು ನಮ್ಮನ್ನು ಕಾಡ್ತಾವ ಅಂದ್ರ ಅದು ಹೋದ ಜನ್ಮದ ಫಲ ಅಷ್ಟೇ ! ಆದ್ರೂ ಕಲಿಯುಗ ಅದ ಈಗೀನ ತಪ್ಪುಗಳೂ ಕೆಟ್ಟ ಕರ್ಮ ಆಗಿ ಕಾಡಬಹುದು ಹಿಂಗಾಗಿ ಈ ಜನ್ಮದ್ದು ಮುಂದಿನ ಜನ್ಮದಾಗ ನೋಡ್ಕೊಂಡ್ರಾಯ್ತು ಬಿಡು ಅಂತ ಹೇಳಂಗಿಲ್ಲ ಹುಷಾರ್!

ಮತ್ತ ಭಿನ್ನ ಜೀವಿ ಭಿನ್ನ ಕರ್ಮಕ್ಕೆ ವಾಪಸ್ ಬರಣ, ನಮ್ಮ ಕರ್ಮಕ್ಕ ಅನುಗುಣವಾಗಿ ಸ್ವಂತ ನಾವೇ, ಅಂದ್ರ ನಮ್ಮ ದೇಹವೇ ಅನುಭವಿಸಬೇಕು,ಅದನ್ನ ಬ್ಯಾರೆಯವ್ರು ಯಾರೂ ತಗೋಳಿಕ್ಕೆ ಬರಂಗಿಲ್ಲ!

ಹೊರಗಿನ ಕಷ್ಟಕ್ಕ ಕುಟುಂಬದವ್ರು ಆಗ್ತಾರ ಆದ್ರ ಕಾಲು ಬ್ಯಾನಿ, ಕೈ ಬ್ಯಾನಿ, ತಲಿಶೂಲಿ, ಹುಗುಳು ಕೆಮ್ಮು,ನೆಗಡಿ ಜ್ವರ, ಮೊಣಕಾಲು ಬ್ಯಾನಿ ಇಂಥಾ ನೂರೆಂಟು ಕಷ್ಟಗಳನ್ನ ನಮ್ಮ ದೇಹಾನೇ ಸ್ವತಃ ಅನುಭವಿಸಬೇಕು!

ಎಷ್ಟೇ ಜೀವಕ್ಕ ಜೀವ ಕೊಡವ್ರು ಇದ್ದಾರ ಅಂದ್ರೂ ಅವರ ಜೀವ ಬ್ಯಾರೆ ನಮ್ಮ ಜೀವ ಬ್ಯಾರೆ!

ಹಿಂಗಾಗಿ ಮತ್ತ ಹೇಳ್ತೀನಿ ಭಿನ್ನ ಜೀವಿ, ಭಿನ್ನ ಕರ್ಮ ಅಂತ ಅಂತಾರ!

ನಮ್ಮ ಆತ್ಮೀಯರದು ಕಷ್ಟ ನಮಗ ನೋಡ್ಲಿಕ್ಕ ಆಗಂಗಿಲ್ಲ ಖರೇ ಆದ್ರ ಇಂಥಾ ದೈಹಿಕ ಕಷ್ಟ ಅವರದು ಅವ್ರೆ ಅನುಭವಿಸಿ ಕರ್ಮದ ಕಷ್ಟ ಕಳ್ಕೋಬೇಕು ಅದು ಮಾತ್ರ ಖಾತ್ರಿ!

ಆಶ್ಚರ್ಯ ಅಂದ್ರ ತಲೆಶೂಲಿ ಭಾಳ ಸಣ್ಣದು ಅನಿಸ್ತದ ನಮಗೆ, ಆದ್ರ ಅದನ್ನ ಅನುಭವಿಸದವ್ರಿಗೆ ಕೇಳಬೇಕು ಗೊತ್ತಾಗ್ತದ!

ಹಂಗ ಇನ್ನೊಂದು ಅಂದ್ರ ಸ್ವಲ್ಪ ನೆಗಡಿ ಬಂದು ಮೂಗು ಬಂದಾಗಿ ರಾತ್ರಿ ನಿದ್ದಿಗೆಟ್ಟು ಸುಸ್ತಾಗಿ ಹೋಗಿರ್ತದ! ಯಪ್ಪಾ ಏನು ಬಂದ್ರೂ ಈ ನೆಗಡಿ ಬರಬಾರ್ದು ಅಂತಾರ!

ಹುಗುಳು ಆಗೋವ್ರನ್ನ ಕೇಳ್ರಿ ತುತ್ತು ಬಾಯಾಗ ಇಡ್ಲಿಕ್ಕೆ ಆಗಂಗಿಲ್ಲ ಅಂತಾರ , ಕೆಮ್ಮು ಸತಾಯಿಸುವವರನ್ನ ಕೇಳ್ರಿ, ಈ ಕೆಮ್ಮು ಯಾವ



ಶತ್ರೂಗೂ ಬ್ಯಾಡ ಬಿಡ್ರಿ ಅಂತಾರ ಹಿಂಗೆ ಅವರವರ ಕಷ್ಟ ಅವರಿಗೆ ಕರ್ಮವಾಗಿ ಕಾಡತಿರ್ತದ!

ಹಿಂಗೆ ಬೇಕಾದಷ್ಟು ದೊಡ್ಡ ಸಮಸ್ಯಗಳಂತೂ ಸರಿ, ಸಣ್ಣ, ಸಣ್ಣವು ಆದ್ರೂ ಸಾವಕಾಶ ಪ್ರಾಣ ತಿಂತಾವ! ಇನ್ನ ಈ ಅಜೀರ್ಣ( ಅಸಿಡಿಟಿ) ಬಾಧಿಸವರನ್ನ ಕೇಳ್ರಿ, ಹೇಳಲಾರದಷ್ಟು ಕಷ್ಟ ಕೊಡ್ತದ ಸಾಕಾಗಿಬಿಟ್ಟದ ಇದರ ಕಾಲಾಗ ಅಂತ ಹೇಳವ್ರೂ ಇರ್ತಾರ!

ಹಿಂಗ ನೆನಪು ಮಾಡ್ಕೊತ ಹೋದ್ರ ಭಾಳಷ್ಟು ನೆನಪು ಆಗ್ತಾವ! ಸಣ್ಣ, ಪುಟ್ಟ ಸಮಸ್ಯೆವು ಸರಮಾಲಿನ ಅದ!

ಹೆಂಗ ಹನಿ,ಹನಿ ಕೂಡಿದ್ರ ಹಳ್ಳ ಅಂತೀವಿ ಹಂಗ ಇದು ಸಣ್ಣ, ಪುಟ್ಟವು ಸೇರಿ,ಸೇರಿ ಮನಸಿಗೆ ಸಮಾಧಾನ ಇಲ್ದಂಗ ಮಾಡ್ತಾವ!

ಇವೆಲ್ಲ ಕರ್ಮಫಲಕ್ಕ ಸಂಬಂಧ ಪಟ್ಟಿದ್ದು, ಇವು ಒಬ್ಬ ವ್ಯಕ್ತಿಯ ಮ್ಯಾಲಿನ ಬಟ್ಟಿ ಇದ್ದಂಗ, ಆತನ ಮಾತ್ರ ಸಂಬಂಧ ಪಟ್ಟದ್ದು!

ಇದಕ್ಕ ಗಂಡ, ಹೆಣ್ತಿ, ಮಕ್ಕಳು ಯಾರೂ ಏನೂ ಮಾಡ್ಲಿಕ್ಕೆ ಬರಂಗಿಲ್ಲ!

ಅವರು ಸಮಯಕ್ಕ ಸರಿಯಾಗಿ ಗುಳಿಗಿ , ನೀರು, ಊಟ ಕೊಡಬಹುದು, ಸಮಾಧಾನ ಮಾಡಬಹುದು ಅಷ್ಟ ಹೊರತು ಅವರೂ ಅಸಹಾಯಕರೇ!

ಹಿಂಗಾಗಿ #ಭಿನ್ನಜೀವಿ #ಭಿನ್ನಕರ್ಮ ಅನ್ನೋ ವಿಷಯ ನಮ್ಮ ನೆನಪಿನಲ್ಲಿ ಇದ್ದು ಸಾಧ್ಯ ಆದಷ್ಟು ಒಳ್ಳೆಯ ಗುಣ ಇಟ್ಕೊಂಡು ನಡಿ ಬೇಕು ಅಷ್ಟೇ!

ಅದ ಒಂದು ಹಾದಿ ನಮ್ಮ ಕರ್ಮಗಳನ್ನ ಕಳೀಲಿಕ್ಕೆ! ನಮ್ಮ ಕಷ್ಟ ನೋವುಗಳ ಜೊತಿಗೆ ನಕ್ಕೊತ ಇರೋದು ಕಲಿಬೇಕು !

( ಉತ್ತರ ಕರ್ನಾಟಕದ ಭಾಷಾ ಅದ, ಸುಧಾರಿಸ್ಕೊಂಡು ಓದ್ರಿ)

# ರಾಜಕಾರಣಿಗಳ ದೀರ್ಘಾಯುಷ್ಯದ ಗುಟ್ಟೇನು?


ನಮ್ಮಲ್ಲಿ ಒಂದು ಸಾಮಾನ್ಯ ಮಾತಿದೆ: "ರಾಜಕಾರಣಿಗೆ ನಿವೃತ್ತಿಯೇ ಇಲ್ಲ." ಸರ್ಕಾರಿ ನೌಕರರು 60ಕ್ಕೆ ಮನೆಗೆ ಮರಳಿದರೆ, ಕ್ರೀಡಾಪಟುಗಳು 35ಕ್ಕೇ ಮೈದಾನ ಬಿಟ್ಟರೆ, ರಾಜಕಾರಣಿಗಳು ಮಾತ್ರ 70, 80, ಅಷ್ಟೇ ಏಕೆ 90ರ ಹರೆಯದಲ್ಲೂ ಚುನಾವಣಾ ಕಣದಲ್ಲಿ ಅಬ್ಬರಿಸುತ್ತಿರುತ್ತಾರೆ. ಈ ದೈಹಿಕ ಚೈತನ್ಯ ಮತ್ತು ಮಾನಸಿಕ ಜಾಗರೂಕತೆಯ ಹಿಂದಿರುವ ರಹಸ್ಯವೇನು? ಇದು ಕೇವಲ ಅಧಿಕಾರದ ಹಸಿವೇ ಅಥವಾ ಅವರ ಜೀವನಶೈಲಿಯಲ್ಲಿ ಅಡಗಿರುವ ಯಾವುದೋ ವಿಶೇಷ ಸೂತ್ರವೇ? ಈ ಪ್ರಶ್ನೆಗೆ ಉತ್ತರ ಹುಡುಕ ಹೊರಟರೆ ನಮಗೆ ಆಸಕ್ತಿದಾಯಕ ಅಂಶಗಳು ಗೋಚರಿಸುತ್ತವೆ.

1. **ಜೀವನದ 'ಉದ್ದೇಶ' ಮತ್ತು ಮಾನಸಿಕ ದೃಢತೆ /** ಮನೋವಿಜ್ಞಾನದ ಪ್ರಕಾರ, ಒಬ್ಬ ವ್ಯಕ್ತಿಯ ಆಯಸ್ಸು ಅವನ ಜೀವನದ ಗುರಿಯನ್ನು ಅವಲಂಬಿಸಿರುತ್ತದೆ. ರಾಜಕಾರಣಿಗಳಿಗೆ ಪ್ರತಿದಿನವೂ ಒಂದು ಹೊಸ ಸವಾಲು. ಬೆಳಿಗ್ಗೆ ಎದ್ದ ತಕ್ಷಣ "ಇವತ್ತು ಯಾರನ್ನು ಭೇಟಿ ಮಾಡಬೇಕು?", "ಯಾವ ಸಮಸ್ಯೆಯನ್ನು ಬಗೆಹರಿಸಬೇಕು?", "ವಿರೋಧಿಗಳ ಟೀಕೆಗೆ ಹೇಗೆ ಉತ್ತರಿಸಬೇಕು?" ಎಂಬ ಆಲೋಚನೆಗಳು ಅವರ ಮಿದುಳನ್ನು ಸದಾ 'ಬ್ಯುಸಿ'ಯಾಗಿಡುತ್ತವೆ. ಜಪಾನೀಯರ 'ಇಕಿಗಾಯ್' (Ikigai) ತತ್ವದಂತೆ, ಬದುಕಲಿಕ್ಕೊಂದು ಬಲವಾದ ಕಾರಣವಿದ್ದಾಗ ಶರೀರವು ಅದಕ್ಕೆ ಪೂರಕವಾಗಿ ಸ್ಪಂದಿಸುತ್ತದೆ. ರಾಜಕಾರಣಿಗಳಲ್ಲಿ ಈ 'ಬದುಕುವ ಇಚ್ಛಾಶಕ್ತಿ' (ಘುಟಟ ಣಂ ಟುತಿಜ) ಸಾಮಾನ್ಯರಿಗಿಂತ ಹೆಚ್ಚಿರುತ್ತದೆ. ಸೋಲು–ಗೆಲುವುಗಳ ನಡುವೆ ಅವರು ಬೆಳೆಸಿಕೊಳ್ಳುವ 'ಸ್ಥಿತಪ್ರಜ್ಞೆ' ಅವರ ಮಾನಸಿಕ ಆರೋಗ್ಯಕ್ಕೆ ರಕ್ಷಾಕವಚವಾಗುತ್ತದೆ.
2. ಭಾರತೀಯ ರಾಜಕಾರಣದ 'ಫಿಟ್ನೆಸ್' ಮಾದರಿಗಳು : ಭಾರತದ ಇಂದಿನ ರಾಜಕೀಯ ಭೂಪಟವನ್ನು ಗಮನಿಸಿದರೆ, ವಯಸ್ಸನ್ನು ಕೇವಲ ಒಂದು ಸಂಖ್ಯೆಯನ್ನಾಗಿ ಮಾಡಿದ ಅನೇಕ ನಾಯಕರಿದ್ದಾರೆ.

- **ನರೇಂದ್ರ ಮೋದಿ:** ಯೋಗ ಮತ್ತು ಶಿಸ್ತಿನ ಪ್ರತೀಕ



75ರ ಹರೆಯದ ಪ್ರಧಾನಿ ನರೇಂದ್ರ ಮೋದಿಯವರ ಕಾರ್ಯಕ್ಷಮತೆ ಜಗತ್ತಿಗೇ ತಿಳಿದಿದೆ. ದಿನದ 18 ಗಂಟೆಗಳ ಕಾಲ ಕೆಲಸ ಮಾಡುವ ಇವರ ಶಕ್ತಿಯ ಮೂಲ ಯೋಗ ಮತ್ತು ಪ್ರಾಣಾಯಾಮ.
**ಆಹಾರ ಕ್ರಮ:** ಅತ್ಯಂತ ಸರಳ ಶಾಖಾಹಾರಿ ಆಹಾರ, ಮಿತವಾದ ಊಣಿಸು ಇವರ ದೈನಂದಿನ ಸೂತ್ರ.
**ಶಿಸ್ತು:** ಎಷ್ಟೇ ತಡವಾಗಿ ಮಲಗಿದರೂ ಮುಂಜಾನೆ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಯೋಗಾಭ್ಯಾಸ ಮಾಡುವುದು ಅವರ ದೈಹಿಕ ಗಡಿಯಾರವನ್ನು (Biological Clock) ಅತ್ಯುತ್ತಮವಾಗಿ ಇರಿಸಿದೆ.
- **ಎಚ್.ಡಿ. ದೇವೇಗೌಡ:** 92 ವರ್ಷದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಇಂದಿನವರೆಗೂ



ಸಂಸತ್ತಿನಲ್ಲಿ ಸಕ್ರಿಯರಾಗಿದ್ದಾರೆ. ರೈತಾಪಿ ಜೀವನದ ಹಿನ್ನೆಲೆಯಿಂದ ಬಂದ ಅವರಿಗೆ ಕಷ್ಟಪಟ್ಟು ಕೆಲಸ ಮಾಡುವುದು ರಕ್ತದಲ್ಲೇ ಬಂದಿದೆ. ಇಂದಿಗೂ ರಾಜ್ಯಾದ್ಯಂತ ಪ್ರವಾಸ ಮಾಡುವುದು ಅವರ ದೈಹಿಕ ಸಾಮರ್ಥ್ಯಕ್ಕೆ ಸಾಕ್ಷಿ.
- **ಮಲ್ಲಿಕಾರ್ಜುನ ಖರ್ಗೆ:**



83 ವರ್ಷದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ದಶಕಗಳಿಂದ ಚುನಾವಣಾ ರಾಜಕಾರಣದಲ್ಲಿದ್ದಾರೆ. ಪ್ರತಿದಿನವೂ ನೂರಾರು ಜನರನ್ನು ಭೇಟಿ ಮಾಡುವುದು, ಸಾರ್ವಜನಿಕ ಸಭೆಗಳಲ್ಲಿ ಗಂಟೆಗಟ್ಟಲೆ ಮಾತನಾಡುವುದು ಅವರಿಗೆ ದಣಿವನ್ನೇ ತರುವುದಿಲ್ಲ. ಅವರ ಬೌದ್ಧಿಕ ಚುರುಕುತನ ಮತ್ತು ನೆನಪಿನ ಶಕ್ತಿ ಇಂದಿಗೂ ಅಚ್ಚರಿ ತರಿಸುವಂತಿದೆ.

3. **ಜಾಗತಿಕ ವೇದಿಕೆಯ 'ಶತಾಯುಷಿ' ರಾಜಕಾರಣಿಗಳು:** ಭಾರತ ಮಾತ್ರವಲ್ಲದೆ, ಜಾಗತಿಕವಾಗಿಯೂ ಹಿರಿಯ ರಾಜಕಾರಣಿಗಳು ತಮ್ಮ ಪ್ರಭಾವ ಬೀರಿದ್ದಾರೆ.

**ಡಾ. ಮಹಾತಿರ್ ಮೊಹಮ್ಮದ್ (ಮಲೇಷ್ಯಾ)**



100ನೇ ವರ್ಷಕ್ಕೆ ಕಾಲಿಟ್ಟಿರುವ ಮಲೇಷ್ಯಾದ ಮಾಜಿ ಪ್ರಧಾನಿ ಮಹಾತಿರ್ ಮೊಹಮ್ಮದ್ ಅವರು ಜಗತ್ತಿನ ಹಿರಿಯ ರಾಜಕಾರಣಿಗಳಲ್ಲಿ ಅಗ್ರಗಣ್ಯರು. ಇವರು ನೀಡುವ ಸರಳ ಕಿವಿಮಾತು: "ಅತಿಯಾಗಿ ತಿನ್ನಬೇಡಿ." ಮಿದುಳು ಸಕ್ರಿಯವಾಗಿರಲು ಓದುವುದು ಮತ್ತು ಬರೆಯುವುದನ್ನು ಎಂದಿಗೂ ಬಿಡಬಾರದು ಎಂಬುದು ಇವರ ನಂಬಿಕೆ. ಸ್ನಾಯುಗಳು ಕೆಲಸ ಮಾಡದಿದ್ದರೆ ಅವು ಹೇಗೆ ಕ್ಷೀಣಿಸುತ್ತವೆಯೋ, ಮಿದುಳೂ ಹಾಗೆಯೇ ಎಂದು ಅವರು ಎಚ್ಚರಿಸುತ್ತಾರೆ.


**ಡೊನಾಲ್ಡ್ ಟ್ರಂಪ್ (ಅಮೆರಿಕ) :** 79ರ



ಹರೆಯದಲ್ಲೂ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾದ ಟ್ರಂಪ್ ಅವರ ಶಕ್ತಿ ಅಸಾಧಾರಣವಾದುದು. ಸತತವಾಗಿ ಸಭೆಗಳನ್ನು ನಡೆಸುವುದು, ಗಂಟೆಗಟ್ಟಲೆ ಭಾಷಣ ಮಾಡುವುದು ಇವರ ಗುಣ. ವಿಜಯದ ಕಡೆಗಿನ ಇವರ ತೀವ್ರವಾದ ಆಕಾಂಕ್ಷೆಯೇ ಇವರನ್ನು ದೈಹಿಕವಾಗಿ ಸಕ್ರಿಯವಾಗಿರಿಸಿದೆ ಎನ್ನಲಾಗುತ್ತದೆ.

4. **ದೀರ್ಘಾಯುಷ್ಯದ ಹಿಂದಿನ ವೈಜ್ಞಾನಿಕ ಮತ್ತು ಸಾಮಾಜಿಕ ರಹಸ್ಯಗಳು**

ಅ) ನಿರಂತರ ಬೌದ್ಧಿಕ ಚಟುವಟಿಕೆ (Cognitive Engagement) ರಾಜಕೀಯವೆಂದರೆ ಕೇವಲ ಭಾಷಣವಲ್ಲ. ಅಲ್ಲಿ ನಿರಂತರವಾಗಿ ಕಾನೂನುಗಳ ಓದು, ಅಂಕಿ–ಅಂಶಗಳ ವಿಶ್ಲೇಷಣೆ ಮತ್ತು ತಂತ್ರಗಾರಿಕೆ ಇರುತ್ತದೆ. ಈ ರೀತಿಯ ಬೌದ್ಧಿಕ ಕಸರತ್ತು ಮೆದುಳಿನ ಕೋಶಗಳನ್ನು ಸಜೀವವಾಗಿರಿಸುತ್ತದೆ. ಇದು ವಯಸ್ಸಾದಂತೆ ಕಂಡುಬರುವ 'ಡಿಮೆನ್ಶಿಯಾ' ಅಥವಾ 'ಅಲ್ಝೈಮರ್ಸ್' ನಂತಹ ಕಾಯಿಲೆಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.



ಆ) ಸಾಮಾಜಿಕ ಬೆಂಬಲ (Social Connection) ಒಂಟಿತನವು ಆರೋಗ್ಯಕ್ಕೆ ಶತ್ರು. ಆದರೆ ರಾಜಕಾರಣಿಗಳು ಸದಾ ಜನರ ನಡುವೆ ಇರುತ್ತಾರೆ. ಕಾರ್ಯಕರ್ತರು, ಅಭಿಮಾನಿಗಳು ಮತ್ತು ಸಾರ್ವಜನಿಕರೊಂದಿಗಿನ ಒಡನಾಟವು ಅವರಲ್ಲಿ "ತಾನು ಈ ಸಮಾಜಕ್ಕೆ ಬೇಕಾದವನು" ಎಂಬ ಆತ್ಮವಿಶ್ವಾಸ ಮೂಡಿಸುತ್ತದೆ. ಈ ಭಾವನೆಯು ದೇಹದಲ್ಲಿ ಎಂಡಾರ್ಫಿನ್ ಮತ್ತು ಡೋಪಮೈನ್‌ನಂತಹ 'ಹ್ಯಾಪಿ ಹಾರ್ಮೋನ್'ಗಳನ್ನು ಬಿಡುಗಡೆ ಮಾಡಿ ಆರೋಗ್ಯವನ್ನು ವೃದ್ಧಿಸುತ್ತದೆ.

ಇ) ಆಹಾರ ಮತ್ತು ವೈದ್ಯಕೀಯ ಜಾಗೃತಿ ಸಾಮಾನ್ಯವಾಗಿ ಹಿರಿಯ ರಾಜಕಾರಣಿಗಳು ಅತ್ಯಂತ ಶಿಸ್ತಿನ ಆಹಾರ ಕ್ರಮವನ್ನು ಅನುಸರಿಸುತ್ತಾರೆ. ಸಕ್ಕರೆ, ಉಪ್ಪು ಮತ್ತು ಎಣ್ಣೆಯುಕ್ತ ಪದಾರ್ಥಗಳಿಂದ ದೂರವಿರುವುದು, ಸ್ಥಳೀಯವಾಗಿ ಬೆಳೆದ ತಾಜಾ ತರಕಾರಿ ಮತ್ತು ಹಣ್ಣುಗಳನ್ನು ಸೇವಿಸುವುದು ಅವರ ಹವ್ಯಾಸ. ಇದರ ಜೊತೆಗೆ, ಅವರಿಗೆ ಲಭ್ಯವಿರುವ ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳು ಸಣ್ಣ ಆರೋಗ್ಯ ಸಮಸ್ಯೆಯನ್ನೂ ಆರಂಭದಲ್ಲೇ ಗುರುತಿಸಿ ಗುಣಪಡಿಸಲು ಸಹಕಾರಿಯಾಗುತ್ತವೆ.

ಈ) ಒತ್ತಡ ನಿರ್ವಹಣೆ (Stress Management) ರಾಜಕೀಯ ಎಂದರೆ ಟೀಕೆಗಳ ಮಳೆ. ಒಬ್ಬ ಯಶಸ್ವಿ ಮತ್ತು ದೀರ್ಘಕಾಲದ ರಾಜಕಾರಣಿಗೆ ಟೀಕೆಗಳನ್ನು ಹೇಗೆ ನಿರ್ಲಕ್ಷಿಸಬೇಕು ಎಂಬುದು ತಿಳಿದಿರುತ್ತದೆ. ಈ 'ಮಾನಸಿಕ ಸ್ಥಿರತೆ' ಅವರ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ಯಾವುದನ್ನೂ ವೈಯಕ್ತಿಕವಾಗಿ ತೆಗೆದುಕೊಳ್ಳದೆ, ಕರ್ತವ್ಯವೆಂದು ಭಾವಿಸಿ ಮುನ್ನಡೆಯುವುದು ಅವರ ಸ್ರವಿಸುವ ಹಾರ್ಮೋನುಗಳ ಸಮತೋಲನವನ್ನು ಕಾಪಾಡುತ್ತದೆ.

5. ಸಮಾಜಕ್ಕೆ ಇದು ನೀಡುವ ಸಂದೇಶವೇನು? ರಾಜಕಾರಣಿಗಳ ಈ ಸುದೀರ್ಘ ಸಕ್ರಿಯ ಜೀವನವು ನಮಗೆ ಕೆಲವು ಪ್ರಮುಖ ಪಾಠಗಳನ್ನು ಕಲಿಸುತ್ತದೆ:

1. **ನಿವೃತ್ತಿ ಎಂದರೆ ವಿಶ್ರಾಂತಿಯಲ್ಲ:** ಜೀವನದ ಕೊನೆಯವರೆಗೂ ಯಾವುದಾದರೂ ಒಂದು ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಆರೋಗ್ಯಕ್ಕೆ ಅತ್ಯಗತ್ಯ.
2. **ಶಿಸ್ತು ಎಂಬುದು ಸ್ವಾತಂತ್ರ್ಯ:** ಸರಿಯಾದ ಸಮಯಕ್ಕೆ ಆಹಾರ, ನಿದ್ರೆ ಮತ್ತು ವ್ಯಾಯಾಮವು ನಮ್ಮ ದೇಹಕ್ಕೆ ನಾವೇ ನೀಡುವ ಗೌರವ.
3. **ಸಮತೋಲಿತ ಮನಸ್ಥಿತಿ:** ಸೋಲು ಮತ್ತು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಗುಣವು ದೀರ್ಘಾಯುಷ್ಯಕ್ಕೆ ಅಡಿಪಾಯ.

ರಾಜಕಾರಣಿಗಳ ದೀರ್ಘಾಯುಷ್ಯವು ಕೇವಲ ಅವರ ಅಧಿಕಾರದ ಫಲವಲ್ಲ, ಬದಲಿಗೆ ಅವರ ಜೀವನಪ್ರೀತಿ ಮತ್ತು ಅಚಲವಾದ ಶಿಸ್ತಿನ ಪ್ರತಿಫಲ. ವಯಸ್ಸು ಎನ್ನುವುದು ಕೇವಲ ನಮ್ಮ ಪಾಸ್‌ಪೋರ್ಟ್‌ನಲ್ಲಿರುವ ದಿನಾಂಕವಷ್ಟೇ; ನಮ್ಮ ಮನಸ್ಸು ಯುವಕನಂತೆ ಹಂಬಲಿಸಿದರೆ ಮತ್ತು ದೇಹವು ಆ ಹಂಬಲಕ್ಕೆ ಪೂರಕವಾದ ಶಿಸ್ತನ್ನು ರೂಢಿಸಿಕೊಂಡರೆ, ಪ್ರತಿಯೊಬ್ಬರೂ ರಾಜಕಾರಣಿಗಳಂತೆಯೇ ದೀರ್ಘಕಾಲದವರೆಗೆ ಸಕ್ರಿಯ ಮತ್ತು ಉಪಯುಕ್ತ ಜೀವನವನ್ನು ನಡೆಸಬಹುದು.

ನಮ್ಮ ಹಿರಿಯ ರಾಜಕಾರಣಿಗಳು ಈ ನಿಟ್ಟಿನಲ್ಲಿ ನಮಗೆ ಜೀವಂತ ಪಾಠಪುಸ್ತಕಗಳಾಗಿದ್ದಾರೆ. ಅವರ ಸಿದ್ಧಾಂತಗಳ ಮೇಲೆ ನಮಗೆ ಭಿನ್ನಾಭಿಪ್ರಾಯಗಳಿರಬಹುದು, ಆದರೆ ಅವರ 'ದೈಹಿಕ ಮತ್ತು ಮಾನಸಿಕ ಚೈತನ್ಯ' ಮಾತ್ರ ಖಂಡಿತವಾಗಿಯೂ ಗೌರವಾರ್ಹ ಮತ್ತು ಅನುಕರಣೀಯ.



ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,